ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 14 | ಸಂಚಿಕೆ 20 | ಮೇ 11-17, 2020 | ಪುಟ 16 | ರೂ. 10/-


web: www.janashakthi.co.in e-mail : js_weekly@yahoo.com



ಮೋದಿ ಸರ್ಕಾರಕ್ಕೆ ವಲಸೆ ಕಾರ್ಮಿಕರು ನಾಗರಿಕರೇ ಅಲ್ಲ!



ಮಹಾಮಾರಿಯ ಬದಲು ಕಾರ್ಮಿಕರ ವಿರುದ್ಧ ಸಮರ





ಲಾಕ್‌ಡೌನ್ : ಮುಂದಿನ ಅಗತ್ಯ ಆರ್ಥಿಕ ಕ್ರಮಗಳು

ನಗ್ನಕ್ರೌರ್ಯ ನಿಲ್ಲಿಸಲು ಮಧ್ಯಪ್ರವೇಶಿಸಿ - ರಾಷ್ಟ್ರಪತಿಗಳಿಗೆ ಪತ್ರ

'ರೊಟ್ಟಿ ಮತ್ತು ಕೋವಿ'



ವಿಶಾಖಪಟ್ಟಣಂ ಅನಿಲ ಸೋರಿಕೆಯ ಅಪರಾಧಿಗಳನ್ನು ಶಿಕ್ಷಿಸಬೇಕು

ವಿಶಾಖಪಟ್ಟಣಂನ ಎಲ್ ಜಿ ಪೊಲಿಮೊರ್ಸ್‍ನ ಸ್ಥಾವರದಲ್ಲಿ ಮಾರಣಾಂತಿಕ ಅನಿಲ ಸೋರಿಕೆ ದಿಗಿಲುಂಟು ಮಾಡಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಇದುವರೆಗೆ ಹತ್ತಕ್ಕಿಂತಲೂ ಹೆಚ್ಚು ಮಂದಿ ಸಾವಪ್ಪಿದ್ದಾರೆ, ಸುಮಾರು ಒಂದು ಸಾವಿರಕ್ಕೂ ಹೆಚ್ಚು ಮಂದಿಯನ್ನು ಅಸ್ಪತ್ರೆಗೆ ಸೇರಿಸಬೇಕಾಗಿ ಬಂದಿದೆ. ಸಾವುಗಳ ಸಂಖ್ಯೆ ಏರುವ ಸಂಭವ ಇದೆ ಎಂದು ಆಸ್ಪತ್ರೆ ಅಧಿಕಾರಿಗಳು ಹೇಳುತ್ತಿದ್ದಾರೆ.

ಈ ಅಪಘಾತ ಈ ಕಂಪನಿಂು ಮ್ಯಾನೇಜ್‍ಮೆಂಟಿನ ಕ್ರಿಮಿನಲ್ ನಿರ್ಲಕ್ಷ್ಯದ ಒಂದು ಸ್ಪಷ್ಟ ಪ್ರಕರಣ. ಲಾಕ್‍ಡೌನ್ ನಿರ್ಬಂಧಗಳನ್ನು ಸಡಿಲಗೊಳಿಸಿದ ನಂತರ ಮುಚ್ಚಿದ್ದ ಸ್ಥಾವರವನ್ನು ತೆರಯುವ ಮೊದಲು ಎಲ್ಲ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲಾಗಿತ್ತೇ ಎಂದು ಸರಿಯಾದ ತನಿಖೆ ನಡೆಯಬೇಕಾಗಿದೆ.

ದಟ್ಟ ಹೊಗೆಯ ನಡುವೆ ಜನಗಳು ತಮ್ಮ ಮನೆಗಳಿಂದ ಹೊರಗೆ ಧಾವಿಸುತ್ತಿದ್ದುದು ಕಂಡು ಬಂದಿದೆ. ಸಾವುಗಳು ಮುಖ್ಯವಾಗಿ ಉಸಿರುಗಟ್ಟಿದುದರಿಂದ ಆಗಿವೆ. ಬಾಧಿತ ಜನಗಳನ್ನು ಶುಶ್ರೂಷೆಗೆ ಒಯ್ಯಲು ಮಧ್ಯಪ್ರವೇಶಿಸುವಲ್ಲಿ ಜಿಲ್ಲಾ ಆಡಳಿತ ವಿಫಲವಾಗಿದೆ ಎಂದು ವರದಿಯಾಗಿದೆ.

ತಕ್ಷಣವೇ ಒಂದು ನ್ಯಾಯಾಂಗ ತನಿಖೆಯನ್ನು ಸಮಯಬದ್ಧ ರೀತಿಯಲ್ಲಿ ನಡೆಸಬೇಕಾಗಿದೆ, ತಪ್ಪಿತಸ್ಥರನ್ನು ಶಿಕ್ಷಿಸಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ. ಎಲ್ ಜಿ ಪೊಲಿಮರ್ಸ್ ನ ಮ್ಯಾನೇಜ್‍ಮೆಂಟನ್ನು ದಂಡನೀಯಗೊಳಿಸಬೇಕು, ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು. ಜೀವ ಕಳಕೊಂಡವರ ಕುಟುಂಬಗಳಿಗೆ ರೂ.50 ಲಕ್ಷ ಪರಿಹಾರ ವಕೊಡಬೇಕು, ಮತ್ತು ಗಾಯಗೊಂಡವರಿಗೂ ಸೂಕ್ತ ಪರಿಹಾರ ಒದಗಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಆದಾಯವೇ ಇಲ್ಲದವರಿಂದ ಟಿಕೆಟ್ ಹಣ ವಸೂಲಿ ಕ್ರೌರ್ಯವಲ್ಲದೆ ಬೇರೇನೂ ಅಲ್ಲ–ಕೇಂದ್ರ ಸರಕಾರವೇ ಸಮಸ್ತ ವೆಚ್ಚ ಹೊರಬೇಕು

ಲಾಕ್ ಡೌನಿನ ಮೂರನೇ ಘಟ್ಟದ..ಷರತ್ತುಗಳ ವಿವರಗಳನ್ನು ಕೊಟ್ಟಿರುವ ಗೃಹ ಮಂತ್ರಾಲಯದ ಸುತ್ತೋಲೆ ವಲಸೆ ಕಾರ್ಮಿಕರನ್ನು ಅವರ ಮನೆಗಳಿಗೆ ಒಯ್ಯಲು ರೈಲುಗಳು ಚಲಿಸುವುದಕ್ಕೆ ಅನುಮತಿ ನೀಡಿದೆ. ಆದರೆ ಆಘಾತಕಾರಿ ಸಂಗತಿಯೆಂದರೆ, ಕೇಂದ್ರ ಸರಕಾರ ಮತ್ತೊಮ್ಮೆ ರಾಜ್ಯ ಸರಕಾರಕ್ಕೆ ನಿರ್ದೇಶನಗಳನ್ನು ಕೊಟ್ಟಿದೆಯೇ ಹೊರತು ಅದರ ಯಾವುದೇ ಹಣಕಾಸು ಜವಾಬ್ದಾರಿಗಳನ್ನು ತೆಗೆದುಕೊಳ್ಳಲು ನಿರಾಕರಿಸಿದೆ. ಇದು ಆಘಾತಕಾರಿ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್‍ಬ್ಯುರೊ ಖಂಡಿಸಿದೆ.

ವಿವಿಧೆಡೆಗಳಿಂದ ಮನೆಗೆ ಹಿಂದಿರುಗಲು ರೈಲು ಹತ್ತಿದ ವಲಸೆ ಕಾರ್ಮಿಕರು ಟಿಕೆಟುಗಳಿಗೆ ಮತ್ತು ಆಹಾರಕ್ಕೆ ಕೂಡ ಹಣ ತೆರುವಂತೆ ಬಲವಂತ ಮಾಡಲಾಗಿದೆ. ಬಸ್ ಹತ್ತಿದದವರಿಂದ ಪ್ರಯಾಣಕ್ಕೆ ವಿಪರೀತ ದರಗಳನ್ನು ವಸೂಲಿ ಮಾಡಲಾಗಿದೆ. ಲಾಕ್ ಡೌನಿನಿಂದಾಗಿ ಕಳೆದ ಎರಡು ತಿಂಗಳಿಂದ ಏನೇನೂ ಆದಾಯವಿಲ್ಲದವರು ಅವರವರ ರೈಲು ಟಿಕೆಟುಗಳಿಗೆ ಹಣ ತೆರಬೇಕು ಎಂದು ನಿರೀಕ್ಷಿಸುವುದು ಕ್ರೌರ್ಯವಲ್ಲದೆ ಬೇರೇನೂ ಅಲ್ಲ. ರಾಜ್ಯ ಸರಕಾರಗಳೂ, ಕೇಂದ್ರ ಸರಕಾರದಿಂದ ಏನೊಂದೂ ಸಹಾಯ ಪಡೆಯದಿರುವಾಗ, ಈ ವೆಚ್ಚವನ್ನು ವಹಿಸಬೇಕು ಎಂದೂ ಕೇಳುವಂತಿಲ್ಲ.

ವಲಸೆ ಕಾರ್ಮಿಕರು ಎಲ್ಲೂ ಹೋಗಲಾರದೆ ಉಳಿಯಬೇಕಾದ್ದು ಅವರ ತಪ್ಪಿನಿಂದ ಅಲ್ಲ, ಬದಲಾಗಿ ಕೇಂದ್ರ ಸರಕಾರ ಕೇವಲ ನಾಲ್ಕು ಗಂಟೆಗಳ ನೋಟೀಸಿನಲ್ಲೇ ಲಾಕ್‍ಡೌನ್ ಹೇರಿದ್ದರಿಂದಾಗಿ. ಆದ್ದರಿಂದ ತಮ್ಮ ಮನೆಗಳಿಗೆ ಹೋಗಬಯಸುವ ವಲಸೆ ಕಾರ್ಮಿಕರ ಸಮಸ್ತ ವೆಚ್ಚಗಳನ್ನೂ ಕೇಂದ್ರ ಸರಕಾರವೇ ಹೊರಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ. ರಾಜ್ಯದೊಳಗೆ ಅವರ ಸುರಕ್ಷಿತ ಪ್ರಯಾಣದ ವ್ಯವಸ್ಥೆಗಳನ್ನೆಲ್ಲ ಸಂಬಂಧಪಟ್ಟ ರಾಜ್ಯ ಸರಕಾರಗಳು ಮಾಡಬೇಕು ಎಂದು ಅದು ಹೇಳಿದೆ.

16 ವಲಸೆ ಕಾರ್ಮಿಕರ ಸಾವಿನ ದುರಂತ: ಕೇಂದ್ರ ಸರಕಾರದ ಕ್ರಿಮಿನಲ್ ನಿರ್ಲಕ್ಷ್ಯದ ಫಲಿತಾಂಶ

ಮಹಾರಾಷ್ಟ್ರದ ಜಾಲ್ನಾದಿಂದ ತಮ್ಮೂರುಗಳಿಗೆ ಹೊರಟಿದ್ದ 16 ವಲಸೆ ಕಾರ್ಮಿಕರ ದುರಂತಮಯ ಸಾವಿನ ಸುದ್ದಿ ಆಘಾತ ಮತ್ತು ಸಂಕಟವನ್ನು ಉಂಟುಮಾಡುವಂತದ್ದು. ಅವರು ಮಧ್ಯಪ್ರದೇಶದ ಶಾದೊಲ್ ಜಿಲ್ಲೆಯಲ್ಲಿರುವ ತಮ್ಮ ಹಳ್ಳಿಯತ್ತ ನಡೆದು ಸಾಗಿದ್ದರು. ಈ ಅದೃಷ್ಟಹೀನ ಕಾರ್ಮಿಕರು ನಡೆದು ಸುಸ್ತಾಗಿ ರೈಲ್ವೆ ಹಳಿಗಳ ಮೇಲೆಯೇ ನಿದ್ದೆ ಹೋಗಿದ್ದಾಗ ಮೇ 8ರ ಮುಂಜಾನೆ 5.30ರ ಹೊತ್ತಿಗೆ ಈ ದುರಂತ ನಡೆದಿದೆ ಎಂದು ವರದಿಯಾಗಿದೆ.

ಇದು ಒಂದು ಆಕಸ್ಮಿಕ ಸಾವಲ್ಲ, ವಲಸೆ ಕಾರ್ಮಿಕರ ಹೀನಾಯ ಸ್ಥಿತಿ ಮತ್ತು ಅಸಹನೀಯ ಹತಾಶೆಯ ಬಗ್ಗೆ ಕೇಂದ್ರ ಸರಕಾರದ ಕ್ರಿಮಿನಲ್ ನಿರ್ಲಕ್ಷ್ಯದ ಫಲಿತಾಂಶ ಇದು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಒಂದು ತಿಂಗಳಿಗೂ ಹೆಚ್ಚು ಕಾಲ ರೈಲುಗಳನ್ನು ಓಡಿಸಲು ನಿರಾಕರಣೆ, ನಂತರ ಕಾರ್ಮಿಕರ ಬಳಿ ಬದುಕುಳಿಯಲು ಹಣವಾಗಲೀ, ಆಹಾರವಾಗಲೀ ಇಲ್ಲದಿರುವಾಗ ತಮ್ಮ ಮನೆಗಳಿಗೆ ಹೋಗಲು ಟಿಕೇಟ್ ದರ ವಸೂಲಿಗೆ ಇಳಿದಿರುವುದು ಇಂತಹ ದುರಂತಗಳಿಗೆ ಕಾರಣವಾಗಿದೆ.

ಈ ದುರಂತ ಪ್ರಾಣ ಹೀರಿರುವ ಆ 16 ಮಂದಿಯಲ್ಲಿ ಹೆಚ್ಚಿನವರು ಬುಡಕಟ್ಟು ಜನಗಳಾಗಿರುವುದು ನಮ್ಮ ಬಹುಪಾಲು ಜನಗಳು ಎದುರಿಸುತ್ತಿರುವ ಆಳವಾದ ಸಾಮಾಜಿಕ ಮತ್ತು ಆರ್ಥಿಕ ವಿಭಜನೆ ಹಾಗೂ ಅಸಮಾನತೆಗಳನ್ನು ಎತ್ತಿ ತೋರಿದೆ. ಸರಕಾರ ಒಂದು ತನಿಖೆ ನಡೆಸುತ್ತದೆ ಎಂದು ವರದಿಯಾಗಿದೆ. ಇದು ಈ ಅಪಘಾತವನ್ನು ತಾಂತ್ರಿಕ ಅಂಶಗಳಿಗೆ ಸೀಮಿತಗೊಳಿಸುವ ಒಂದು ಕಣ್ಣೊರೆಸುವ ಕೆಲಸ ಅಷ್ಟೇ.

ಸರಕಾರ ವಲಸೆ ಕಾರ್ಮಿಕರ ಹೀನಾಯ ಸ್ಥಿತಿಯ ಬಗ್ಗೆ ತನ್ನ ದೂಷಣಾರ್ಹ ಜಡ ನಿಲುವನ್ನು ಬಿಡಬೇಕು, ಅವರಿಂದ ಯಾವುದೇ ಹಣ ವಸೂಲಿ ಮಾಡದೆ ಊರುಗಳಿಗೆ ತಲುಪಿಸಲು ವ್ಯವಸ್ಥೆಯನ್ನು ಕೈಗೊಳ್ಳಬೇಕು, ಪ್ರತಿಯೊಬ್ಬ ವಲಸೆ ಕಾರ್ಮಿಕರಿಗೆ ಮೂರು ತಿಂಗಳ ಕಾಲ ತಿಂಗಳಿಗೆ ರೂ.7500 ರಂತೆ ನಗದು ಬೆಂಬಲ ಒದಗಿಸಬೇಕು ಮತ್ತು ಎಲ್ಲರಿಗೂ ಉಚಿತ ರೇಷನ್ ಹಂಚಬೇಕು ಎಂಬ ಆಗ್ರಹವನ್ನು ಸಿಪಿಐ(ಎಂ) ಪುನರುಚ್ಚರಿಸಿದೆ. ದೇಶಕ್ಕೆ ಆಘಾತ ಉಂಟು ಮಾಡಿರುವ ದುರಂತವನ್ನು ಶಮನ ಮಾಡಲು ಕನಿಷ್ಟ ಇಷ್ಟಾದರೂ ಮಾಡಬೇಕು. ಸತ್ತಿರುವವರ ಕುಟುಂಬಗಳಿಗೆ ಮತ್ತು ಗಾಯಗೊಂಡವರಿಗೆ ಸರಕಾರ ಸಾಕಷ್ಟು ಪರಿಹಾರ ಮೊತ್ತವನ್ನು ಕೊಡಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ವಾಶಿಂಗ್ಟನ್‍ನಲ್ಲಿ ಕ್ಯೂಬಾ ರಾಯಭಾರ ಕಚೇರಿಯ ಮೇಲೆ ದಾಳಿ

ಅಮೆರಿಕಾದ ರಾಜಧಾನಿ ವಾಶಿಂಗ್ಟನ್ ನಲ್ಲಿರುವ ಕ್ಯೂಬಾದ ರಾಯಭಾರ ಕಚೇರಿಯ ಮೇಲೆ ಎಪ್ರಿಲ್ 30ರಂದು ದಾಳಿ ನಡೆದಿದೆ. ಒಬ್ಬ ಅಪರಿಚಿತ ಬಂದೂಕುಧಾರಿ ಅಸಾಲ್ಟ್ ರೈಫಲ್ ನಿಂದ ರಾಯಭಾರ ಕಚೇರಿಯ ಮೇಲೆ ಗುಂಡು ಹಾರಿಸಿದ. ಕ್ಯೂಬಾದ ಭದ್ರತಾ ವ್ಯವಸ್ಥೆಯಿಂದಾಗಿ ಯಾವ ರಾಜತಾಂತ್ರಿಕರಿಗೂ ಗಾಯಗಳಾಗಿಲ್ಲ. ಸಿಪಿಐ(ಎಂ) ಈ ದಾಳಿಯನ್ನು ಖಂಡಿಸಿದೆ.

ವಿಯೆನ್ನಾ ಅಧಿನಿರ್ಣಯದ ಪ್ರಕಾರ, ರಾಯಭಾರ ಮಿಶನ್‍ಗಳ ರಕ್ಷಣೆ ಸಂಬಂಧಪಟ್ಟ ದೇಶದ, ಅಂದರೆ ಇಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಜವಾಬ್ದಾರಿ. ಆದರೆ ಅಮೆರಿಕನ್ ಸರಕಾರ ಕ್ಯೂಬಾದ ರಾಯಭಾರ ಕಚೇರಿಗೆ ಈ ರಕ್ಷಣೆಯನ್ನು ಒದಗಿಸುವಲ್ಲಿ ವಿಫಲವಾಗಿದೆ. ಅಮೆರಿಕನ್ ಸರಕಾರದ ಅಧಿಕಾರಿಗಳು ಇದುವರೆಗೆ ಕ್ಯೂಬಾ ರಾಯಭಾರ ಕಚೇರಿಯನ್ನು ಸಂಪರ್ಕಿಸಿಲ್ಲ, ಈ ದಾಳಿಯನ್ನು ಖಂಡಿಸುವ ಅಧಿಕೃತ ಹೇಳಿಕೆಯನ್ನೂ ನೀಡಿಲ್ಲ.

ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಮೈಕ್ ಪೊಂಪಿಯೊ ಮತ್ತು ಅಧ್ಯಕ್ಷ ಡೊನಾಲ್ಡ್ ಟ್ರಂಪ್‍ರವರ ಧೋರಣೆಗಳು ಮತ್ತು ವೈಷಮ್ಯ ತುಂಬಿರುವ ಅಬ್ಬರಗಳ ಫಲಿತಾಂಶವಾಗಿ ಈ ದಾಳಿ ನಡೆದಿದೆ. ಎಂದು ಸಿಪಿಐ(ಎಂ) ಹೇಳಿದೆ.

ಕ್ಯೂಬಾ ಕೊವಿಡ್–19 ಮಹಾಮಾರಿಯ ವಿರುದ್ಧ ಈಗಿನ ಹೋರಾಟದಲ್ಲಿ ಮುಂಚೂಣಿಯಲ್ಲಿ ನಿಂತು ನೇತೃತ್ವ ನೀಡುತ್ತಿರುವ ಸಂದರ್ಭದಲ್ಲಿ ಈ ದಾಳಿ ನಡೆದಿದೆ. ಕ್ಯೂಬಾದ ವೈದ್ಯಕೀಯ ತಂಡಗಳು ಈಗ ಯುರೋಪ್, ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾ ಖಂಡದ 59 ದೇಶಗಳಲ್ಲಿ ಸೇವಾ ನಿರತವಾಗಿವೆ. ಬೊಲಿವಿಯಾದಲ್ಲಿ ನಡೆದಂತೆ, ಇಂತಹ ವೈದ್ಯಕೀಯ ಸಿಬ್ಬಂದಿಯ ಮೇಲೂ ದಾಳಿಗಳು ನಡೆಯುತ್ತಿದ್ದು, ಇದರಲ್ಲಿ ಅಮೆರಿಕಾದ ಪಾತ್ರಕ್ಕೆ ಸಾಕಷ್ಟು ದಾಖಲೆಗಳ ಪುರಾವೆಗಳಿವೆ.

ಕ್ಯೂಬಾದ ವಿರುದ್ಧ ಅಮಾನವೀಯ ಆರ್ಥಿಕ ದಿಗ್ಬಂಧನಗಳನ್ನು ಖಂಡಿಸಿ ವಿಶ್ವಸಂಸ್ಥೆ ಹಲವಾರು ನಿರ್ಣಯಗಳನ್ನು ಕೈಗೊಂಡಿದೆ. ಇವನ್ನೆಲ್ಲ ಅಮೆರಿಕನ್ ಸರಕಾರ ಗೌರವಿಸಬೇಕು, ಆರ್ಥಿಕ ದಿಗ್ಬಂಧನವನ್ನು ತಕ್ಷಣವೇ ಹಿಂತೆಗೆದು ಕೊಳ್ಳಬೇಕು ಮತ್ತು ಎಲ್ಲ ನಿರ್ಬಂಧಗಳನ್ನು ರದ್ದು ಮಾಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಕ್ಯೂಬಾದ ವಿರುದ್ಧ ದಾಳಿಗಳನ್ನು ನಡೆಸಲು ಅಮೆರಿಕಾವನ್ನು ನೆಲೆಯಾಗಿ ಬಳಸಿಕೊಳ್ಳುತ್ತಿರುವ ಎಲ್ಲ ವ್ಯಕ್ತಿಗಳು ಮತ್ತು ಗುಂಪುಗಳನ್ನು ಹೊರಹಾಕುವ ಕ್ರಮಗಳನ್ನು ಅಮೆರಿಕನ್ ಸರಕಾರ ಕೈಗೊಳ್ಳಬೇಕು ಎಂದಿರುವ ಸಿಪಿಐ(ಎಂ), ಪ್ರಸಕ್ತ ಮಹಾಮಾರಿಯ ವೇಳೆಯಲ್ಲಿ ಜಗತ್ತಿನ ಜನಗಳಿಗೆ ಉದಾತ್ತ ಸೇವೆ ಸಲ್ಲಿಸುತ್ತಿರುವ ಸಮಾಜವಾದಿ ಕ್ಯೂಬ ಮತ್ತು ಅಲ್ಲಿಯ ಜನತೆಯೊಂದಿಗೆ ತನ್ನ ಸೌಹಾರ್ದವನ್ನು ಪುನರುಚ್ಚರಿಸಿದೆ.

ವೆನೆಜುವೆಲಾದ ಒಳಕ್ಕೆ ಹಠಾತ್ ಸಶಸ್ತ್ರದಾಳಿ–ಸಿಪಿಐ(ಎಂ) ಖಂಡನೆ

ವೆನೆಜುವೆಲಾದ ಪ್ರಜಾಸತ್ತಾತ್ಮಕವಾಗಿ ಚುನಾಯಿತವಾದ ಸರಕಾರವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ಕೊಲಂಬಿಯಾದಿಂದ ವೆನೆಜುವೆಲಾದ ಒಳಕ್ಕೆ ಮೇ 3 ರಂದು ಹಠಾತ್ ಸಶಸ್ತ್ರ ದಾಳಿಯನ್ನು ನಡೆಸಿರುವುದನ್ನು ಸಿಪಿಐ(ಎಂ) ಖಂಡಿಸಿದೆ.

ಎರಡು ದಿವಗಳಿಂದ ಸೇಸ್ ಬಾಡಿಗೆ ಸೈನಿಕರ ಎರಡು ಗುಂಪುಗಳು ವೆನೆಜುವೆಲಾದ ಒಳಕ್ಕೆ ನುಸುಳಲು ಪ್ರಯತ್ನ ನಡೆಸಿದವು. ಇವು ವೆನೆಜುವೆಲಾದ ಒಳಗಿನ ಅಮೆರಿಕಾ ಬೆಂಬಲಿತ ವಿರೋಧಿಗಳಿಗಾಗಿ ಕೆಲಸ ಮಾಡುತ್ತಿರುವ ಅಮೆರಿಕಾದ ಭದ್ರತಾ ಏಜೆನ್ಸಿಯೊಂದರಿಂದ ತರಬೇತಿ ಪಡೆದ ಗುಂಪುಗಳು. ಎಚ್ಚರದಿಂದಿದ್ದ ವೆನೆಜುವೆಲಾದ ಭದ್ರತಾ ಪಡೆಗಳವರಿಗೆ ತ್ವರಿತವಾಗಿ ನುಸುಳುಕೋರರನ್ನು ತಡೆದು ಅವರ ಯೋಜನೆಯನ್ನು ವಿಫಲಗೊಳಿಸಲು ಸಾಧ್ಯವಾಗಿದೆ. ಭದ್ರತಾ ಏಜೆನ್ಸಿಗಳು ಕಲೆ ಹಾಕಿರುವ ಅಪಾರ ಸಾಕ್ಷ್ಯಗಳು ಈ ಸಶಸ್ತ್ರ ನುಸುಳುಕೋರರು

ಪುಟ 15 ನೋಡಿ

ಮಹಾಮಾರಿ ಮತ್ತು ಲಾಕ್‍ಡೌನ್ ನೆಪವೊಡ್ಡಿ ಕಾರ್ಮಿಕರ ಹಕ್ಕುಗಳ ದಮನದ ಪ್ರಯತ್ನ ನಗ್ನ ಕ್ರೌರ್ಯವನ್ನು ನಿಲ್ಲಿಸಲು ತುರ್ತಾಗಿ ಮಧ್ಯಪ್ರವೇಶಿಸಲು ರಾಷ್ಟ್ರಪತಿಗಳಿಗೆ ಮನವಿ

ಏಳು ರಾಜಕೀಯ ಪಕ್ಷಗಳ ಮುಖಂಡರು ಮೇ 8 ರಂದು ರಾಷ್ಟ್ರಪತಿಗಳಿಗೆ ಒಂದು ಪತ್ರ ಬರೆದು ಕೋಟ್ಯಂತರ ಭಾರತೀಯ ಕಾರ್ಮಿಕ ವರ್ಗದ ಮತ್ತು ದುಡಿಯುವ ಜನಗಳ ಭದ್ರತೆ, ಕಲ್ಯಾಣ, ಜೀವನೋಪಾಯ ಮತ್ತು ಭವಿಷ್ಯಕ್ಕೆ ಸಂಬಂಧಪಟ್ಟ ಕಾಳಜಿಗಳನ್ನು ಎತ್ತಿದ್ದಾರೆ. ಕೇಂದ್ರದಲ್ಲಿನ ಸರಕಾರ ಮತ್ತು ಕೆಲವು ರಾಜ್ಯ ಸರಕಾರಗಳು ನಮ್ಮ ಆರೋಗ್ಯ ಸೌಲಭ್ಯಗಳನ್ನು ಹೆಚ್ಚಿಸಿಕೊಂಡು ಮತ್ತು ನಮ್ಮ ಡಾಕ್ಟರುಗಳು ಮತ್ತು ಆರೋಗ್ಯ ಕಾರ್ಯಕರ್ತರನ್ನು ಕಾಪಾಡಿಕೊಂಡು ಹಾಗೂ ಜನಗಳ ಅಗತ್ಯಗಳ ಬಗ್ಗೆ ಕಾಳಜಿ ವಹಿಸಿ ಮಹಾಮಾರಿಯ ವಿರುದ್ಧ ಸಮರದ ಮೇಲೆ ಗಮನ ಕೇಂದ್ರೀಕರಿಸುವ ಬದಲು ಕಾರ್ಮಿಕ ಹಕ್ಕುಗಳನ್ನು ದುರ್ಬಲಗೊಳಿಸುವ ತರ್ಕವನ್ನು ಬಳಸುವಂತೆ ಕಾಣುತ್ತದೆ ಎಂದು ಈ ಪತ್ರದಲ್ಲಿ ಹೇಳಿರುವ ಈ ಮುಖಂಡರು ಕಾರ್ಮಿಕರು ಭಾರತೀಯ ಸಂವಿಧಾನದ ಅಡಿಯಲ್ಲಿ ಗುಲಾಮರಲ್ಲ. ಅವರನ್ನು ಈ ಮಟ್ಟಕ್ಕೆ ಇಳಿಸುವುದು ಸಂವಿಧಾನದ ಉಲ್ಲಂಘನೆಯಷ್ಟೇ ಅಲ್ಲ, ಅದನ್ನು ನಿರರ್ಥಕಗೊಳಿಸಿದಂತೆಯೇ ಎಂಬ ಸಂಗತಿಯನ್ನು ರಾಷ್ಟ್ರಪತಿಗಳ ಗಮನಕ್ಕೆ ತಂದಿದ್ದಾರೆ.

ಪತ್ರದ ಕೊನೆಯಲ್ಲಿ "ನೀವು ಭಾರತದ ರಾಷ್ಟ್ರಪತಿಗಳಾಗಿ ಅಧಿಕಾರ ಸ್ವೀಕರಿಸುವಾಗ ತೆಗೆದುಕೊಂಡ ಪ್ರತಿಜ್ಞೆಗೆ ವಿಧೇಯರಾಗಿ, ಈ ಮಹಾಮಾರಿಯನ್ನು ಎದುರಿಸುವಲ್ಲಿ ಮತ್ತು ಸೋಲಿಸುವಲ್ಲಿ ನಮ್ಮ ಎಲ್ಲ ಜನಗಳ ಐಕ್ಯತೆ ನಮ್ಮ ಅತಿ ದೊಡ್ಡ ಶಕ್ತಿಯಾಗಿರಬೇಕಾದ ಈ ನಿರ್ಣಾಯಕ ತಿರುವಿನಲ್ಲಿ, ಕಾರ್ಮಿಕ ವರ್ಗ ಮತ್ತು ದುಡಿಯುವ ಜನಗಳ ವಿರುದ್ಧ ಇಂತಹ ನಗ್ನ ಕ್ರೌರ್ಯವನ್ನು ನಿಲ್ಲಿಸಲು ತುರ್ತಾಗಿ ಮಧ್ಯಪ್ರವೇಶಿಸಬೇಕು" ಎಂದು ಮನವಿ ಮಾಡಿಕೊಂಡಿದ್ದಾರೆ.

ಸೀತಾರಾಮ್ ಯೆಚುರಿ, ಡಿ.ರಾಜ, ದೀಪಂಕರ್ ಭಟ್ಟಾಚಾರ್ಯ, ದೇಬಬ್ರತ ಬಿಸ್ವಾಸ್ ಮತ್ತು ಮನೋಜ್ ಭಟ್ಟಚಾರ್ಯ ಅನುಕ್ರಮವಾಗಿ ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)–ಎಲ್, ಎಐಎಫ್‍ಬಿ ಮತ್ತು ಆರ್ ಎಸ್ ಪಿ ಯ ಪ್ರಧಾನ ಕಾರ್ಯದರ್ಶಿಗಳು, ಹಾಗೂ ಆರ್‍ಜೆಡಿಯ ಸಂಸತ್ ಸದಸ್ಯ ಮನೋಜ್ ಝಾ ಮತ್ತು ವಿಸಿಕೆ ಅಧ್ಯಕ್ಷರು ಮತ್ತು ಸಂಸತ್ ಸದಸ್ ಡಾ. ಥೋಲ್ ತಿರುಮಾವಳವನ್ ಈ ಪತ್ರಕ್ಕೆ ಸಹಿ ಹಾಕಿರುವ ಮುಖಂಡರು. ಈ ಪತ್ರದ ಪೂರ್ಣ ಪಾಟವನ್ನು ಪುಟ 14ರಲ್ಲಿ ನೋಡಿ.

ಸಂಪಾದಕೀಯ

ಆಶಾ, ಅಂಗನವಾಡಿ ನೌಕರರನ್ನು ಕಾಯಂ ಮಾಡಿ

ಆಶಾ, ಅಂಗನವಾಡಿ, ಪೌರ ನೌಕರರು, ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವ ಆರೋಗ್ಯ ಕಾರ್ಯಕರ್ತರ ಸೇವೆ ಎಷ್ಟು ಅಮೂಲ್ಯವಾದುದು ಎಂಬುದನ್ನು ಈ ಭಯಂಕರವಾದ ಕೊರೊನಾ ರೋಗ ತೋರಿಸಿಕೊಟ್ಟಿದೆ. ತಮ್ಮ ಜೀವದ ಹಂಗು ತೊರೆದು ಸೋಂಕಿತರ ಸೇವೆಯಲ್ಲಿ ನಿರತರಾದ ಇವರು ಮತ್ತು ಇನ್ನೂ ಇತರರು ನಿಜವಾಗಿಯೂ ಕೊರೋನಾ ವೀರರು. ಇವರೆಲ್ಲರಿಗೂ ನಾವು ತಲೆ ಬಾಗಿ ನಮಿಸಬೇಕು.

ಆಶಾ, ಅಂಗನವಾಡಿ ನೌಕರರ ನಿಗದಿತ ಕೆಲಸವೇ ಬೇರೆ. ಆದರೆ ಸರ್ಕಾರ ಅವರನ್ನು ಯಾವ ಕೆಲಸಕ್ಕಾದರೂ ಬಳಸಿಕೊಳ್ಳುತ್ತದೆ. ಈಗ ಅವರನ್ನು ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸುವ ಕೆಲಸ ನೀಡಲಾಗಿದೆ. ಇವರಿಗೆ ಯಾವುದೇ ವ್ಯಕ್ತಿಗತ ರಕ್ಷಣಾ ಪರಿಕರಗಳನ್ನು ವಿತರಿಸಲಾಗಿಲ್ಲ. ಸುಡುಸುಡುವ ಬಿಸಿಲಿನಲ್ಲಿ ಅವರು ಈ ಸಮೀಕ್ಷಾ ಕೆಲಸವನ್ನು ಪೂರೈಸಬೇಕು. ಇವರ ಮೇಲೆ ಹಲ್ಲೆಗಳಾದಾಗ ಅವರಿಗೆ ರಕ್ಷಣೆ ಇಲ್ಲ. ಊಟ ಉಪಹಾರದ ವ್ಯವಸ್ಥೆ ಇಲ್ಲ. ತಮ್ಮ ಹಸುಗೂಸುಗಳನ್ನು ಮನೆಯಲ್ಲಿ ಬಿಟ್ಟು ಬರಬೇಕಾಗುತ್ತದೆ. ಇವರೂ ಸಹ ಈ ಮಾರಣಾಂತಿಕ ವೈರಾಣು ದಾಳಿಗೆ ಯಾವ ಕ್ಷಣದಲ್ಲೂ ಬಲಿಯಾಗಬಹುದು. ಸೋಂಕಿತರ ಸಂಖ್ಯೆ ಮತ್ತು ಸಾವಿಗೀಡಾಗುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಇತರರ ಜೀವ ರಕ್ಷಿಸಲು ಶ್ರಮಿಸುತ್ತಿರುವ ವಿವಿಧ ಇಲಾಖೆಗಳ ನೌಕರರಿಗೆ ಸಿಗುತ್ತಿರುವುದೇನು?

ಆಶಾ ಕಾರ್ಯಕರ್ತೆಯರಿಗೆ ನೀಡಲಾಗುತ್ತಿರುವ ಮಾಸಿಕ ವೇತನ ಕೇವಲ ರೂ. 4000. ಈ ಮೊತ್ತವೂ ಸಹ ಪ್ರತಿ ತಿಂಗಳು ತಪ್ಪದೆ ವಿತರಣೆಯಾಗುವುದಿಲ್ಲ. ಕಳೆದ ಒಂದು ವರ್ಷದಿಂದ ಅವರಿಗೆ ವೇತನ ಸಂದಾಯ ಆಗಿಯೇ ಇಲ್ಲ. ಪ್ರತಿಸಲ ಹೋರಾಟ ಮಾಡಿ ಅವರು ತಮ್ಮ ಸಂಬಳ ಪಡೆಯುತ್ತಾರೆ. ಅಂಗನವಾಡಿ ನೌಕರರು (ಬಹುತೇಕ ಮಹಿಳೆಯರು) ಅನೇಕ ಚಾರಿತ್ರಿಕ ಹೋರಾಟಗಳನ್ನು ಮಾಡಿ ತಮ್ಮ ವೇತನವನ್ನು ರೂ. 8000 ಕ್ಕೆ ಹೆಚ್ಚಿಸಿಕೊಂಡಿದ್ದಾರೆ. ಇದು ವೇತನ ಎಂದು ಸರ್ಕಾರ ಒಪ್ಪಿಕೊಂಡಿಲ್ಲ. ಇದು ಗೌರವ ಧನ! ಆಶಾ, ಅಂಗನವಾಡಿ, ಬಿಸಿಯೂಟ ನೌಕರರು ಕೇವಲ ಸ್ಕೀಮ್ ವರ್ಕರ್ಸ್. ಅವರಿಗೆ ಕನಿಷ್ಠ ವೇತನ ಇಲ್ಲ. ಯಾವುದೇ ಕಾರ್ಮಿಕ ಕಾನೂನುಗಳು ಅವರಿಗೆ ಅನ್ವಯವಾಗುವುದಿಲ್ಲ., ಏಕೆಂದರೆ ಅವರು ಸರ್ಕಾರಿ ನೌಕರರಲ್ಲ. ನೋಡಿ, ಕರ್ನಾಟಕ ಸರ್ಕಾರದ ಕಾರ್ಮಿಕ ಧೋರಣೆ! ಕೊರೊನದಂತಹ ಪರಿಸ್ಥಿತಿ ಬಂದಾಗ ಇವರು ಬೇಕು. ಇವರ ಸೇವೆಯನ್ನು ಕಾಯಂ ಮಾಡಿ ಅವರನ್ನು ಸರ್ಕಾರಿ ನೌಕರರೆಂದು ಘೋಷಿಸಲು ಕರ್ನಾಟಕ ಸರ್ಕಾರ ತಯಾರಿಲ್ಲ.

ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವ ನೌಕರರಿದ್ದಾರೆ. ಇವರಲ್ಲಿ 50,000 ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಪೌರ ಕಾರ್ಮಿಕರಿದ್ದಾರೆ. ಬೆಂಗಳೂರು ನಗರ ವೊಂದರಲ್ಲೇ 20,000 ಗುತ್ತಿಗೆ ಪೌರ ನೌಕರರಿದ್ದಾರೆ. ಕೊರೊನಾ ಇವರ ಪಾಲಿಗೆ ಅತ್ಯಂತ ಅಪಾಯಕಾರಿಯಾಗಿದೆ. ಸೋಂಕಿನ ವಿರುದ್ಧದ ಸೆಣಸಾಟಕ್ಕೆ ಎದೆಯೊಡ್ಡಿ ನಿಂತಿರುವವರು ಇವರು. ರೋಗ ಹರಡುವುದನ್ನು ತಡೆಯುವುದಕ್ಕಾಗಿ ಬೀದಿಗಳನ್ನು ಇನ್ನಷ್ಟು ಸ್ವಚ್ಛವಾಗಿಡಲು ಕೆಲಸ ಮಾಡುವವರು ಇವರು. ಇವರಿಗೇನೋ ಸರ್ಕಾರ ಅನ್ವಯ ಮಾಡಿದ ಕನಿಷ್ಠ ಕೂಲಿ ಅನ್ವಯವಾಗುತ್ತದೆ. ಆದರೆ ಅದನ್ನು ಜಾರಿ ಮಾಡುವ ಆಸಕ್ತಿ ಸರ್ಕಾರಕ್ಕೆ ಇಲ್ಲವಲ್ಲ. ಇವರಂತೆ ಕೆಲಸಮಾಡುವ ಸುಮಾರು 20,000 ಪೌರ ನೌಕರರು ಕಾಯಂ ಎಂದು ಪರಿಗಣಿಸಲ್ಪಟ್ಟಿದ್ದಾರೆ. ಅವರಿಗೊಂದು ಕೂಲಿ, ಇವರಿಗೊಂದು ಕೂಲಿ! ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಕಾನೂನು ನಿರ್ದೇಶನವನ್ನು ಸರ್ಕಾರವೇ ಗಾಳಿಗೆ ತೂರಿದೆ.

ಆಸ್ಪತ್ರೆಗಳಲ್ಲಿ, ಆರೋಗ್ಯ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ದಾದಿಯರು, ಸಹಾಯಕರು ಮೊದಲಾದ ಹೊರಗುತ್ತಿಗೆ ನೌಕರರಿದ್ದಾರೆ. ಇದೊಂದು ತುರ್ತು ಸೇವೆ. ಸರ್ಕಾರ ಕರೆಕೊಟ್ಟರೆ ಇವರು ಕೆಲಸಕ್ಕೆ ಹಾಜರಾಗಲೇ ಬೇಕು. ಸಕಾರಣ ಇದ್ದು ಗೈರು ಹಾಜರಾದರೆ ಕೆಲಸದಿಂದ ವಜಾಗೊಳ್ಳುವ ಶಿಕ್ಷೆ. ಕೊರೊನಾ ರೋಗಿಗಳ ಸೇವೆಯಲ್ಲಿ ಇವರು ನಿರ್ವಹಿಸಿದ ಪಾತ್ರ ಅಮೋಘವಾದದು. ತಮ್ಮ ಜೀವವನ್ನು ಅಪಾಯಕ್ಕೊಡ್ಡಿ ಇತರರ ಜೀವ ರಕ್ಷಿಸಲು ಹಗಲು–ರಾತ್ರಿ ಶ್ರಮಿಸುತ್ತಿರುವ ಅವರ ಬದ್ಧತೆ ನಿಜಕ್ಕೂ ಮೆಚ್ಚುವಂಥದ್ದು. ವಾರಗಟಲೆ ಮನೆಗೆ ಹೋಗದೆ, ಕುಟುಂಬದ ಸದಸ್ಯರನ್ನು ಭೇಟಿಯಾಗದೆ ಹಗಲಿರುಳು ಕಾರ್ಯನಿರ್ವಹಿಸಿದ್ದಾರೆ.

ಸರ್ಕಾರ ಈಗಲಾದರೂ ಯಾವುದೇ ಪ್ರಚಾರ ಬಯಸದೆ, ಸಾಯಲು ಸಿದ್ಧರಾಗಿ ಶ್ರಮಿಸಿದ ಆಶಾ, ಅಂಗನವಾಡಿ, ಪೌರ ಗುತ್ತಿಗೆ ಕಾರ್ಮಿಕರು, ಗುತ್ತಿಗೆ ಆರೋಗ್ಯ ಕಾರ್ಯಕರ್ತರು, ಆಂಬ್ಯುಲೆನ್ಸ್ ಚಾಲಕರು ಮೊದಲಾದ ನಾಡಿನ ಕಣ್ಮಣಿಗಳ ಸೇವೆಯನ್ನು ಗೌರವಿಸಿ ಅವರ ಸೇವೆಯನ್ನು ಕಾಯಂ ಮಾಡಲಿ ಎಂದು ಆಶಿಸೋಣ. ಅವರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಲಿ. ಅವರ ಕಣ್ಣೀರು ಒರೆಸಲು ಮುಂದಾಗಲಿ. ಸರ್ಕಾರ ಒಬ್ಬ ಮಾದರಿ ಮಾಲಿಕನಾಗಲಿ.

ರಾಜ್ಯವನ್ನು ವೈರಾಣುವಿನ ಸಂಕಷ್ಟದಿಂದ ಮತ್ತು ಆರ್ಥಿಕ ದುಸ್ಥಿತಿಯಿಂದ ಪಾರುಮಾಡಲು ಕೂಡಲೇ ಸಮಗ್ರ ಯೋಜನೆಯೊಂದನ್ನು ರೂಪಿಸಿ

ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರಕಾರ,

ಮಾನ್ಯರೇ,

ಕರೋನಾ ವೈರಾಣು ಸೋಂಕಿತರ ಸಂಖ್ಯೆಯು ನಿಯಂತ್ರಣಕ್ಕೆ ಬಾರದ ಹಿನ್ನೆಲೆಯಲ್ಲಿ ರಾಜ್ಯವನ್ನು ಹಸಿರು, ಆರೆಂಜ್ ಹಾಗೂ ಕೆಂಪು ವಲಯಗಳಾಗಿ ಗುರುತಿಸಿ ಲಾಕ್ ಡೌನ್ ನ್ನು ಇನ್ನೂ ಹದಿನೈದು ದಿನಗಳಿಗೆ ವಿಸ್ಥರಿಸಿದ್ದೀರಿ. ಖಂಡಿತಾ, ವೈರಾಣು ನಿಯಂತ್ರಿಸುವ ಕಾರಣದಿಂದ ಲಾಕ್ ಡೌನ್ ವಿಸ್ಥರಣೆಯನ್ನು ಬೆಂಬಲಿಸುವುದು ಅನಿವಾರ್ಯವಾಗಿದೆ.

ಆದರೇ, ಸಿಪಿಐಎಂ ಪಕ್ಷ ವೈರಾಣು ನಿಯಂತ್ರಣಕ್ಕೆ ಮತ್ತಷ್ಟು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತೆ ಮತ್ತು ಪೂರ್ವ ಯೋಜನೆ ಇಲ್ಲದೇ ಲಾಕ್ ಡೌನ್ ಘೋಷಿಸಿದ್ದರ ಪರಿಣಾಮ ಎದುರಿಸಲು ಹಲವು ಆರ್ಥಿಕ ಕ್ರಮಗಳನ್ನು ಕೈಗೊಳ್ಳುವಂತೆ ಈಗಾಗಲೇ ಹಲವು ಪತ್ರಗಳನ್ನು ಬರೆದು ಒತ್ತಾಯಿಸಿದುದು ತಮ್ಮ ಗಮನಕ್ಕಿದೆಯೆಂದು ಸಿಪಿಐಎಂ ಭಾವಿಸಿದೆ.

ಆದರೇ, ವಾಸ್ತವದಲ್ಲಿ ತಾವು ಕೈಗೊಂಡ ಕ್ರಮಗಳು ಇಂತಹ ಸಂಕಷ್ಟಕರ ಸಮಯದಲ್ಲೂ ಅಸಮರ್ಪಕವಾಗಿವೆ ಮತ್ತು ಯೋಜನಾ ರಹಿತವಾಗಿರುವವೆಂದು ತಿಳಿಸಲೇ ಬೇಕಾಗಿದೆ. ಪರಿಣಾಮವಾಗಿ, ರಾಜ್ಯದ ಜನತೆ ಲಾಕ್ ಡೌನ್ ಅವಧಿಯ ವಿಸ್ಥರಣೆಯನ್ನು ಎದುರಿಸ ಬೇಕಾಗಿ ಬಂದಿದೆ. ಹಾಗೂ ಅದಾಗಲೇ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವ ರಾಜ್ಯ ಮತ್ತಷ್ಟು ಸಂಕಷ್ಟಕ್ಕೀಡಾಗುವಂತಾಗಿದೆ.

ರಾಜ್ಯ ಸರಕಾರ ಕೇಂದ್ರ ಸರಕಾರದ ನೆರವಿನೊಂದಿಗೆ ಈಗಲೂ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳದೇ ಹೋದರೇ, ಮುಂದೆಯೂ ಲಾಕ್ ಡೌನ್ ವಿಸ್ಥರಿಸಬೇಕಾದ ದುಸ್ಥಿತಿ ಮುಂದುವರೆಯ ಬಹುದಾಗಿದೆ ಮತ್ತು ರಾಜ್ಯ ಅತ್ಯಂತ ಕೆಟ್ಟ ಆರ್ಥಿಕ ಸಂಕಷ್ಟವನ್ನು ಎದುರಿಸ ಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ಮರಳಿ ಈ ಪತ್ರದ ಮೂಲಕ ತಮ್ಮ ಗಮನವನ್ನು ಸೆಳೆಯುತ್ತಿದ್ದೇವೆ.

ಮತ್ತು ಇದುವರೆಗೆ ತಾವು ಕೈಗೊಂಡ ಕ್ರಮಗಳು ಮತ್ತು ವೆಚ್ಚಗಳು ಹಾಗೂ ಕೇಂದ್ರ ಸರಕಾರದಿಂದ ಪಡೆದ ಸಹಾಯಗಳನ್ನು ಬಹಿರಂಗ ಪಡಿಸಬೇಕು.

ಅದೇ ರೀತಿ, ರಾಜ್ಯವನ್ನು ವೈರಾಣುವಿನ ಸಂಕಷ್ಟದಿಂದ ಮತ್ತು ಆರ್ಥಿಕ ದುಸ್ಥಿತಿಯಿಂದ ಪಾರುಮಾಡಲು ಕೂಡಲೇ ಸಮಗ್ರ ಯೋಜನೆಯೊಂದನ್ನು ರೂಪಿಸಿ ಪ್ರಕಟಿಸಲು ಸಿಪಿಐಎಂ ರಾಜ್ಯ ಸಮಿತಿ ಒತ್ತಾಯಿಸುತ್ತದೆ.

1) ರಾಜ್ಯದ ಕೋವಿಡ್ – 19 ನ್ನು ಮತ್ತಷ್ಟು ಪರಿಣಾಮ ಕಾರಿಯಾಗಿ ನಿಯಂತ್ರಿಸಲು ರಾಜ್ಯದಾದ್ಯಂತ ವ್ಯಾಪಕವಾದ ಆರೋಗ್ಯ ತಪಾಸಣೆಗೆ ಕ್ರಮ ವಹಿಸಬೇಕು. ವೈದ್ಯರು, ಆರೋಗ್ಯ ಸಿಬ್ಬಂಧಿಗಳಿಗೆ ಅಗತ್ಯವಿರುವಷ್ಟು ಪಿಪಿಇ ಹಾಗೂ ಮತ್ತಿತರೆ ಸುರಕ್ಷತಾ ಕ್ರಮಗಳು ಲಭ್ಯವಿರುವಂತೆ ಕ್ರಮವಹಿಸಬೇಕು. ಕೋವಿಡ್ – 19 ರ ವಿರುದ್ದ ನೇರ ಹೋರಾಟದಲ್ಲಿ ತೊಡಗಿದ ಇವರಿಗೆ ರಿಸ್ಕ್ ವೇತನವನ್ನು ಹೆಚ್ಚಿಸಲು ಕ್ರಮವಹಿಸಬೇಕು.
2) ವಿವಿಧ ರಾಜ್ಯಗಳಿಂದ ರಾಜ್ಯಕ್ಕೆ ಆಗಮಿಸಿದ ಅತಿಥಿ ಕಾರ್ಮಿಕರು ಮತ್ತು ಆರೋಗ್ಯ ಸೌಲಭ್ಯ ಪಡೆಯಲು ಬಂದು ಲಾಕ್ ಡೌನ್ ಸಿಲುಕಿದ ನಾಗರೀಕ ಕುಟುಂಬಗಳನ್ನು ಈ ಕೂಡಲೇ ಅವರ ಸ್ವ ರಾಜ್ಯಗಳಿಗೆ ತೆರಳಲು ಕೇರಳ ಮಾದರಿಯಲ್ಲಿ ಸಾರಿಗೆ ಮತ್ತು ಪ್ರಯಾಣ ವೆಚ್ಚವನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳೇ ಭರಿಸಬೇಕು. ಈಗ ಪಡೆಯಲಾಗುತ್ತಿರುವ ದುಬಾರಿ ಪ್ರಯಾಣ ವೆಚ್ಚವನ್ನು ತಕ್ಷಣವೇ ರದ್ದು ಪಡಿಸಬೇಕು. ಇದೇ ಮಾದರಿಯನ್ನು ರಾಜ್ಯದೊಳಗಿನ ವಿವಿಧ ಜಿಲ್ಲೆಗಳ (ವಲಸೆ) ಅತಿಥಿ ಕಾರ್ಮಿಕರು ಸ್ವ ಗ್ರಾಮಕ್ಕೆ ತೆರಳಲು ಅನಕೂಲ ಮಾಡಿಕೊಡಬೇಕು.
3) ರಾಜ್ಯದ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳಲ್ಲಿ ದುಡಿಯುವ ಕಾರ್ಮಿಕರು ಕಳೆದ ಲಾಕ್ ಡೌನ್ ಅವಧಿಯಲ್ಲಿ ವೇತನ ವಿಲ್ಲದ ಸಂಕಷ್ಟ ಅನುಭವಿಸುತ್ತಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಯಾವುದೇ ಉಪದೇಶಗಳನ್ನು ಮಾಲೀಕರು ಪಾಲಿಸುತ್ತಿಲ್ಲ. ಸದರಿ ವೇತನವನ್ನು ಸರಕಾರಗಳೇ ಭರಿಸಬೇಕು. ಇದೀಗ, ಲಾಕ್ ಡೌನ್ ನಿಂದ ರಿಯಾಯಿತಿ ಪಡೆದ ಕೈಗಾರಿಕೆಗಳ ಮಾಲೀಕವರ್ಗ ಮೇ, 04,2020 ರಿಂದ ಕಾರ್ಮಿಕರು ಹಾಜರಾಗದಿದ್ದರೇ ಗೈರು ಹಾಜರೆಂದು ಪರಿಗಣಿಸುವುದಾಗಿ ಬೆದರಿಸಿವೆ. ದೂರ ದೂರದ ಪ್ರದೇಶಗಳಿಂದ ಕಾರ್ಮಿಕರು ಕೈಗಾರಿಕಾ ಪ್ರದೇಶ ತಲುಪಲು ಅಗತ್ಯ ಸಾರಿಗೆ ವ್ಯವಸ್ಥೆ ಮಾಡಬೇಕಾಗಿದೆ.
ಲಕ್ಷಾಂತರ ಬೀಡಿ ಕಾರ್ಮಿಕರು ಉತ್ಪನ್ನಗಳು ವಿವಿಧ ರಾಜ್ಯಗಳ ಮಾರುಕಟ್ಟೆಗೆ ಅಗತ್ಯ ಅವಕಾಶ ದೊರೆಯದೇ ನಿರುದ್ಯೋಗಿಗಳಾಗಿದ್ದಾರೆ. ಈ ಕುರಿತು ಅಗತ್ಯ ಕ್ರಮ ವಹಿಸಬೇಕು.
4) ಕೃಷಿ ಹಾಗೂ ಕೈಗಾರಿಕೆಗಳು ಉತ್ಪಾದನೆಯಲ್ಲಿ ತೊಡಗಲು ಭಾಗಶಃ ಅವಕಾಶ ನೀಡಲಾಗಿದ್ದರೂ ಮತ್ತು 15 ದಿನಗಳ ಲಾಕ್ ಡೌನ್ ಮುಂದುವರಿಕೆ ಇರುವುದರಿಂದ ಬಹುತೇಕ ಬಡವರು, ದಿನದ ಆದಾಯದಲ್ಲೆ ಬದುಕುವವರು ಉದ್ಯೋಗಗಳಿಲ್ಲದ ಅವರ ಸಂಕಷ್ಟ ಮುಂದುವರೆದಿದೆ. ಮುಂದಿನ ಕನಿಷ್ಠ ಮೂರು ತಿಂಗಳ ಅವಧಿಗೆ ಇವರುಗಳಿಗೆ ನಿರುದ್ಯೋಗ ಭತ್ಯೆ ಮತ್ತು ಕೇರಳ ಸರಕಾರದ ಮಾದರಿಯಸಮಗ್ರ ಪಡಿತರ, ಆರೋಗ್ಯ ಸುರಕ್ಷತಾ ಕ್ರಮಗಳನ್ನು ಮನೆಮನೆಗೆ ತಲುಪಿಸಬೇಕು. ಮಾಸಿಕ 7,500 ರೂಗಳ ನೆರವು ನೀಡಬೇಕು.
ಬಿಬಿಎಂಪಿ ವ್ಯಾಪ್ತಿಯಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳು ಕಾರ್ಮಿಕರಿಗೆ ವಿತರಿಸುತ್ತಿರುವ ಕಾರ್ಮಿಕ ಇಲಾಖೆಯ ಸಿದ್ದ ಆಹಾರ ಫಲಾನುಭವಿಗಳಿಗೆ ಒಣ ಆಹಾರ ಹ್ಯಾಂಪರ್ಸ್‌ಗಳನ್ನು ವಿತರಿಸಬೇಕು.
ಉದ್ಯೋಗ ಖಾತ್ರಿಯಲ್ಲಿ ತೊಡಗಲು ಅವಕಾಶ ನೀಡಲಾಗಿದೆಯಾದರೂ, ಅರ್ಜಿ ಹಾಕಿಕೊಂಡ ಎಲ್ಲರಿಗೂ ಉದ್ಯೋಗ ನೀಡಬೇಕು.
ರೈತರ ಕೃಷಿ ಉತ್ಪನ್ನಗಳ ಮಾರಾಟಕ್ಕೆ ತೀವ್ರ ಧಕ್ಕೆ ಉಂಟಾಗಿದೆ. ನಷ್ಠ ಹಾಗೂ ಸಾಲದ ಬಾಧೆಯಿಂದ ಕೆಲ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಣ್ಣು, ಹೂ, ತರಕಾರಿ ಮತ್ತಿತರೆ ಬೆಳೆ ಬೆಳೆದು ನಷ್ಟ ಹೊಂದಿದ ರೈತರಿಗೆ ಪರಿಹಾರ ಘೋಷಿಸ ಬೇಕು ಮತ್ತು ಸ್ಪಷ್ಟವಾಗಿ ನಷ್ಠದ ಅಂದಾಜು ಮಾಡಲು ಗಣತಿಯನ್ನು ಕೈಗೊಳ್ಳ ಬೇಕು ಮಾರುಕಟ್ಟೆ ಸಮಸ್ಯೆ ಇರುವ ಬೆಳೆಗಳನ್ನು ರಾಜ್ಯ ಸರಕಾರದ ಖರೀದಿ ಏಜೆನ್ಸಿಗಳು ನೇರವಾಗಿ ಬೆಂಬಲ ಬೆಲೆಯಲ್ಲಿ ಖರೀದಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು.
5) ಕೇಂದ್ರ ಸರಕಾರದಿಂದ ಇದುವರೆಗೆ ಬರಬೇಕಾದ ಎಲ್ಲಾ ಅನುದಾನ ಬಾಕಿಗಳನ್ನು ತಕ್ಷಣ ಸಂಗ್ರಹಿಸಿಕೊಳ್ಳಲು ಕ್ರಮ ವಹಿಸಬೇಕು. ಕೋವಿಡ್–19 ರ ಪರಿಹಾರ ನಿಧಿಯನ್ನು ಅಗತ್ಯನುಸಾರ ಹೆಚ್ಚಿಸಿ ರಾಜ್ಯಗಳಿಗೆ ನೀಡುವಂತೆ ಒತ್ತಾಯಿಸಿ ಪಡೆಯಬೇಕು.

ಯು. ಬಸವರಾಜ,
ಕಾರ್ಯದರ್ಶಿಗಳು (03.05.2020)

ಅನ್ಯ ರಾಜ್ಯಗಳಿಗೆ ದುಡಿಯಲು ವಲಸೆ ಹೋದ ಕರ್ನಾಟಕದ ಬಡ ಕಾರ್ಮಿಕರನ್ನು ಅವರ ಸ್ವ ಗ್ರಾಮಗಳಿಗೆ ಕರೆ ತರಲು ಅಗತ್ಯ ಕ್ರಮ ವಹಿಸಬೇಕು

ಮಾನ್ಯ ಮುಖ್ಯ ಮಂತ್ರಿಗಳು,
ಕರ್ನಾಟಕ ಸರ್ಕಾರ,

ಅದಾಗಲೇ ತಮಗೆ ತಿಳಿದಂತೆ ಕರ್ನಾಟಕ ರಾಜ್ಯದ ಲಕ್ಷಾಂತರ ಬಡ ಜನತೆ ರಾಜ್ಯದಲ್ಲಿ ಉಪ ಜೀವನ ಕಂಡುಕೊಳ್ಳಲಾಗದುದರಿಂದ, ರಾಜ್ಯದಿಂದ ಪಕ್ಕದ ರಾಜ್ಯಗಳಾದ, ಮಹಾರಾಷ್ಟ್ರ, ಆಂದ್ರ ಪ್ರದೇಶ, ತೆಲಂಗಾಣ, ಗೋವಾ, ತಮಿಳನಾಡು, ಕೇರಳ ಮತ್ತಿತರೆ ರಾಜ್ಯಗಳಿಗೆ ಉಪ ಜೀವನ ಕಂಡುಕೊಳ್ಳಲು ವಲಸೆ ಹೋಗಿರುತ್ತಾರೆ. ತಮ್ಮ ಸ್ವಗ್ರಾಮದ ಮನೆಗಳಲ್ಲಿ ವಯೋವೃದ್ಧರು, ಮಕ್ಕಳನ್ನು ಬಿಟ್ಟು ಹೋಗಿದ್ದಾರೆ. ಈಗ ಅವರಲ್ಲಿ ಬಹುತೇಕರು ಆಯಾ ರಾಜ್ಯಗಳಲ್ಲಿಯೇ ಲಾಕ್‌ಡೌನ್ ಗಳಲ್ಲಿ ಬಂದಿಯಾಗಿದ್ದಾರೆ.

ಅತ್ತ ಉದ್ಯೋಗಗಳಿಲ್ಲದೇ ಇತ್ತ ಸ್ವ ಗ್ರಾಮಗಳನ್ನು ತಲುಪಲಾಗದೇ, ಅಲ್ಲಿನ ಸರಕಾರಗಳು ಮತ್ತು ದಾನಿಗಳ ಕೃಪಕಟಾಕ್ಷದಲ್ಲಿ ಸಂಕಷ್ಟದ ಜೀವನ ಸಾಗಿಸುವಂತಾಗಿದೆ. ನಡೆದಾದರೂ ಅವರು ಸ್ವ ಗ್ರಾಮಗಳಿಗೆ ಬರಬೇಕೆಂದರೂ ಸಾಧ್ಯವಾಗುತ್ತಿಲ್ಲ.

ಇವರಲ್ಲಿ ಬಹುತೇಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಮತ್ತು ಹಿಂದುಳಿದ ಸಮುದಾಯಗಳ ಬಡವರಾಗಿದ್ದಾರೆ.

ಮಾಹಿತಿಯಂತೆ ಮಹಾರಾಷ್ಟ್ರ ರಾಜ್ಯ ಒಂದರಲ್ಲಿಯೇ ಸುಮಾರು 50,000 ದಷ್ಟು ಉತ್ತರ ಕರ್ನಾಟಕದ ಜನರಿದ್ದಾರೆನ್ನಲಾಗಿದೆ.

ಈಗ ಪುನಃ ಲಾಕ್ಡೌನ್ ಅವಧಿ ಮರಳಿ ವಿಸ್ತರಿಸಲಾಗಿದೆ. ಮುಂದೆ ಮತ್ತಷ್ಟು ವಿಸ್ತರಣೆಯಾಗುವ ಸಂಭವಿಸಿದೆ.

ಆದ್ದರಿಂದ, ಸದರಿ ಬಡ ಕಾರ್ಮಿಕರು, ರಾಜ್ಯದ ಅವರ ಸ್ವ ಗ್ರಾಮಗಳಿಗೆ ತಲುಪಲು ಅಗತ್ಯ ಕ್ರಮವಹಿಸಲು ವಿನಂತಿ.

ಸಂಬಂಧಿತ ರಾಜ್ಯಗಳು ಮತ್ತು ಕೇಂದ್ರ ಸರಕಾರದ ನೆರವು ಪಡೆಯುವುದು, ವಿಶೇಷ ರೈಲುಗಳು, ರಸ್ತೆ ಸಾರಿಗೆ ವ್ಯವಸ್ಥೆಗೆ ಕ್ರಮ ವಹಿಸುವುದು ಮತ್ತು ಪ್ರಯಾಣ ಸಂದರ್ಭದ ಅಹಾರ, ಕುಡಿಯುವ ನೀರು ಮತ್ತಿತರೇ ವೆಚ್ಚ ಭರಿಸಲು ಕ್ರಮ ವಹಿಸುವುದು ಆಗಬೇಕಾಗಿದೆ. ಅದ್ದರಿಂದ ಸದರಿ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಲು ಸಿಪಿಐಎಂ ರಾಜ್ಯ ಸಮಿತಿಯಿಂದ ಮನವಿ ಮಾಡುವೆವು.

ಯು. ಬಸವರಾಜ
ಕಾರ್ಯದರ್ಶಿ, (04–05–2020)

ನಿತ್ಯೋತ್ಸವ ಕವಿ ಕೆ.ಎಸ್. ನಿಸಾರ್ ಅಹಮದ್ ರವರಿಗೆ ಸಿಪಿಐಎಂ ನಮನ

ತಮ್ಮ ಕಾವ್ಯ ಹಾಗೂ ಸಾಹಿತ್ಯದ ಮೂಲಕ ನಾಡೋಜಾ, ಪದ್ಮಶ್ರೀ ಮುಂತಾದ ಹಲವು ಪ್ರಶಸ್ತಿಗಳಿಗೆ ಭಾಜನರಾದ ಡಾ. ಕೆ.ಎಸ್. ನಿಸಾರ್ ಅಹಮದ್ ರವರು ತಮ್ಮ 84 ನೇ ವಯಸ್ಸಿನಲ್ಲಿ ನಿಧನರಾಗಿರುತ್ತಾರೆ.

ಅಗಲಿದ ಕನ್ನಡದ ಹಿರಿಯ ಕವಿಗೆ ಸಿಪಿಐಎಂ ಪಕ್ಷದ ರಾಜ್ಯ ಸಮಿತಿಯ ಹೃದಯ ಪೂರ್ವಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತದೆ. ಅದೇ ರೀತಿ, ಅವರನ್ನು ಕಳೆದುಕೊಂಡ ಅವರ ಕುಟುಂಬದ ಸದಸ್ಯರಿಗೂ ಮತ್ತು ಅಪಾರ ಅಭಿಮಾನಿ ವೃಂದಕ್ಕೂ ಮತ್ತು ಮಿತ್ರಗಣಕ್ಕೂ ತನ್ನ ಸಂತಾಪವನ್ನು ಸಲ್ಲಿಸುತ್ತದೆ.

ಕನ್ನಡದಲ್ಲಿ ಪ್ರಜಾಸತ್ತಾತ್ಮಕ, ಧರ್ಮ ನಿರಪೇಕ್ಷ, ಪ್ರಗತಿಪರ ಮೌಲ್ಯಗಳನ್ನು ನಿರಂತರವಾಗಿ ಪ್ರತಿಪಾದಿಸಿದ ಕವಿ ನಿಸಾರ್ ಅಹಮದ್‌ರವರು, ನಿತ್ಯೋತ್ಸವ ಮೊದಲಾದ ಸುಗಮ ಗಾಯನದ ಮೂಲಕ ಜನಮನವನ್ನು ತಟ್ಟಿದವರು.

ತಮ್ಮ ಭಾವಗೀತೆಗಳ ಮೂಲಕ ಅತ್ಯಂತ ಜನಪ್ರಿಯರಾಗಿದ್ದರೂ ಅವರ ಕಾವ್ಯದಲ್ಲಿ ಹುದುಗಿದ ವ್ಯಂಗ್ಯದ ಮೂಲಕ ಪ್ರಭುತ್ವವನ್ನು ಟೀಕೆಗೊಳಪಡಿಸಿದವರು. ಬಹಳ ಜನ ಯುವಕವಿಗಳನ್ನು ಪ್ರಭಾವಿಸಿದವರು.

ಸ್ವಾತಂತ್ರ್ಯಾನಂತರದ ಕಾಲದಿಂದಲೇ ಅಲ್ಪ ಸಂಖ್ಯಾತರು ಅನುಭವಿಸುತ್ತಾ ಬಂದಿರುವ ಪರಕೀಯತೆಯನ್ನು ಬಹಳ ಸೂಕ್ಷ್ಮವಾಗಿ ಕರುಳು ಮಿಡಿಯುವಂತೆ ಅಭಿವ್ಯಕ್ತಿಸಿದವರು.

ಅವರು ಅನುವಾದಿಸಿದ ನೆರುಡಾನ ಕವಿತೆಗಳು ಮತ್ತು ಆತ್ಮ ಚರಿತ್ರೆಯ ಆಯ್ದ ಭಾಗಗಳು ನೆರುಡಾರವರ ಕ್ರಾಂತಿಕಾರಿ ಜೀವನದ ಜೊತೆಗೆ ಅವರ ಕಾವ್ಯದ ಪ್ರಖರತೆಯನ್ನು ಅರ್ಥ ಮಾಡಿಕೊಳ್ಳಲು ನೆರವಾಯಿತು. ಅವರು ಸ್ವಾತಂತ್ರ್ಯಾನಂತರದ ಮೊದಲ ದಶಕದಲ್ಲಿ ಅಂದು ಕಮ್ಯುನಿಸ್ಟ್ ಪಕ್ಷದ ಮುಖವಾಣಿಯಾಗಿದ್ದ "ಜನಶಕ್ತಿ" ಪತ್ರಿಕೆಗೆ ಬರೆದ ಅಂಕಣ ಕ್ರಾಂತಿಕಾರಿ ಚಳುವಳಿಯ ಬಗ್ಗೆ ಅವರ ಒಲವನ್ನು ಬಿಂಬಿಸುತ್ತಿತ್ತು.

ಅವರು 21 ಕವನ ಸಂಕಲನಗಳು, 14 ವೈಚಾರಿಕೆ ಕೃತಿಗಳು, 5 ಮಕ್ಕಳ ಸಾಹಿತ್ಯ ಕೃತಿಗಳು, 5 ಅನುವಾದ ಕೃತಿಗಳು, 13 ಸಂಪಾದನಾ ಗ್ರಂಥಗಳನ್ನು ಹೊರತಂದಿದ್ದಾರೆ. ಅವುಗಳಲ್ಲಿ "ಮನಸು ಗಾಂಧಿಬಜಾರು" ಹಾಗು "ನಿತ್ಯೋತ್ಸವ" ಇವು ಪ್ರಸಿದ್ಧ ಕವನ ಸಂಕಲನಗಳಾಗಿವೆ.

1978 ರಲ್ಲಿ ಇವರ ಮೊದಲ ಭಾವಗೀತೆಗಳ ಧ್ವನಿ ಮುದ್ರಿಕೆ ನಿತ್ಯೋತ್ಸವ ಹೊರಬಂದು, ಕನ್ನಡ ಲಘುಸಂಗೀತ (ಸುಗಮ ಸಂಗೀತ) ಕ್ಷೇತ್ರದಲ್ಲಿ ಭರ್ಜರಿ ಯಶಸ್ಸು ಪಡೆಯಿತು. ಇದುವರೆಗೂ 13 ಧ್ವನಿಸುರುಳಿಗಳ ಮೂಲಕ ಅವರು ರಚಿಸಿದ ಕವನಗಳ, ಗೀತೆಗಳು ಪ್ರಚುರಗೊಂಡಿವೆ.

ಯು. ಬಸವರಾಜ
ಕಾರ್ಯದರ್ಶಿಗಳು, 03.05.2020

ಅಸಂಘಟಿತ ವಲಯದ ದುಡಿದು ತಿನ್ನುವ ಜನರ ಬದುಕಿನ ಬವಣೆಗೆ ಪರಿಹಾರ ನೀಡಲು ಸರಕಾರ ಮುಂದಾಗಬೇಕು

ಲಾಕ್ ಡೌನ್ ವಿಧಿಸಿ 43 ನೇ ದಿನ ಕರ್ನಾಟಕ ರಾಜ್ಯ ಸರಕಾರ 1610 ಕೋಟಿ ಕೆಲವು ವಲಯಗಳಿಗೆ ಪರಿಹಾರ ನೀಡಲು ನೆರವು ಘೋಷಿಸಿದೆ. ನಾವಿದನ್ನು ಸ್ವಾಗತಿಸುತ್ತೇವೆ ಆದರೆ ಇದು ಏನೇನಕ್ಕೂ ಸಾಲದು ಎಂದು ಸ್ಪಷ್ಟವಾಗಿ ಹೇಳುತ್ತೇವೆ. ಲಾಕ್ ಡೌನ್ ನಿಂದ ಬಹುಮುಖ್ಯವಾಗಿ ಅಸಂಘಟಿತ ವಲಯದ ದುಡಿದು ತಿನ್ನುವ ಜನರ ಬದುಕಿನ ಬವಣೆಗೆ ಪರಿಹಾರ ನೀಡಲು ಸರಕಾರ ಮುಂದಾಗಬೇಕೆಂದು ಅಖಿಲ ಬಾರತ ಜನವಾದಿ ಮಹಿಳಾ ಸಂಘಟನೆ ಕಾರ್ಮಿಕ ಸಚಿವರ ಮೂಲಕ ಈಗಾಗಲೇ ಸರಕಾರಕ್ಕೆ ಮನವಿ ಸಲ್ಲಿಸಿದ್ದನ್ನು ನೆನಪಿಸ ಬಯಸುತ್ತೇವೆ.

ಬಹುತೇಕ ಮಹಿಳೆಯರೇ ಇರುವ ಮನೆಗೆಲಸದ ಕಾರ್ಮಿಕರನ್ನು ಸರಕಾರ ಪರಿಗಣಿಸಿಲ್ಲ. ಸ್ತ್ರೀ ಶಕ್ತಿ ಸಂಘಗಳ ಸಾಲದ ಬಡ್ಡಿ ಮನ್ನಾ ಮಾಡಿ ಕಂತು ಕಟ್ಟಲು ಅವಧಿ ವಿಸ್ತರಣೆ, ಬಡ್ಡಿ ರಹಿತ ಹೊಸ ಸಾಲ ನೀಡಲು ಯಾವುದೇ ಕ್ರಮಕ್ಕೆ ಮುಂದಾಗಿಲ್ಲ. ಈಗಾಗಲೆ ಗ್ರಾಮೀಣ ಭಾಗದಲ್ಲಿ ಕೆಲವು ಕಡೆ ಮೈಕ್ರೋ ಫೈನಾನ್ಸ್ ಮತ್ತು ಧರ್ಮಸ್ಥಳ ಹಾಗೂ ಇತರ ಸಂಸ್ಥೆ ಗಳು ನಡೆಸುತ್ತಿರುವ ಸಂಘಗಳಿಂದ ಸಾಲ ವಸೂಲಾತಿಗೆ ಸಿದ್ಧತೆಗಳು ನಡೆಯುತ್ತಿರುವುದು ನಮ್ಮ ಗಮನದಲ್ಲಿದೆ. ಆದರೆ ಸರಕಾರದ ಗಮನಕ್ಕೆ ಅದು ಇದ್ದ ಹಾಗೆ ತೋರುತ್ತಿಲ್ಲ ಎಂದು ಸಂಘಟನೆ ಅಭಿಪ್ರಾಯ ಪಟ್ಟಿದೆ.

ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸಿ ಆರ್ಥಿಕತೆಯನ್ನು ಪುನರಾರಂಭಿಸುವ ಘೋಷಣೆಯೊಂದಿಗೆ ನೆರವೆಂದು ಮುಖಪುಟದ ಜಾಹಿರಾತಿಗೆ ವೆಚ್ಚ ಮಾಡುವ ಸರಕಾರಕ್ಕೆ ಬಡ ಜನರ ನೋವು ಅರ್ಥವಾಗಿಲ್ಲ.

ಇತರ ರಾಜ್ಯಗಳಿಂದ ಬಡ ಕಾರ್ಮಿಕರನ್ನು ಕರೆ ತಂದ ಏಜೆಂಟ್ ರುಗಳು ಲಾಕ್ ಡೌನ್ ಆದ ತಕ್ಷಣ ಲಾಕ್ ಆದರು. ಅವರನ್ನು ಬಳಸಿಕೊಂಡ ಕಟ್ಟಡ ನಿರ್ಮಾಣ ವಲಯ ಆ ಕಾರ್ಮಿಕರ ಕಷ್ಟಕ್ಕೆ ಕನಿಷ್ಟ ಸಹಾಯದ ಸೌಜನ್ಯವನ್ನೂ ತೋರಲಿಲ್ಲ.

ಕಾರ್ಮಿಕ ಇಲಾಖೆಯಿಂದ ಸಿಕ್ಕ ಅಷ್ಟೋ ಇಷ್ಟೋ ಅರೆ ಹೊಟ್ಟೆ ಊಟದ ಪೊಟ್ಟಣಗಳು, ದಾನಿಗಳು ನೀಡಿದ ಸಹಾಯದಿಂದ ಬದುಕುಳಿದ ಅವರಿಗೆ ಬಿಲ್ಡರ್ ಗಳ ಲಾಬಿಗೆ ಮಣಿ ಹಾಕಿ ಮರಳಿ ತಮ್ಮೂರಿಗೆ ಹೋಗಲು ಅವಕಾಶ ನೀಡದೇ ಬಂಧಿಗಳನ್ನಾಗಿರಿಸಿರುವುದನ್ನು ಸಂಘಟನೆ ಖಂಡಿಸುತ್ತದೆ.

ವಿಪತ್ತು ನಿರ್ವಹಣೆ ಕಾಯ್ದೆಯನ್ನು ಮುಂದಿಟ್ಟುಕೊಂಡು ಜನರ ಬದುಕುವ ಹಕ್ಕು ಕಿತ್ತುಕೊಳ್ಳುವ ಹುನ್ನಾರವಿದು. ಆರ್ಥಿಕತೆಯನ್ನು ಪುನರಾರಂಭಿಸುವುದು ಎಂದರೆ ಕಾರ್ಮಿಕರನ್ನು ಶೋಷಣೆ ಮಾಡುವುದು ಎಂದರ್ಥವಲ್ಲ. ಜೊತೆಗೆ ಕಟ್ಟಡ ಕಾರ್ಮಿಕರಿಗೆ ನೀಡುವ ಪರಿಹಾರ ವಲಸಿಗ ಕಾರ್ಮಿಕರಿಗೆ ದೊರೆಯುವುದಿಲ್ಲ ಎಂಬ ಸತ್ಯವನ್ನು ಮುಚ್ಚಿಡಲಾಗಿದೆ. ಟ್ಯಾಕ್ಸಿ ಆಟೋಡ್ರೈವರ್ ಗಳಿಗೆ ಕೊಟ್ಟ ಅಲ್ಪ ಸ್ವಲ್ಪ ಸಹಾಯವೂ ವೋಲಾ ಊಬರ್ ಮಾಲಿಕರ ಸಹಾಯಕ್ಕೆಂಬುದು ಸುಸ್ಪಷ್ಟವಾಗಿ ಕಾಣುತ್ತಿದೆ.

ಬೀದಿ ಬದಿ ವ್ಯಾಪಾರದಲ್ಲಿಯೂ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರಿದ್ದು ಅವರಿಗೂ ನೆರವು ನೀಡಬೇಕೆಂದು ಸಂಘಟನೆ ಒತ್ತಾಯಿಸುತ್ತದೆ. ಕಾರ್ಮಿಕ ಇಲಾಖೆಯಿಂದ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯ ಮೂಲಕ ಹಂಚುವ ಭರವಸೆ ನೀಡಿದ ರೇಷನ್ ಕಿಟ್ ಗಳು ಎಲ್ಲ ಕಡೆಗೂ ಸಮನಾಗಿ ಹಂಚಿಕೆಯಾಗಿಲ್ಲ.

ಅಲ್ಲಿ ನಡೆದ ಹೇರಾಪೇರಿ ಈಗ ಘೋಷಿಸಿರುವ ಪರಿಹಾರದಲ್ಲಿಯೂ ಆಗುವುದಿಲ್ಲ ಎಂಬ ಖಾತ್ರಿಯೂ ಇಲ್ಲ. ಈ ಹಿನ್ನೆಲೆಯಲ್ಲಿ ಅಗತ್ಯವಿರುವ ವಲಯದ ಕುಟುಂಬಗಳಿಗೆ ಮುಂದಿನ ಮೂರು ತಿಂಗಳಿಗೆ ತಲಾ 7500/ ನಗದು ವರ್ಗಾವಣೆ, ಕೇರಳ ಮಾದರಿಯಲ್ಲಿ ಮನೆಗಳಿಗೆ ಎಲ್ಲ ಜೀವನಾವಶ್ಯಕ ವಸ್ತುಗಳ ಪೂರೈಕೆಗೆ ಸರಕಾರ ಮುಂದಾಗಬೇಕು.

ಸರಕಾರದ ಬೊಕ್ಕಸ ಬರಿದಾಗಿದೆ. ಆದರೆ ಕೇಂದ್ರ ಸರಕಾರದಿಂದ ಬರಬೇಕಾದ ರಾಜ್ಯದ ಹಕ್ಕಿನ ಹಣವಾದ ಜಿ.ಎಸ್.ಟಿ. ಬಾಕಿ ಮತ್ತು ಕೊವಿಡ್ ಪರಿಹಾರಕ್ಕೆಂದು ಪಿಎಂ ಕೇರ್ಸ್ ಹೆಸರಿನಲ್ಲಿ ಸಾವಿರಾಕೋಟಿ ಸಂಗ್ರಹಿಸಲಾಗಿದೆ. ಅದರಲ್ಲಿ ನಮ್ಮ ರಾಜ್ಯಕ್ಕೆ ಅಗತ್ಯವಾದ ಪಾಲನ್ನು ಗಟ್ಟಿಯಾಗಿ ಕೇಳಿ ರಾಜ್ಯದ ಜನರ ಸಂಕಷ್ಟ ದೂರಮಾಡುವ ಕೆಲಸ ಮಾಡಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕರ್ನಾಟಕ ರಾಜ್ಯ ಸಮಿತಿಯು ಒತ್ತಾಯಿಸುತ್ತದೆ.

ದೇವಿ, ಅಧ್ಯಕ್ಷರು. ಗೌರಮ್ಮ, ಪ್ರಧಾನ
ಕಾರ್ಯದರ್ಶಿ. (7–5–2020)

ಪರಿಹಾರದ ಪ್ಯಾಕೇಜ್ ಗೆ ಮುಂದಾದ ಕ್ರಮ ಸ್ವಾಗತಾರ್ಹ ಆದರೇ, ಅದು ಕೆಲವರಿಗಷ್ಟೇ ! ಅದು ಕೂಡಾ ಅಸಮರ್ಪಕ !! – ಸಿಪಿಐಎಂ ಟೀಕೆ :

ಕರ್ನಾಟಕ ಸರಕಾರ ರಾಜ್ಯದ ಜನಗಳ ಒತ್ತಾಯಕ್ಕೆ ಮಣಿದು ಸ್ವಲ್ಪ ತಡವಾಗಿಯಾದರೂ ಮತ್ತು ಕೆಲವರಿಗಾದರೂ ಸುಮಾರು 1,600 ಕೋಟಿ ರೂ.ಗಳ ಪರಿಹಾರ ಘೋಷಿಸಿರುವುದನ್ನು ಸಿಪಿಐಎಂ ರಾಜ್ಯ ಸಮಿತಿ ಸ್ವಾಗತಿಸುತ್ತದೆ.

ಆದರೇ, ಕಳೆದ ಒಂದೂವರೆ ತಿಂಗಳ ಕಾಲ ಸಂಕಷ್ಟ ಅನುಭವಿಸಿದ ಈ ಕೆಲ ಜನರಿಗೆ ಘೋಷಿಸಿದ ಪರಿಹಾರ, ಬಹಳ ಕಡಿಮೆಯದಾಗಿದೆ. ಪ್ರತಿ ತಿಂಗಳ ಕೇರಳ ಮಾದರಿಯಲ್ಲಿ ಆಹಾರ ಸಾಮಗ್ರಿಗಳ ಕಿಟ್ ಮತ್ತು ಮಾಸಿಕ ಕನಿಷ್ಟ 7,500 ರೂಗಳ ನೆರವಾದರೂ ನೀಡಬೇಕೆಂಬುದು ಸಿಪಿಐಎಂ ನ ಒತ್ತಾಯವಾಗಿತ್ತು. ಹಾಗಾಗಿ ಎರಡು ತಿಂಗಳ ಈ ಅವಧಿಗೆ ಸರಾಸರಿ, 15,000 ರೂ ಪರಿಹಾರ ಘೋಷಿಸಬೇಕಿತ್ತು. ಆದರೇ, ಈ ಘೋಷಣೆ ಸರಾಸರಿ ಕೇವಲ 5,000 ರೂ ಮಾತ್ರವೇ ಸೀಮಿತವಾಗಿದೆ. ಕೇರಳ ಮಾದರಿಯ ಆಹಾರ ಸಾಮಗ್ರಿಗಳ ಕುರಿತು ಸರಕಾರ ಈಗಲೂ ಮಾತನಾಡಿಲ್ಲ.

ಅದೇ ರೀತಿ, ಪರಿಹಾರ ನೀಡುತ್ತಿರುವುದು, ಪರಿಹಾರ ಕೊಡಬೇಕಾದ ಜನರಲ್ಲಿ ಕೆಲವರಿಗಷ್ಟೇ ಆಗಿದೆ. ಇನ್ನೂ ಪರಿಹಾರ ನೀಡಬೇಕಾದ ಜನರ ಪಟ್ಟಿ ಬಹಳ ದೊಡ್ಡದಿದೆ.

ಈ ಜನರಲ್ಲಿ ಬಹುತೇಕ ಕೃಷಿಕೂಲಿಕಾರರು, ಬಡ ರೈತರು, ಕಸುಬುದಾರರು, ಗುತ್ತಿಗೆ ಮತ್ತಿತರೇ ವಲಯದ ಅಸಂಘಟಿತರು, ವಿಕಲ ಚೇತನರು, ದೇವದಾಸಿ ಮಹಿಳೆಯರು, ಲೈಂಗಿಕ ಕಾರ್ಯಕರ್ತರು, ಮೈಕ್ರೋ ಫೈನಾನ್ಸ್ ಸಂಸ್ಥೆಗಳಲ್ಲಿ ಸಾಲ ಪಡೆದ ಸ್ವ ಸಹಾಯ ಸಂಘಗಳ ಮಹಿಳೆಯರು, ಮಂಗಳಮುಖಿಯರು, ಮಸಣ ಕಾರ್ಮಿಕರು, ಮಂಗಳ ವಾದ್ಯ ಕಲಾವಿದರು, ಸಣ್ಣ ವ್ಯಾಪಾರಿಗಳು, ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಗಳು, ಕೋವಿಡ್ – 19 ರಿಂದ ಬಾಧಿತರಾದ ಕುಟುಂಬಗಳು, ನಗರಗಳ ಬಡಜನರು, ಇವರುಗಳೆಲ್ಲಾ ಪರಿಹಾರದ ನಿರೀಕ್ಷೆಯಲ್ಲಿದ್ದಾರೆ.

ಇವರೆಲ್ಲರಿಗೂ ಆಹಾರ ಸಾಮಾಗ್ರಿಗಳ ಕಿಟ್ ಜೊತೆ ಈ ಎರಡು ತಿಂಗಳಿಗೆ ಕನಿಷ್ಟ 15,000 ರೂ ಪರಿಹಾರ ಸಿಗಬೇಕು, ರೈತರಿಗೆ ಬೆಳೆನಷ್ಠ ಪರಿಹಾರವನ್ನು ತಲಾ ಎಕರೆಗೆ 20,000 ರೂಗಳಾದರೂ ದೊರೆಯುವಂತಾಗಬೇಕು. ಮೈಕ್ರೋ ಫೈನಾನ್ಸ್ ಸಂಸ್ಥೆಗಳಲ್ಲಿ ಸಾಲ ಪಡೆದ ಮಹಿಳೆಯರ ಸಾಲ ಮನ್ನಾ ಮಾಡಲು ಕ್ರಮವಹಿಸಬೇಕು. ಈಗಲೂ ವೇತನ ಸಹಿತ ರಜೆ ಎಂದಿದ್ದ ಕಾರ್ಮಿಕರಿಗೆ ಕಳೆದೆರಡು ತಿಂಗಳ ವೇತನ ಪಡೆದಿಲ್ಲ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಕಾರ್ಮಿಕರಿಗೆ ಸರಕಾರವೇ ವೇತನ ಬಾಕಿ ನೀಡಬೇಕಿದೆ. ಎಂಬುದು ಸಿಪಿಐಎಂ ರಾಜ್ಯ ಸಮಿತಿಯ ಬಲವಾದ ಆಗ್ರಹ.

ಇದಕ್ಕಾಗಿ, ಕೇಂದ್ರ ಸರಕಾರದ ಮೇಲೆ ಒತ್ತಡ ಹೇರಿ ಗಣನೀಯ ನೆರವನ್ನು ಪಡೆಯಲು ಕ್ರಮ ವಹಿಸಬೇಕು. ರಾಜ್ಯದ ಸಂಸದರು ಈ ವಿಚಾರದಲ್ಲಿ ಮೌನ ವಹಿಸಿರುವುದು ತೀವ್ರ ಖಂಡನೀಯವಾಗಿದೆ. ರಾಜ್ಯ ಮತ್ತು ರಾಜ್ಯದ ಜನತೆ ಸಂಕಷ್ಟದಲ್ಲಿರುವಾಗ, ತಮ್ಮ ಕರ್ತವ್ಯದಿಂದ ವಿಮುಖರಾದ ಇವರ ಈ ಮೌನ ಅಸಹನೀಯವಾಗಿದೆ ಎಂದು ಸಿಪಿಐಎಂ ಖಂಡಿಸಿದೆ.

ಯು. ಬಸವರಾಜ
ಕಾರ್ಯದರ್ಶಿಗಳು, (06.05.2020)

ಬಿಲ್ಡರಗಳ ಹಿತಕ್ಕಾಗಿ ಕಾರ್ಮಿಕರನ್ನು ಬಲಿ ಕೊಡುತ್ತಿರುವ ರಾಜ್ಯ ಸರಕಾರ: ಸಿಪಿಐ(ಎಂ) ಖಂಡನೆ

ರಾಜ್ಯ ಸರಕಾರವು ಲಾಕ್ ಡೌನ್ ಆರಂಭದಿಂದಲೂ ದೊಡ್ಡ ಬಿಲ್ಡರಗಳ ಹಿತಕಾಯಲು ಹರಸಾಹಸ ಪಡುತ್ತಿದೆ. ಅವರ ಹಿತಕ್ಕಾಗಿ ಕಾರ್ಮಿಕರನ್ನು ಬಲಿಕೊಡುತ್ತಿದೆ. ರಾಜ್ಯ ಸರಕಾರದ ಈ ಯತ್ನಗಳು ಕಾರ್ಮಿಕರ ಜೀವಕ್ಕೆ ಕಂಟಕವಾಗಲಿದೆ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಖಂಡಿಸಿವೆ.

ರಾಜ್ಯ ಸರಕಾರವು ಈ ಕಾರಣಕ್ಕಾಗಿಯೇ ಹೊರ ರಾಜ್ಯದ ವಲಸೆ ಕಾರ್ಮಿಕರಿಗೆ ತಡವಾಗಿ ರೈಲು ವ್ಯವಸ್ಥೆ ಮಾಡಿದೆ. ಅದನ್ನು ಸಹಾ ಗುಪ್ತವಾಗಿ ➚

ಕೊರೋನಾ ಲಾಕ್‌ಡೌನ್ ಸಂದರ್ಭದಲ್ಲಿ ಆದಿವಾಸಿಗಳ ಸಂರಕ್ಷಣೆಗಾಗಿ ವಹಿಸಬೇಕಾದ ಕೆಲವು ಕ್ರಮಗಳ ಬಗ್ಗೆ

ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರಕಾರ,

ಮಾನ್ಯರೇ,

ನಮ್ಮ ರಾಜ್ಯದಲ್ಲಿಯೂ ವ್ಯಾಪಕವಾಗಿ ಹಬ್ಬುತ್ತಿರುವ ಕೊರೋನಾ ವೈರಸ್‌ನ ಹಾವಳಿಯನ್ನು ನಿರ್ಮೂಲನಗೊಳಿಸಲು ಶ್ರಮಿಸುತ್ತಿರುವ ತಮಗೂ ಮತ್ತು ಜಿಲ್ಲೆಯ ಆಡಳಿತದ ಎಲ್ಲರಿಗೂ ಕೃತಜ್ಞತೆಗಳನ್ನು ಈ ಮೂಲಕ ಸಲ್ಲಿಸಲು ಬಯಸುತ್ತಿದ್ದೇವೆ. ತಮ್ಮ ಈ ಅಹೋರತ ಪ್ರಯತ್ನಕ್ಕೆ ನಾವು ಸರ್ವರೀತಿಯಿಂದ ಸಹಕರಿಸಲು ಬಯಸುತ್ತೇವೆ.

ಪ್ರಸಕ್ತವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಕೊರೊನ ವೈರಸ್ ಜೊತೆಗೆ ಮಂಗನ ಕಾಯಿಲೆಯು ಹರಡುತ್ತಿದೆ. ಇದು ಹೊಸನಗರ ಅರಣ್ಯ ಪ್ರದೇಶದಲ್ಲಿ ಹಾಗೂ ತೀರ್ಥಹಳ್ಳಿ ತಾಲೂಕಿನಲ್ಲಿ, ಸಾಗರದ ಗಡಿಯವರೆಗೆ ಒಟ್ಟು 16 ಜಿಲ್ಲೆಗಳಿಗೆ ಕೂಡ ವಿಸ್ತಾರಗೊಂಡಿದೆ. ಇದು ಸಹ ಆತಂಕಕಾರಿ ವಿಚಾರವಾಗಿದೆ. ರಾಜ್ಯದಲ್ಲಿ ಇಂತಹ ಕಾಡಿನ ಪ್ರದೇಶಗಳಲ್ಲಿ ಬಹುತೇಕ ನಮ್ಮ ಆದಿವಾಸಿಗಳು ಜೀವಿಸುತ್ತಿದ್ದಾರೆ. ಬಹುತೇಕ ಕೂಲಿ ನಾಲಿ ಮಾಡಿ ದುಡಿದರೇ ಮಾತ್ರ ಅನ್ನ ಸಂಪಾದಿಸಿಕೊಳ್ಳಬೇಕಾದ ಆದಿವಾಸಿಗಳು ಆದಾಯವಿಲ್ಲದೇ ಕಂಗಾಲಾಗಿದ್ದಾರೆ. ಇಂದಿನ ಪ್ರಸಕ್ತ ಪರಿಸ್ಥಿತಿಯ ಹಿನ್ನೆಲೆಯಲ್ಲಿ ತಮ್ಮಲ್ಲಿ ವಿನಂತಿಸುವುದೇನೆಂದರೆ ಆದಿವಾಸಿಗಳ ಸಂರಕ್ಷಣೆಗಾಗಿ ಇನ್ನೂ ಕೆಲವು ತುರ್ತು ಕ್ರಮಗಳನ್ನು ಕೈಗೊಳ್ಳಲು ಈ ಕೆಳಗಿನ ಅಂಶಗಳನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇವೆ.

1. **ಪೌಷ್ಟಿಕ ಆಹಾರ ಮತ್ತು 16 ಅಗತ್ಯ ವಸ್ತುಗಳ ಪೂರೈಕೆ:**

ಜಿಲ್ಲೆಗಳಲ್ಲಿ ಇರುವ ಬುಡಕಟ್ಟು ಸಮುದಾಯಗಳು ಶ್ರಮ ಜೀವಿಗಳು. ಕೂಲಿನಾಲಿ ಮಾಡಿಕೊಂಡು ಜೀವನ ಸಾಗಿಸುವವರು. ಈ ಸಮುದಾಯಗಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ.

ಆದಿವಾಸಿಗಳಿಗೆ ಮಳೆಗಾಲದ ಆರು ತಿಂಗಳಲ್ಲಿ ಮಾತ್ರ ಉಚಿತ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಈ ಒಂದು ವಿಶೇಷ ಸಂದರ್ಭದಲ್ಲಿ ಇದನ್ನು ಒಂದು ವರ್ಷಕ್ಕೆ ವಿಸ್ತರಿಸಬೇಕಿದೆ ಅಲ್ಲದೆ ಆಹಾರದ ಗುಣಮಟ್ಟ ಹಾಗೂ ಕೊಡುವ ಪ್ರಮಾಣವನ್ನು ಹೆಚ್ಚಿಸಬೇಕು. ಜೊತೆಗೆ ಪೌಷ್ಟಿಕ ಆಹಾರ ಮತ್ತು 16 ಅಗತ್ಯ ಸಾಮಗ್ರಿಗಳನ್ನು ಕೂಡಲೇ ಪೂರೈಸಬೇಕು.

ಪೌಷ್ಟಿಕ ಆಹಾರ ಮತ್ತುರೇಷನ್ ಸ್ಥಳೀಯವಾಗಿ ಲಭ್ಯವಾಗಿರುವಂತೆ ಮಾಡಬೇಕು. ಯಾಕೆಂದರೆ ಈ ಸಮುದಾಯಗಳು ಬೆಟ್ಟದ ವಿವಿಧ ಕಡೆಗಳಲ್ಲಿ ವಾಸ ಮಾಡುತ್ತಿದ್ದು ತಾಲೂಕು ಕೇಂದ್ರದಿಂದ ಪಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅದನ್ನು ಅವರ ಹಾಡಿಗಳಿಗೆ ಹತ್ತಿರವಿರುವ ಪ್ರದೇಶದಿಂದಲೇ ವಿತರಿಸಬೇಕು.

2. **ಸಂಚಾರಿಗಿರಿಜನ ಆರೋಗ್ಯ ಘಟಕಗಳನ್ನು ಸಕ್ರಿಯವಾಗಿಸುವುದು.**

ಸಂಚಾರಿಗಿರಿಜನ ಆರೋಗ್ಯ ಘಟಕಗಳನ್ನು ಸಕ್ರಿಯವಾಗಿ ಆದಿವಾಸಿ ಹಾಡಿಗಳಲ್ಲಿ ಕಾರ್ಯನಿರ್ವಹಿಸಲು ಕ್ರಮ ಕೈಗೊಳ್ಳಬೇಕು. ಇದು ತುರ್ತಾಗಿ ಮಾಡಬೇಕಿದೆ.

3. **ಪರಿಹಾರ ಮತ್ತು ವಸತಿ ವ್ಯವಸ್ಥೆ**

ಆದಿವಾಸಿಗಳು ಲೈನ್ ಮನೆಗಳಲ್ಲಿ ವಾಸವಿದ್ದು ತೀರಾ ಅನಾನುಕೂಲಗಳಿಂದ ಕೂಡಿದೆ. ಅವರ ಆರೋಗ್ಯ ರಕ್ಷಣೆಗೆ ಕ್ರಮ ವಹಿಸಬೇಕಿದೆ. ಅವರಿಗೆ ತುರ್ತಾಗಿ ಪರಿಹಾರ, ವಸತಿ ಸೌಕರ್ಯವನ್ನು ಕಲ್ಪಿಸಿಕೊಡಬೇಕಾಗಿದೆ.

4. **ಪ್ರವಾಸಿ ತಾಣಗಳ ಭೇಟಿಯ ಸಂಪೂರ್ಣ ನಿಷೇಧ.**

ಪಶ್ಚಿಮ ಘಟ್ಟದ ಹಾಗೂ ಕರಾವಳಿಯ ಆದಿವಾಸಿಗಳ ನೆಲೆಸಿರುವ ಪ್ರದೇಶಗಳು ಪ್ರವಾಸಿ ತಾಣಗಳ ಭೇಟಿಯನ್ನು ಸಂಪೂರ್ಣವಾಗಿ ನಿಷೇಧಿಸಬೇಕು. ಉದಾಹರಣೆ: ಕೊಡಚಾದ್ರಿ ಪ್ರದೇಶ, ಕೊಡಗು ಇತರೆಡೆ.

5. **ನಿರುದ್ಯೋಗಿ ಭತ್ಯೆ ನೀಡಿಕೆ**

ಆದಿವಾಸಿ ನಿರುದ್ಯೋಗಿ ಯುವಜನರಿಗೆ ಪ್ರಸಕ್ತ ಸಾಲಿನಲ್ಲಿ ನೀಡಬೇಕಿರುವ ನಿರುದ್ಯೋಗ ಭತ್ಯೆಯನ್ನು ಬಾಕಿ ಸಮೇತ ಕೂಡಲೇ ನೀಡಬೇಕು. ಇದುವರೆಗೂ ನೀಡದೇ ಇರುವ ಸಮುದಾಯಗಳಿಗೆ ಯೋಜನೆಯನ್ನು ವಿಸ್ತರಿಸಿ ಜಾರಿಗೆ ತರಬೇಕು. ಶಿವಮೊಗ್ಗ ಜಿಲ್ಲೆಯನ್ನು ಒಳಗೊಂಡು ಕೆಲವು ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಯಲ್ಲಿ ಇಲ್ಲ. ಆದ್ದರಿಂದ ಅದನ್ನು ಪ್ರಮುಖ ಆದ್ಯತೆಯ ಮೇರೆಗೆ ಕೈಗೊಳ್ಳಬೇಕು.

6. **ಸಾಲ ಮನ್ನಾ**

ಆದಿವಾಸಿಗಳ ಗಿರಿಜನ ವಿವಿಧೋದ್ದೇಶ ಸಹಕಾರ ಸಂಘಗಳಲ್ಲಿ ಪಡೆದಿರುವ ಗೃಹ ಬಳಕೆ ಸಾಲ, ಕೃಷಿ, ಹೈನುಗಾರಿಕೆ, ಮನೆ ನಿರ್ಮಾಣ ಮುಂತಾದ ಎಲ್ಲಾ ರೀತಿಯ ಸಾಲಗಳನ್ನು ಮನ್ನಾ ಮಾಡಬೇಕು. ಪ್ರಸಕ್ತವಾಗಿ ಆದಿವಾಸಿಗಳು ಆರ್ಥಿಕವಾಗಿ ತುಂಬಾ ಸಂಕಷ್ಟದಲ್ಲಿದ್ದಾರೆ.

7. **ಆದಿವಾಸಿ ವಲಸೆ ಕೆಲಸಗಾರರ ಪ್ರಶ್ನೆ:**

ವಿವಿಧ ರಾಜ್ಯಗಳಿಂದ ವಲಸೆ ಬಂದಿರುವ ಕೆಲಸಗಾರರಲ್ಲಿ ಆದಿವಾಸಿ ಸಮುದಾಯಗಳಿಂದ ಅತೀ ಹೆಚ್ಚು ಇದ್ದಾರೆ. ಅವರ ಗಣತಿ/ ದಾಖಲೆ ನೊಂದಾವಣೆಯನ್ನು ಮಾಡಬೇಕು. ಅವಘಡ ಸಂಭವಿಸದಾಗಲೂ ಇದು ನೆರವಿಗೆ ಬರುವುದು. ಅನ್ನಾಹಾರ ಒಳಗೊಂಡು ಅವರಿಗೆ ಎಲ್ಲಾ ನೆರವನ್ನು ನೀಡಬೇಕು.

ಇಂದಿನ ಅತ್ಯಂತ ಗಂಭೀರ ಪರಿಸ್ಥಿತಿಯಲ್ಲಿ ಆದಿವಾಸಿಗಳ ಈ ಕೆಲವು ಕನಿಷ್ಠ ಪ್ರಶ್ನೆಗಳನ್ನು ಇತ್ಯರ್ಥಪಡಿಸಲು ತಾವು ಸೂಕ್ತವಾದ ಕ್ರಮಗಳನ್ನು ತಕ್ಷಣವೇ ಕೈಗೊಳ್ಳಬೇಕೆಂದು ವಿನಂತಿಸುತ್ತೇವೆ.

ವೈ.ಕೆ. ಗಣೇಶ್, ರಾಜ್ಯ ಸಂಚಾಲಕರು – ಎಸ್.ವೈ. ಗುರುಶಾಂತ್, ಶ್ರೀಧರ ನಾಡ, ಜೆ.ಆರ್. ಪ್ರೇಮಾ, ಡಾ. ಕೃಷ್ಣಪ್ಪಕೊಂಚಾಡಿ, ಲಕ್ಷ್ಮಿ ಸಿದ್ದಿ, ರಾಜ್ಯ ಸಹ ಸಂಚಾಲಕರು (7–5–2020)

ನಗರದಿಂದ ದೂರದ ಚಿಕ್ಕಬಾಣಾವರ ಮತ್ತು ಮಾಲೂರು ರೈಲು ನಿಲ್ದಾಣದಿಂದ ಮಾಡಿದೆ. ಕನ್ನಡ ಮತ್ತು ಇಂಗ್ಲಿಷ್ ಎರಡೂ ಬಾರದ ಹೊರ ರಾಜ್ಯದ ವಲಸೆ ಕಾರ್ಮಿಕರಿಗೆ ಸೇವಾ ಸಿಂಧು ಆಪ್ ಮೂಲಕವೇ ಊರಿಗೆ ಹೋಗಲು ಅರ್ಜಿ ಸಲ್ಲಿಸಲು ಕಡ್ಡಾಯಗೊಳಿಸಿದೆ. ಸ್ಥಳೀಯ ಪೋಲಿಸರಿಗೂ ರೈಲುಗಳು ಹೊರಡುವ ಮಾಹಿತಿ ನೀಡದೆ ಅವರನ್ನು ಕತ್ತಲಲ್ಲಿ ಇಟ್ಟು ತಮಗೆ ಬೇಕಾದ ಬಿಲ್ಡರಗಳ ಹಿತಕ್ಕಾಗಿ ಅವರ ಕಾರ್ಮಿಕರನ್ನು ಮಾತ್ರ ರೈಲಿನಲ್ಲಿ ಗುಪ್ತವಾಗಿ ಕಳುಹಿಸಲು ಮುಂದಾಗಿದೆ.

ಹೊರ ರಾಜ್ಯದ ವಲಸೆ ಕಾರ್ಮಿಕರನ್ನು ತಮ್ಮ ಊರುಗಳಿಗೆ ಹಿಂತಿರುಗಿ ಹೋಗದಂತೆ ತಡೆಯಲು ಅಧಿಕಾರಿಗಳಿಗೆ ತಾಕೀತು ಮಾಡುತ್ತಿದೆ. ಉತ್ತರಪ್ರದೇಶ ಮತ್ತು ಬಿಹಾರದ ಸಾವಿರಾರು ಯುವ ವಲಸೆ ಕಾರ್ಮಿಕರು ಬೆಂಗಳೂರಿನ ಹೊರವಲಯದಿಂದ ನಡೆದು ಬಂದು ನೆನ್ನೆ ಮಧ್ಯಾಹ್ನದಿಂದಲೂ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಸಿಲುಕಿಕೊಂಡಿದ್ದಾರೆ. ಅವರ ನೆರವಿಗೆ ರಾಜ್ಯ ಸರಕಾರವು ಇಲ್ಲ ಕೇಂದ್ರದ ರೈಲ್ವೆ ಇಲಾಖೆಯು ಇಲ್ಲವಾಗಿದೆ. ವಾಪಸ್ಸು ಕೆಲಸದ ಸ್ಥಳಕ್ಕೆ ಹಿಂತಿರುಗಿ ಹೋಗಲು ಅವರಿಗೆ ಸ್ಥಳೀಯ ಅಧಿಕಾರಿಗಳು ತಾಕೀತು ಮಾಡುತ್ತಿದ್ದಾರೆ.

ಇಂತಹ ಹಲವು ಪ್ರಕರಣಗಳಿವೆ ಒಟ್ಟಾರೆ ರಾಜ್ಯ ಸರ್ಕಾರವು ಬಿಲ್ಡರಗಳ ಹಿತಕಾಯಲು ವಲಸೆ ಕಾರ್ಮಿಕರನ್ನು ಬಲಿ ಕೊಡುತ್ತಿದೆ. ಮುಂದೊಂದು ದಿನ ಇತರೆ ರಾಜ್ಯಗಳ ದೃಷ್ಟಿಯಲ್ಲಿ ರಾಜ್ಯವು ಕೆಟ್ಟ ಆಡಳಿತದ ರಾಜ್ಯವೆಂಬ ಅಪಕೀರ್ತಿಗೆ ಬಿಜೆಪಿಯ ಬಿಲ್ಡರಗಳ ಪರ ಧೋರಣೆಯಿಂದಾಗಿ ಪಾತ್ರವಾಗಲಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

ಕೆ.ಎನ್.ಉಮೇಶ್ ಕಾರ್ಯದರ್ಶಿ,
ಸಿಪಿಐ(ಎಂ) ಬೆಂ.ದ.ಜಿ. ಸಮಿತಿ
ಎನ್. ಪ್ರತಾಪ್ ಸಿಂಹ ಕಾರ್ಯದರ್ಶಿ,
ಸಿಪಿಐ(ಎಂ) ಬೆಂ.ಉ.ಜಿ. ಸಮಿತಿ (4.5.2020)

ಕೃಷಿ ಕೂಲಿಕಾರರನ್ನು ಕಡೆಗಣಿಸಿದ ಸರ್ಕಾರ

ಸನ್ಮಾನ್ಯ ಮುಖ್ಯ ಮಂತ್ರಿಗಳು
ಕರ್ನಾಟಕ ಸರಕಾರ,

ಕೋವಿಡ್–19 ಲಾಕ್ ಡೌನ್ ಪರಿಣಾಮವಾಗಿ ತೊಂದರೆಗೆ ಸಿಲುಕಿರುವ ಹೂವು ಬೆಳೆದ ರೈತರಿಗೆ, ಕ್ಷೌರಿಕರು, ಅಗಸರು, ಆಟೋ ಚಾಲಕರು, ಟ್ಯಾಕ್ಸಿ ಚಾಲಕರು, ಕಟ್ಟಡ ಕಾರ್ಮಿಕರು, ಮೊದಲಾದವರಿಗೆ ರೂ. 1610 ಕೋಟಿ ನೇರವನ್ನು ಘೋಷಣೆ ಮಾಡಿದ್ದೀರಿ.

ತಮ್ಮ ಸರಕಾರದ ಈ ಸಕಾಲಿಕ ಕ್ರಮದಿಂದಾಗಿ ಕೊರೋನ ಸೋಂಕಿನ ಹಾವಳಿಯಿಂದ ಬಳಲಿದ ಶ್ರಮಿಕ ವರ್ಗಕ್ಕೆ ತಾತ್ಕಾಲಿಕ ಪರಿಹಾರ ಸಿಕ್ಕಂತಾಗಿದ್ದು ನಾವು ನಿಮ್ಮನ್ನು ಅಭಿನಂದಿಸುತ್ತೇವೆ.

ಆದರೆ ತಮ್ಮ ಸರ್ಕಾರ ಘೋಷಿಸಿದ ಈ ಪ್ಯಾಕೆಜನಲ್ಲಿ ಕೃಷಿ ಕ್ಷೇತ್ರಕ್ಕೆ ತಮ್ಮ ಕೊಡುಗೆ ನೀಡುತ್ತಾ ಬಂದಿರುವ ಕೃಷಿ ಕಾರ್ಮಿಕರನ್ನು ಕಡೆಗಣಿಸಲಾಗಿದೆ ಎಂದು ತುಂಬಾ ನೋವಿನಿಂದ ಹೇಳುತ್ತೇವೆ. ರಾಜ್ಯದ ವಾರ್ಷಿಕ ಬಜೆಟ್ ಗಳಲ್ಲಿಯು ಅವರನ್ನು ಕಡೆಗಣಿಸುತ್ತ ಬರಲಾಗಿದೆ. ಕೇರಳ ಮಾದರಿಯಲ್ಲಿ ಕರ್ನಾಟಕದಲ್ಲಿ ಅವರಿಗಾಗಿ ಕಲ್ಯಾಣ ಕಾಯಿದೆ ಯಾಗಲಿ, ಕಲ್ಯಾಣ ಮಂಡಳಿಯಾಗಲಿ, ರಚನೆಯಗಿಲ್ಲ.

ಕೃಷಿ ರಂಗದಲ್ಲಿಯು ಅವರಿಗೆ ಮೊದಲಿನಂತೆ ಕೆಲಸ ದೊರೆಯುದಿಲ್ಲ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕುಟುಂಬದ ಒಬ್ಬ ಸದ್ಯಸನಿಗೆ ಮಾತ್ರ ಕೆಲಸ ದೊರುಕುವದರಿಂದ ಕೃಷಿ ಕಾರ್ಮಿಕ ಕುಟುಂಬಗಳು ವಲಸೆ ಹೋಗುತ್ತೇವೆ ಮತ್ತು ಸಿಕ್ಕಂತಹ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತೇವೆ. ಈ ಪ್ರಶ್ನೆಗಳನ್ನು ನಾವು ಆಗಾಗ ಸರ್ಕಾದ ಗಮನಕ್ಕೆ ತರುತ್ತಾ ಬಂದಿದ್ದೇವೆ.

ಕೊರೊನದಿಂದ ಕೃಷಿ ಕಾರ್ಮಿಕರು ಸಹ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಕಳೆದ ಎರಡು ತಿಂಗಳಿಂದ ಅವರಿಗೆ ಕೆಲಸವಿಲ್ಲ, ಇವರಿಗೆ ತಾತ್ಕಾಲಿಕ ಪರಿಹಾರವಾಗಿ ರೂ, 5000/– ನೆರವು ನೀಡಬೇಕೆಂದು ಆರಂಭದಲ್ಲಿಯೆ ನಾವು ತಮ್ಮ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೇವೆ, ಆದರೆ ಈಗಲೂ ಅವರನ್ನು ಕೈ ಬಿಟ್ಟು ತಾರತ್ಯಮ್ಮ ಮಾಡಲಾಗಿದೆ.

ಆದರಿಂದ ರಾಜ್ಯದ ಕೃಷಿ ಕಾರ್ಮಿಕರಿಗು ರೂ.5000/– ನೆರವು ನೀಡಬೇಕೆಂದು ವಿನಂತಿಸುತ್ತೇವೆ, ಬೇರೆ ಯಾವ ಮೂಲದಿಂದಲೂ ಪರಿಹಾರ ಪಡೆಯದಿರುವ ಕೃಷಿ ಕಾರ್ಮಿಕರಿಗೆ ನೆರವು ಸಂದಾಯ ಮಾಡುವಿರಿ ಎಂದು ಆಶಿಸುತ್ತೇವೆ.

ಚಂದ್ರಪ್ಪ ಹೊಸ್ಕೇರಾ ಪ್ರಧಾನ ಕಾರ್ಯದರ್ಶಿ,
ನಿತ್ಯಾನಂದಸ್ವಾಮಿ ಅಧ್ಯಕ್ಷರು (8–05–2020)

ಹೊರ ರಾಜ್ಯದ ವಲಸೆ ಕಾರ್ಮಿಕರಿಗೆ ಕೂಡಲೆ ಉಚಿತ ರೈಲುಗಳ ವ್ಯವಸ್ಥೆ ಮಾಡಲು ಸಿಪಿಐ(ಎಂ) ಆಗ್ರಹ

ತಮ್ಮ ಊರುಗಳಿಗೆ ಹಿಂತಿರುಗಿ ಹೋಗ ಬಯಸುವ ಹೊರ ರಾಜ್ಯದ ವಲಸೆ ಕಾರ್ಮಿಕರಿಗೆ ಕೂಡಲೆ ಉಚಿತ ರೈಲುಗಳ ವ್ಯವಸ್ಥೆ ಮಾಡಿ ಅವರುಗಳನ್ನು ಸುರಕ್ಷಿತವಾಗಿ ಕಳುಹಿಸಿ ಕೊಡುವ ವ್ಯವಸ್ಥೆ ಮಾಡಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸವಾದಿ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ರಾಜ್ಯ ಸರ್ಕಾರವನ್ನು ಆಗ್ರಹಿಸಿವೆ. ಊರಿಗೆ ಹಿಂತಿರುಗ ಬಯಸುವವರಿಗಾಗಿ ಕೂಡಲೇ ಪ್ರತ್ಯೇಕ ಸಹಾಯವಾಣಿ ಪ್ರಾರಂಭಿಸ ಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಈಗಾಗಲೆ ಹಲವು ಕಡೆ ಕಾರ್ಮಿಕರು ತಮ್ಮ ಊರುಗಳಿಗೆ ಹೋಗಲು ಬಿಡುತ್ತಿಲ್ಲ ಎಂದು ಪ್ರತಿಭಟನೆ ಧ್ವನಿ ಎತ್ತಿದ್ದಾರೆ. ಅವರನ್ನು ಕೆಲಸಕ್ಕೆಂದು ಕರೆತಂದ ಗುತ್ತಿಗೆದಾರರು ಪದಾರಿಯಾಗಿದ್ದಾರೆ. 40 ದಿನಗಳ ಲಾಕ್ಡೌನ್ ಅವಧಿಯಲ್ಲಿ ಪಡಬಾರದ ಪಡಿಪಾಟಲನ್ನು ಕಾರ್ಮಿಕರು ಪಟ್ಟಿದ್ದಾರೆ. ಇದೀಗ ತಮ್ಮ ಊರುಗಳಿಗೆ ಹೋಗಲು ಅನುಮತಿ ಇದ್ದರೂ ಸಹಾ ರೈಲುಗಳ ವ್ಯವಸ್ಥೆ ಇಲ್ಲದ ಕಾರಣ ಹತಾಶರಾಗಿದ್ದಾರೆ. ಪ್ರತಿ ರಾಜ್ಯಕೆಂದು ನೇಮಕವಾಗಿರುವ ನೋಡಲ್ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ಊರಿಗೆ ಹೋಗುವವರು ಯಾರನ್ನು ಸಂಪರ್ಕ ಮಾಡಬೇಕು ಎಂಬ ಯಾವುದೆ ವಿವರವನ್ನು ಪೂರ್ಣವಾಗಿ ಕಾರ್ಮಿಕರಿಗೆ ರಾಜ್ಯ ಸರ್ಕಾರವು ನೀಡುತ್ತಿಲ್ಲ ಎಂದು ಸಿಪಿಐ(ಎಂ) ಖಂಡಿಸಿದೆ.

ರಾಜ್ಯದವರೆ ಆದ ಕೇಂದ್ರ ರೈಲ್ವೆ ಸಚಿವರು ನಾಪತ್ತೆ ಆಗಿದ್ದಾರೆ, ಬಿಜೆಪಿ ಸಚಿವರು, ಸಂಸದರು,ಶಾಸಕರು ಹಲವರು ಎಲ್ಲಿ ಅಡಗಿಕೊಂಡಿದ್ದಾರೆ. ಬಾಯಿ ಬಿಟ್ಟರೆ ಸಾಕು ಜನರ ನಡುವೆ ದ್ವೇಶ ಬಿತ್ತುವ ಮಾತುಗಳನ್ನು ಹಾಡುತ್ತಿದ್ದ ಹಲವು ಬಿಜೆಪಿ ನಾಯಕರು, ಜನರು ಪರದಾಡುತಿರುವಾಗ ಎಲ್ಲಿ ಹೋಗಿದ್ದಾರೆ? ಎಂದು ಸಿಪಿಐ(ಎಂ) ಟೀಕಿಸಿದೆ.

ಕೆ.ಎನ್.ಉಮೇಶ್ ಕಾರ್ಯದರ್ಶಿ,
ಸಿಪಿಐ(ಎಂ) ಬೆಂ.ದ.ಜಿ. ಸಮಿತಿ
ಎನ್. ಪ್ರತಾಪ್ ಸಿಂಹ ಕಾರ್ಯದರ್ಶಿ,
ಸಿಪಿಐ(ಎಂ) ಬೆಂ.ಉ.ಜಿ. ಸಮಿತಿ (3.5.2020)

ಕೋವಿಡ್ 19 ಲಾಕ್ ಡೌನ್ ನಿಂದ ಸಂತ್ರಸ್ಥರಾದ ಇತರೆ ಅಸಂಘಟಿತ ಕಾರ್ಮಿಕರಿಗೂ ನೆರವು ನೀಡಿ

ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ

ಕರೋನ ವೈರಸ್ ಹಾವಳಿಯಿಂದ ಕಳೆದ 45 ದಿನಗಳಿಂದ ಸರಕಾರದ ಲಾಕ್ ಡೌನ್ ಪರಿಣಾಮವಾಗಿ ದಿನದ ಆದಾಯಗಳಿಲ್ಲದೇ ಇರುವ ಕ್ಷೌರಿಕರು, ಅಗಸರು, ಕಟ್ಟಡ ಕಾರ್ಮಿಕರಿಗೆ ತಾವು ತಮ್ಮ ಸರಕಾರದ ವತಿಯಿಂದ ರೂ.1610 ಕೋಟಿ ರೂಪಾಯಿಗಳ ನೆರವು ಘೋಷಿಸಿರುವುದನ್ನು ಸ್ವಾಗತಾರ್ಹ ಕ್ರಮವೆಂದು ಸಿಐಟಿಯು ಉಡುಪಿ ಜಿಲ್ಲಾ ಸಮಿತಿ ಅಭಿನಂದಿಸುತ್ತದೆ.

ಅದೇ ರೀತಿಯಲ್ಲಿ ಜಿಲ್ಲೆಯಲ್ಲಿ ಖಾಸಗೀ ಬಸ್ಸುಗಳಲ್ಲಿ ದಿನದ 15–16 ಗಂಟೆ ದುಡಿಯುತ್ತಿರುವ ನೌಕರರಿಗೆ ಕಾನೂನುಬದ್ಧ ಸೌಲಭ್ಯಗಳಾದ ಪಿಎಫ್, ಇಎಸ್ಐ ಮೊದಲಾದ ಸೌಲಭ್ಯಗಳಿಲ್ಲದ ಬಹುತೇಕರು ದಿನಗೂಲಿ ನೌಕರಾರಾಗಿದ್ದಾರೆ ಇವರಿಗೆ ಲಾಕ್ ಡೌನ್ ನ ಇಂದಿನ ಪರಿಸ್ಥಿತಿಯಲ್ಲಿ ಮಾಲಿಕರು ಯಾವುದೇ ಪರಿಹಾರ ನೀಡುತ್ತಿಲ್ಲ. ಬೇರೆ ಯಾವುದೇ ಆದಾಯ ಇಲ್ಲದ ಅವರ ಬಹುತೇಕ ಕುಟುಂಬಗಳು ಬಾಡಿಗೆ ಮನೆಯಲ್ಲಿದ್ದು ಸಂಕಷ್ಟದಲ್ಲಿದೆ.

ಹಾಗು ಜಿಲ್ಲೆಯಲ್ಲಿರುವ ಹಂಚು ಕಾರ್ಮಿಕರು ಕಡಿಮೆ ವೇತನದಲ್ಲಿ ದುಡಿಯುತ್ತಿದ್ದು ಹಂಚು ಉದ್ಯಮ ಸರಕಾರದ ಪ್ರೋತ್ಸಾಹವಿಲ್ಲದೆ ದಿನೆ ದಿನೇ ಬಿಕ್ಕಟ್ಟು ಆಳವಾಗುತ್ತಿದೆ. ಕಾರ್ಮಿಕರು ಅತಂತ್ರರಾಗುತ್ತಿದ್ದಾರೆ. ಬೀಡಿ, ಗೇರುಬೀಜ ಕಾರ್ಖಾನೆ ಕಾರ್ಮಿಕರು, ಕೆಲವು ಸಣ್ಣ ಕೈಗಾರಿಕೆಯಲ್ಲಿ ದುಡಿಯುತ್ತಿರುವ ಕಾರ್ಮಿಕರ ಪರಿಸ್ಥಿತಿಯೂ ಬಿನ್ನವಾಗಿಲ್ಲ ಆದ್ದರಿಂದ ತಾವು ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಎಲ್ಲಾ ಅಸಂಘಟಿತ ಕಾರ್ಮಿಕರಿಗೂ ತಲಾ ರೂ.5000/–ದಂತೆ ಪ್ಯಾಕೇಜ್ ವಿಸ್ತರಿಸಿ ಮಾನವೀಯತೆ ನೆಲೆಯಲ್ಲಿ ನೆರವು ಘೋಷಿಸಬೇಕೆಂದು ಸಿಐಟಿಯು ಉಡುಪಿ ಜಿಲ್ಲಾ ಸಮಿತಿಯು ತಮ್ಮಲಿ ಮನವಿ ಮಾಡಿಕೊಳ್ಳುತ್ತದೆ.

ಕೆ. ಶಂಕರ್ ಅಧ್ಯಕ್ಷರು, ಸುರೇಶ್ ಕಲ್ಲಾಗರ ಪ್ರಧಾನ ಕಾರ್ಯದರ್ಶಿ, (07.05.2020)

ಅತಿಥಿ ಅಂಕಣ



ಪ್ರೊ. ಎಂ. ಚಂದ್ರ ಪೂಜಾರಿ

ಕೊರೋನೋತ್ತರ ಭಾರತ ಹೇಗಿರಬಹುದು?

ಬಹುತೇಕರು ಸಮಗ್ರ ಬದಲಾವಣೆಯನ್ನು ಆರ್ಥಿಕ ಕುಸಿತದ ಹಿನ್ನೆಲೆಯಲ್ಲಿ ಕಲ್ಪಿಸಿಕೊಳ್ಳುತ್ತಿದ್ದಾರೆ. ಇವರ ವಾದ ಸರಣಿ ಇಂತಿದೆ. ಕೊರೋನ ಮುನ್ನವೇ ನಮ್ಮ ಅರ್ಥ ವ್ಯವಸ್ಥೆ ಕುಂಟುತ್ತಾ ಸಾಗುತ್ತಿತ್ತು. ಕೊರೋನ ನಂತರ ಆರ್ಥಿಕ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಂಡಿವೆ. ಇದರಿಂದ ಆರ್ಥಿಕ ಪ್ರಗತಿ ದರ ಮೈನಸ್ ಆಗುವ ಸಾಧ್ಯತೆ ಇದೆ. ಆರ್ಥಿಕ ಪ್ರಗತಿಯೇ ಇಲ್ಲವಾದರೆ ತೆರಿಗೆ ಸಂಗ್ರಹ ಕ್ಷೀಣಿಸುತ್ತದೆ. ಇದರಿಂದ ಶಿಕ್ಷಣ, ಆರೋಗ್ಯ, ಭದ್ರತೆ, ಉದ್ಯೋಗ ಇತ್ಯಾದಿ ಜವಾಬ್ದಾರಿಗಳನ್ನು ನಿರ್ವಹಿಸುವುದು ಸರಕಾರಕ್ಕೆ ಕಷ್ಟವಾಗುತ್ತದೆ. ಸರಕಾರದ ವೈಫಲ್ಯ ಎಲ್ಲ ಕ್ಷೇತ್ರಗಳಲ್ಲೂ ಎದ್ದು ಕಾಣಲು ಆರಂಭವಾಗುತ್ತದೆ. ಈಗಾಗಲೇ ನಿರುದ್ಯೋಗ ಹೆಚ್ಚಿರುವ ಸಂದರ್ಭದಲ್ಲಿ ಸರಕಾರದ ವೈಫಲ್ಯ ದೊಡ್ಡಪ್ರಮಾಣದ ಅರಾಜಕತೆಯನ್ನು ಸೃಷ್ಟಿಸಬಹುದು. ಇವೆಲ್ಲವೂ ಬದಲೀ ರಾಜಕೀಯ ಧ್ರುವೀಕರಣಕ್ಕೆ ಎಡೆಮಾಡಿಕೊಡಬಹುದು ಎನ್ನುವ ಊಹೆ ಇದೆ. ಆರ್ಥಿಕ ಕುಸಿತದಿಂದ ರಾಜಕೀಯ ಧ್ರುವೀಕರಣದ ವಾದವನ್ನು ಎರಡು ಮೂರು ನೆಲೆಯಲ್ಲಿ ಒಪ್ಪಲು ಸಾಧ್ಯವಿಲ್ಲ.

ಕೊರೋನ ಸಮಸ್ಯೆ ಅಂತ್ಯಗೊಂಡ ನಂತರ ಏನು? ಎನ್ನುವ ಚರ್ಚೆ ನಡೆಯುತ್ತಿದೆ.ಬಹುತೇಕ ಚರ್ಚೆಗಳು ಆರ್ಥಿಕ ಕುಸಿತವನ್ನು, ರಾಜಕೀಯ ಬದಲಾವಣೆಗಳನ್ನು, ಸಾಮಾಜಿಕ ಹಾಗು ಸಾಂಸ್ಕೃತಿಕ ಪರಿವರ್ತನೆಗಳನ್ನು ನಿರೀಕ್ಷಿಸುತ್ತಿವೆ. ಮುಂದಿನ ದಿನಗಳಲ್ಲಿ ನಮ್ಮ ಖಾಸಗಿ ಮತ್ತು ಸಾರ್ವಜನಿಕ ಬದುಕಿನಲ್ಲಿ ಮೇಲ್ಪದರದ ಬದಲಾವಣೆಗಳನ್ನು ಮಾತ್ರ ಕಾಣಲು ಸಾಧ್ಯ. ನಮ್ಮ ಸಮಾಜ, ಅರ್ಥ, ರಾಜಕೀಯ ಹಾಗು ಸಾಂಸ್ಕೃತಿಕ ಬದುಕುಗಳನ್ನು ಬುಡಮೇಲು ಮಾಡುವ ಪರಿವರ್ತನೆಗಳನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎನ್ನುವುದು ನನ್ನ ವಾದ. ಏಕೆಂದರೆ ಕೊರೋನದ ಸಮಸ್ಯೆಗೆ ಒಂದು ಅಂತ್ಯವಿಲ್ಲ. ಕನಿಷ್ಠ ಮೂರು ಅಂತ್ಯಗಳಿರುವ ಸಾಧ್ಯತೆ ಇದೆ. ಒಂದು, ಲಾಕ್‌ಡೌನ್‌ನ ಅಂತ್ಯ ಅಥವಾ ಕೊರೋನದ ಅಟ್ಟಹಾಸದ ಅಂತ್ಯ. ಎರಡು, ಕೊರೋನದೊಂದಿಗೆ ಬದುಕುವ ಅನಿವಾರ್ಯ ದಿನಗಳು ಮತ್ತು ಮೂರು, ಕೊರೋನದ ಅಂತ್ಯ ಅಥವಾ ಲಸಿಕೆ ಬಂದ ನಂತರದ ದಿನಗಳು. ಈ ಮೂರು ಹಂತಗಳು ಕೊರೋನ ಸೃಷ್ಟಿಸುವ ಅತಂತ್ರತೆಗಳನ್ನು ಪಳಗಿಸಲು ಸರಕಾರಕ್ಕೆ ಸಾಕಷ್ಟು ಅವಕಾಶ ಕಲ್ಪಿಸುತ್ತವೆ.

ಲಾಕ್‌ಡೌನ್ ಹಂತ

ಮಾರ್ಚ್ 15ರಿಂದ ಲಾಕ್‌ಡೌನ್ ದಿನಗಳು ಅಥವಾ ಕೊರೋನ ಅಟ್ಟಹಾಸದ ದಿನಗಳು ಆರಂಭವಾಗಿವೆ. ಇದು ಬೇರೆ ಬೇರೆ ರೂಪದಲ್ಲಿ ಅಂದರೆ ರೆಡ್‌ಜೋನ್, ಯಲ್ಲೋ ಜೋನ್ ಮತ್ತು ಗ್ರೀನ್ ಜೋನ್ ರೂಪದಲ್ಲಿ ಇನ್ನೂ ಮೂರು ನಾಲ್ಕು ತಿಂಗಳು ಮುಂದುವರಿಯುವ ಸಾಧ್ಯತೆ ಇದೆ. ಕೊರೋನ ಅಟ್ಟಹಾಸವನ್ನು ಜನರ ಪ್ರಜ್ಞೆಯ ಭಾಗ ಮಾಡಿದ್ದು ಸರಕಾರ ಮತ್ತು ಮಾಧ್ಯಮಗಳು. ಹಾಗಾಗಿ ಸರಕಾರ ತೀರ್ಮಾನಿಸಿದ ದಿನದಂದು ಕೊರೋನದ ಅಟ್ಟಹಾಸ ನಿಲ್ಲುತ್ತದೆ. ಅಂದರೆ ಸೋಂಕಿತರು, ಸತ್ತುವರು, ಗುಣಮುಖ ಆದವರ ಸಂಖ್ಯೆಯನ್ನು ಸರಕಾರ ಸಾರ್ವಜನಿಕಗೊಳಿಸುವುದು ಮತ್ತು ಅವನ್ನು ಕ್ರಿಕೆಟ್ ಸ್ಕೋರ್ ತರಹಮಾಧ್ಯಮಗಳು ಬಿತ್ತರಿಸುವುದು ನಿಂತ ನಂತರ ಕೊರೋನದ ಅಟ್ಟಹಾಸ ನಿಲ್ಲುತ್ತದೆ. ಆದರೆ ಸರಕಾರ ಕೂಡಒಮ್ಮಿಂದೊಮ್ಮೆಲೆ ನಿಲ್ಲಿಸಲು ಸಾಧ್ಯವಾಗುವುದಿಲ್ಲ.ಸೋಂಕಿತರ ಸಂಖ್ಯೆ ಇಳಿಮುಖವಾಗುವುದನ್ನು ನೋಡಿಕೊಂಡು ನಿಧಾನವಾಗಿ ನಿಲ್ಲಿಸಬೇಕಾಗುತ್ತದೆ. ಆ ಪ್ರಯತ್ನ ಈಗಾಗಲೇ ಆರಂಭವಾಗಿದೆ. ಕೊರೋನ ಸೋಂಕೇ ಇಲ್ಲದ ಜಿಲ್ಲೆಗಳನ್ನುಗುರುತಿಸುವುದು, ಸಮುದಾಯಕ್ಕೆ ಹರಡಿಲ್ಲವೆಂದು ದೃಢ ಪಡಿಸುವುದು, ಗ್ರಾಮೀಣ ಪ್ರದೇಶ ಕೊರೋನ ಸಮಸ್ಯೆಯಿಂದ ಹೊರಗಿದೆಯೆಂದು ಹೇಳುವುದು, ಸೋಂಕಿತರ ಸಂಖ್ಯೆ ದ್ವಿಗುಣಗೊಳ್ಳುವ ದಿನಗಳು ಹೆಚ್ಚಾಗುತ್ತಿದೆಯೆಂದು ಹೇಳುವುದು ಅಂದರೆ ಮೊದಲು ಮೂರು ದಿನಗಳಲ್ಲಿ ಸೋಂಕಿತರ ಸಂಖ್ಯೆ 100 ಇದ್ದದ್ದು 200 ಆಗುತ್ತಿತ್ತು ಕ್ರಮೇಣ ದ್ವಿಗುಣಗೊಳ್ಳಲು 7 ದಿನ ಅಥವಾ 10 ದಿನ ಬೇಕಾಗುತ್ತದೆಯೆಂದು ಹೇಳುವುದು ಇವೆಲ್ಲ ನಡೆದಿದೆ. ಇದೇ ವಿಧಾನದಲ್ಲಿ ಕೊರೊನ ಸೋಂಕಿತರ, ಸತ್ತವರ ಸಂಖ್ಯೆ ಇಳಿಮುಖವಾಗುವುದನ್ನು ಮುಂದಿನ ದಿನಗಳಲ್ಲಿ ನೋಡಲಿದ್ದೇವೆ. ಕೊರೋನ ಅಟ್ಟಹಾಸವನ್ನು ಸರಕಾರ ಹತೋಟಿಗೆ ತಂದಿದೆ ಎನ್ನುವ ಚಿತ್ರಣ ಲಭ್ಯವಾದ ದಿನ ಲಾಕ್‌ಡೌನ್ ಸಂಪೂರ್ಣ ತೆರವುಗೊಳ್ಳುತ್ತದೆ. ಹೆಚ್ಚುಕಡಿಮೆ ಮೂರು ನಾಲ್ಕು ತಿಂಗಳುಕೊರೋನ ಅಟ್ಟಹಾಸದ ದಿನಗಳ ಚಿತ್ರಣ ಇರಬಹುದು.



ಅತ್ಯಂತ ನಾಟಕೀಯ ಬದಲಾವಣೆಗಳನ್ನು ನೋಡಲು ಸಾಧ್ಯವಾಗುವುದು ಕೊರೋನ ಅಟ್ಟಹಾಸ ದಿನಗಳಲ್ಲೇ. ಇದನ್ನು ನಾನು ನಾಟಕೀಯ ಎನ್ನುವುದು ಏಕೆಂದರೆ ಇವು ಯಾವುವು ಹಿಂದೆ ಇರಲಿಲ್ಲ ಮತ್ತು ಮುಂದೆಯೂ ಇರುವುದಿಲ್ಲ. ನಾಟಕೀಯತೆಯನ್ನು ಮೇಲ್‌ಸ್ತರದಿಂದ ಆರಂಭಿಸುವುದಾದರೆ ಕ್ಷಮೆಯೇ ಕೇಳದ ಪ್ರಧಾನಿಯವರು ಲಾಕ್‌ಡೌನ್ ವಿಧಿಸಿ ಜನರನ್ನು ಸಂಕಷ್ಟಕ್ಕೆ ದೂಡಿದ್ದಕ್ಕೆ ಸಾರ್ವಜನಿಕ ಕ್ಷಮೆ ಕೋರಿದ್ದು ಮೊದಲ ಸ್ಥಾನದಲ್ಲಿದೆ. ಕೆಲಸಕ್ಕೆ ಬಾರದಿದ್ದರೂ ಖಾಸಗಿ ವಲಯದಲ್ಲಿ ದುಡಿಯುವ ಅಸಂಘಟಿತ ಕಾರ್ಮಿಕರಿಗೆ ಸಂಬಳ ಕೊಡಲು, ರೇಶನ್ ಕಾರ್ಡ್ ಇಲ್ಲದಿದ್ದರೂ ರೇಶನ್ ಕೊಡಲು, ಮಂದಿರ, ಮಸೀದಿ, ಚರ್ಚ್‌ಗಳನ್ನು ಮುಚ್ಚಲು, ಎಂಪಿ, ಎಂಎಲ್‌ಎಗಳ ಸಂಬಳವನ್ನು ಕಡಿತ ಮಾಡಲು ಆದೇಶ ಮಾಡಿದ್ದು ಇವೆಲ್ಲವೂ ಊಹಿಸಲು ಅಸಾಧ್ಯ ಕ್ರಮಗಳು. ಹಲವು ಶ್ರೀಮಂತರು ಕೊರೋನ ಪರಿಹಾರಕ್ಕೆ ಕೋಟಿಗಟ್ಟಲೆ ಹಣ ನೀಡಿದ್ದು ಕೂಡ ಅಪರೂಪ ಕ್ರಮ. ಇವೆಲ್ಲ ಮೇಲ್‌ಸ್ತರದಲ್ಲಿ ಕಂಡ ಬದಲಾವಣೆಗಳ ಕೆಲವು ಸ್ಯಾಂಪಲ್‌ಗಳು.

ಹಲವು ತಿಂಗಳು ಲಾಕ್‌ಡೌನ್ ಆದರೂ ಸುಧಾರಿಸಿಕೊಳ್ಳುವಷ್ಟು ಶಕ್ತಿಯುಳ್ಳವರುಮಧ್ಯಮ ವರ್ಗದವರು. ತಮ್ಮ ನೆಮ್ಮದಿ ಬದುಕು, ಆರೋಗ್ಯ, ಶುಚಿತ್ವ ಮತ್ತು ನೆರೆಯವರ ನೆಮ್ಮದಿ ಬದುಕು, ಆರೋಗ್ಯ, ಶುಚಿತ್ವಗಳ ನಡುವೆ ಸಂಬಂಧ ಇದೆಯೆಂದು ಆಲೊಚಿಸಿದವರಲ್ಲ ಇವರು. ಆದರೆ ತಮ್ಮ ನೆಮ್ಮದಿ ನೆರೆಯವರ ನೆಮ್ಮದಿಯಲ್ಲಿದೆ ಎನ್ನುವ ಪಾಠವನ್ನು ಕೊರೊನ ಮಾಡುತ್ತಿದೆ. ಇವರು ಕೂಡ ಸಾಕಷ್ಟು ಔದಾರ್ಯ ಪ್ರದರ್ಶನ ಮಾಡಿದ್ದಾರೆ. ದೇಣಿಗೆ ನೀಡಿದ್ದಾರೆ, ರೇಶನ್ ಹಂಚಿದ್ದಾರೆ, ಅಸಹಾಯಕರಿಗೆ ಊಟ ನೀಡಿದ್ದಾರೆ, ಶುಚಿತ್ವದ ಬಗ್ಗೆ ಪಾಠ ಮಾಡಿದ್ದಾರೆ. ಜೊತೆಗೆ ಸಾಕಷ್ಟು ಮಾನಸಿಕವಾಗಿ ಬಳಲಿದ್ದಾರೆ. ತಾನು, ತನ್ನ ಕುಟುಂಬದ ನೆಮ್ಮದಿ ಬದುಕು ತನ್ನ ದುಡಿಮೆಯಲ್ಲಿ ಅಡಗಿದೆ ಎಂದು ನಂಬಿದವರು ಇವರು. ಇದೇ ಕಾರಣದಿಂದಕೈತೊಳೆಯುವ, ಸ್ನಾನ ಮಾಡುವ, ತ್ಯಾಜ್ಯ ನಿರ್ವಹಣೆ ಇತ್ಯಾದಿ ಖಾಸಗಿ ಶುಚಿತ್ವವನ್ನು ಹೆಚ್ಚಿಸಿಕೊಂಡಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸುವುದು, ಸಾಮಾಜಿಕ ಅಂತರ ಕಾಪಾಡುವುದನ್ನು ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾರೆ. ಸಾರ್ವಜನಿಕ ಸ್ಥಳಗಳಲ್ಲಿ ಅಥವಾ ನೆರೆಯವರು ಕೆಮ್ಮಿದರೆ, ಉಗುಳಿದರೆ, ಸೀನಿದರೆ ಆತಂಕ ಪಡುತ್ತಾರೆ. ಪೋಲಿಸರಿಗೆ, ಆಸ್ಪತ್ರೆಗೆ ಫೋನ್ ಮಾಡುತ್ತಾರೆ.

ಮೂಲಸೌಕರ್ಯಗಳ ಕೊರತೆಯನ್ನು ಅನುಭವಿಸುತ್ತಲೇ ಬಂದವರು ತಳಸ್ತರದ ಜನರು. ಹಾಗೆಂದು ಇವರಲ್ಲಿ ಬಹುತೇಕರು ತಮ್ಮ ಮಾನಸಮ್ಮಾನವನ್ನು ಬಲಿಕೊಟ್ಟು ಬದುಕಿದವರಲ್ಲ. ಅಂದರೆ ಕೊರತೆ ಇದೆಯೆಂದು ಮತ್ತೊಬ್ಬರಲ್ಲಿ ಭಿಕ್ಷೆ ಬೇಡುವವರಲ್ಲ; ಸಣ್ಣಪುಟ್ಟ ವ್ಯಾಪಾರ, ಉದ್ದಿಮೆ, ಉದ್ಯೋಗ ಮಾಡಿ ಜೀವನ ಮಾಡುವವರು. ಲಾಕ್‌ಡೌನ್ ಇವರಲ್ಲಿ ಬಹುತೇಕರ ಜೀವನೋಪಾಯದ ಎಲ್ಲ ದಾರಿಗಳನ್ನು ಮುಚ್ಚಿದೆ. ಇದರಿಂದಾಗಿ ಇವರಲ್ಲಿ ಕೆಲವರು ಸರಕಾರ ಅಥವಾ ಸರಕಾರೇತರ ಸಂಸ್ಥೆಗಳು ನೀಡುವ ಊಟದ ಪ್ಯಾಕ್‌ಗಳನ್ನು ಅವಲಂಬಿಸುವ ಸ್ಥಿತಿ ನಿರ್ಮಾಣ ಆಗಿದೆ. ಇದಕ್ಕಾಗಿ ಬೀದಿಬದಿಯಲ್ಲಿ ಕ್ಯೂ ನಿಲ್ಲಬೇಕು. ದುಡಿದು ಉಣ್ಣುವವರು ಬೀದಿಬದಿಯಲ್ಲಿ ನೂರಾರು ಜನರೊಂದಿಗೆ ಒಂದು ತುತ್ತು ಅನ್ನಕ್ಕಾಗಿ ಕ್ಯೂ ನಿಲ್ಲುವುದು ಹಿಂಸೆಯ ಸಂಗತಿ. ಇವರ ಮಾನಸಿಕ ತೊಳಲಾಟವನ್ನು ಅನುಭವಿಸಿದವರು ಮಾತ್ರ ಹೇಳಲು ಸಾಧ್ಯ. ಇವರ್‍ಯಾರು ಕಾನೂನು ಮುರಿಯುವವರಲ್ಲ, ಪೋಲಿಸರನ್ನು ಎದುರಿಸುವವರಲ್ಲ. ಬದುಕಿ ಉಳಿಯಲು ಇವರು ಬೀದಿಗೆ ಬರುವುದು ಅನಿವಾರ್ಯ. ಇವರ ಈ ನಡೆ ಜೀವನಪೂರ್ತಿ ಪಥ್ಯದಲ್ಲಿರುವವರನ್ನು ದೇಶಕ್ಕಾಗಿ ಪಥ್ಯ ಮಾಡಲು ರೆಡಿ ಇಲ್ಲದವರ ಸ್ಥಾನದಲ್ಲಿ ನಿಲ್ಲಿಸುತ್ತಿದೆ.

ಎರಡನೇ ಸ್ಟೇಜ್

ಲಾಕ್‌ಡೌನ್ ಮುಕ್ತಾಯಗೊಂಡು ಕೊರೋನ ರೋಗಕ್ಕೆ ಲಸಿಕೆ ಬರುವ ಮಧ್ಯದ ಅವಧಿಯನ್ನು ಕೊರೋನ ಅಂತ್ಯದ ಎರಡನೇ ಸ್ಟೇಜ್ ಎನ್ನಬಹುದು. ರೋಗ ಪರಿಹಾರ ಲಸಿಕೆಯ ಹುಡುಕಾಟ ಭರದಿಂದ ಸಾಗಿದೆ. ಕೆಲವರ ಪ್ರಕಾರ ಈ ಡಿಸೆಂಬರ್ ವೇಳೆಗೆ ಲಸಿಕೆ ಬಳಕೆಗೆ ಬರಬಹುದು. ಇನ್ನು ಕೆಲವರ ಪ್ರಕಾರ ಲಸಿಕೆ ಸಿದ್ದಗೊಳ್ಳಲು ಕನಿಷ್ಠ ಇನ್ನೂ ಒಂದು ವರ್ಷ ಕಾಯಬೇಕಾಗಿದೆ. ಒಂದು ವರ್ಷದ ನಂತರ ಲಸಿಕೆ ಬಂದರೂ ಅದನ್ನು ಎಲ್ಲರಿಗೂ ನೀಡಿ ರೋಗ ನಿರೋಧಕ ಶಕ್ತಿರೂಪುಗೊಳ್ಳಲು ಕನಿಷ್ಠ ಎರಡು ಮೂರು ವರ್ಷಗಳು ಬೇಕು. ಇದು ಅತ್ಯಂತ ಕ್ರೂಶಿಯಲ್ ಅವಧಿ. ಈ ಅವಧಿಯಲ್ಲಿ ಕೊರೊನ ರೋಗದ ಏರಿಳಿಕೆಯ ನೆಲೆಯಲ್ಲಿ ಒಂದೆರಡು ಬದಲಾವಣೆಗಳನ್ನು ನಿರೀಕ್ಷಿಸಬಹುದು. ಒಂದು, ಮನೆಯಿಂದಲೇ ಕೆಲಸ ಮಾಡುವ ಪ್ರಾಕ್ಟೀಸ್ ಹೆಚ್ಚಾಗಬಹುದು. ಆದರೆ ಇದು ಮಾಹಿತಿ ತಂತ್ರಜ್ಞಾನ ಬಳಕೆಯಿಂದ ಪೂರ್ಣಗೊಳಿಸಲು ಸಾಧ್ಯವಾಗುವ ಕೆಲವು ಕೆಲಸಗಳಿಗೆ ಮಾತ್ರ ಸೀಮಿತ. ಇನ್ನುಳಿದ ಕೆಲಸಗಳಿಗೆ ಜನರು ಸಾರ್ವಜನಿಕ ಸ್ಥಳಗಳಲ್ಲಿ ಓಡಾಡುವುದು ಅನಿವಾರ್ಯ. ಇಂತಹ ಸಂದರ್ಭದಲ್ಲಿ ಮಧ್ಯಮ ವರ್ಗದ ಜನರು ಲಾಕ್‌ಡೌನ್ ಸಂದರ್ಭದ ಆರೋಗ್ಯ ಸಂಬಂಧಿ ಜಾಗ್ರತೆಯನ್ನು ಪಾಲಿಸಲು ಪ್ರಯತ್ನಿಸಬಹುದು. ಇವರ ಪ್ರಯತ್ನ ಇವರ ಮನೆ ಮತ್ತು ಇವರು ಕೆಲಸ ಮಾಡುವ ಸ್ಥಳಗಳಲ್ಲಿ ಮಾತ್ರ ನಡೆಯಬಹುದು.

ಸಾರ್ವಜನಿಕ ಸ್ಥಳಗಳಲ್ಲಿ ಅಸಂಘಟಿತ ವಲಯ ಮತ್ತು ಅಸಂಘಟಿತ ಕಾರ್ಮಿಕರು ಹೆಚ್ಚಿದ್ದಾರೆ. ಸರಕಾರ ಇವರಿಗೆ ಸಂಬಳ, ಉದ್ಯೋಗ, ಸಾಮಾಜಿಕ ಭದ್ರತೆಗಳನ್ನು ಕೊರೋನ–ಪೂರ್ವದಲ್ಲೂ ನೀಡಿಲ್ಲ. ಈ ಅವಧಿಯಲ್ಲೂ ನೀಡುವ ಗ್ಯಾರಂಟಿ ಇಲ್ಲ. ಈ ಎಲ್ಲ ಭದ್ರತೆಗಳಿಲ್ಲದೆ ಅವರ ಊಟ, ವಸತಿ, ಆರೋಗ್ಯ, ಕುಡಿಯುವ ನೀರು ಇತ್ಯಾದಿ ಮೂಲಸೌಕರ್ಯಗಳು ಸುಧಾರಿಸಲು ಸಾಧ್ಯವಿಲ್ಲ. ಹಾಗೆಂದು ರೋಗಕ್ಕೆ ಹೆದರಿ ಮನೆಯಲ್ಲಿರಲು ಸಾಧ್ಯವಿಲ್ಲ. ದುಡಿಯಲು ಹೊರಗೆ ಹೋಗಲೇ ಬೇಕು. ಇದರಿಂದಕೊರೋನಕ್ಕೆ ಬಲಿಯಾಗುವವರಲ್ಲಿ ಇವರ ಸಂಖ್ಯೆ ಹೆಚ್ಚಾಗಬಹುದು. ಇವರ ಸಾವನ್ನು ಸಾರ್ವಜನಿಕ ಆರೋಗ್ಯ ಸಮಸ್ಯೆಯೆಂದು ಮಾಧ್ಯಮಗಳು ಬಿಂಬಿಸುವ ಸಾಧ್ಯತೆ ಇಲ್ಲ. ಏಕೆಂದರೆ ಸರಕಾರದ ಧೋರಣೆಯನ್ನು ಬಿಂಬಿಸಲು ಸರಕಾರಿ ಚ್ಯಾನಲ್‌ಗಳ ಜೊತೆ ಖಾಸಗಿ ಚ್ಯಾನಲ್‌ಗಳು ಸ್ಪರ್ಧಿಸುತ್ತಿವೆ. ಇಂತಹ ಸಂದರ್ಭದಲ್ಲಿ ಲಾಕ್‌ಡೌನ್ ನಂತರದ ಕೊರೋನ ಸೋಂಕು ಮತ್ತು ಸಾವಿನ ಸಂಖ್ಯೆಯನ್ನು ವಸ್ತುನಿಷ್ಠವಾಗಿ ಬಿಂಬಿಸುವ ಮಾಧ್ಯಮಗಳನ್ನು ಹುಡುಕುವುದು ಕಷ್ಟ. ಲಾಕ್‌ಡೌನ್ ನಂತರವೂ ಕೊರೋನದಿಂದ ಸತ್ತವರ ಸಂಖ್ಯೆ ಏರಿದರೆ ಸರಕಾರದ ಲಾಕ್‌ಡೌನ್ ನೀತಿಯೇ ತಪ್ಪು ಎಂದು ಸರಕಾರ ವೈಫಲ್ಯವನ್ನು ಬಿಂಬಿಸಿದಂತಾಗುತ್ತದೆ. ಇದನ್ನು ಸರಕಾರ ಇಷ್ಟಪಡುವುದಿಲ್ಲ.

ಸಾವು ಸಹಜವಾಗುವ ಮತ್ತೊಂದು ಸಾಧ್ಯತೆ ಇದೆ. ಪ್ರತಿ ವರ್ಷ 1.5 ಲಕ್ಷದಷ್ಟು ಜನ ರಸ್ತೆ ಅಪಘಾತದಿಂದ,4.5 ಲಕ್ಷದಷ್ಟು ಜನ ಟಿಬಿಯಿಂದ, 7ಲಕ್ಷದಷ್ಟು ಮಕ್ಕಳು ಅಪೌಷ್ಟಿಕತೆಯಿಂದ, 1.3 ಲಕ್ಷ ಜನ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಾರೆ. ಇದೇ ರೀತಿ ಏಯಿಡ್ಸ್, ಫ್ಲೂ, ಮಲೇರಿಯಾ ಇತ್ಯಾದಿ ರೋಗಗಳಿಂದ ಸಾಯುವವರ ಸಂಖ್ಯೆ ಕೆಲವು ಸಾವಿರ ಇದೆ. ಇವೆಲ್ಲ ಆರಂಭದಲ್ಲಿ ಸುದ್ದಿ ಮಾಡಿವೆ.

ಪುಟ 12 ನೋಡಿ



ಮಹಾಮಾರಿಯ ವಿರುದ್ಧ ಸಮರದ ಮರೆಯಲ್ಲಿ
ಕಾರ್ಮಿಕರ ವಿರುದ್ಧ ಮೋದಿ ಸರಕಾರದ ಯುದ್ಧ

ಕೊವಿಡ್ ಮಹಾಮಾರಿ ಕಾರ್ಮಿಕ ವರ್ಗದ ನಿಜವಾದ ಪರಿಸ್ಥಿತಿಗಳನ್ನು "ವಲಸೆ ಕಾರ್ಮಿಕರ ಬಿಕ್ಕಟ್ಟಿ"ನ ಮೂಲಕ ಬಿಚ್ಚಿಟ್ಟಿದೆ. ಇದು ಸದಾ ಮುಖ್ಯಧಾರೆಯ ಮಾಧ್ಯಮಗಳು ಮತ್ತು ಸಾರ್ವಜನಿಕ ಸಂವಾದಗಳಿಂದ ಮರೆಯಾಗಿಯೇ ಉಳಿದಿದ್ದ ಒಂದು ಸಂಗತಿ. ಮೋದಿ ಸರಕಾರ ಕಾರ್ಮಿಕ ವರ್ಗದ ಈ ಬೃಹತ್ ವಿಭಾಗವನ್ನು ಹೇಗೆ ಕಾಣುತ್ತಿದೆ ಎಂಬುದನ್ನೂ ಈ ಮಹಾಮಾರಿ ನಗ್ನವಾಗಿ ಬಯಲಿಗೆಳೆದಿದೆ. ವಲಸೆ ಕಾರ್ಮಿಕರನ್ನು ನಡೆಸಿಕೊಂಡಿರುವ ರೀತಿ ಒಟ್ಟಾರೆಯಾಗಿ ಕಾರ್ಮಿಕರ ಹಕ್ಕುಗಳ ಮೇಲೆ ಬರಲಿರುವ ದಾಳಿಗಳ ಮುನ್ಸೂಚನೆಯಾಗಿದೆ. ಏಕೆಂದರೆ ತಾನು ಎದುರಿಸಬೇಕಾದ ಪ್ರತಿಯೊಂದು ಬಿಕ್ಕಟ್ಟನ್ನು ಕಾರ್ಮಿಕರ ಹಿತಗಳನ್ನು ಬಲಿಗೊಟ್ಟೇ ಪರಿಹರಿಸಬೇಕು ಎಂಬುದು ಬಂಡವಾಳಶಾಹಿಯ ಒಂದು ನಿಯಮವೇ ಆಗಿದೆ.



ಪ್ರಕಾಶ ಕಾರಟ್

ಕೊವಿಡ್-19 ವೈರಾಣು ಮೇಲಿನ ಸಮರ ಭಾರತದಲ್ಲಿ ಕಾರ್ಮಿಕ ವರ್ಗದ ಮೇಲಿನ ಒಂದು ಯುದ್ಧವಾಗಿ ಬಹುಬೇಗನೇ ಪರಿವರ್ತನೆಗೊಳ್ಳುತ್ತಿದೆ. ಸಂಸತ್ತಿನಲ್ಲಿ, ಈ ವರ್ಷ ಮಾರ್ಚ್‌ನಲ್ಲಿ ಅಂದಾಜು ಸುಮಾರು 10 ಕೋಟಿ ಅಂತರ-ರಾಜ್ಯ ವಲಸೆ ಕಾರ್ಮಿಕರಿದ್ದಾರೆ ಎಂದು ಸರಕಾರ ಹೇಳಿತ್ತು. ಈಗ ಅವರಲ್ಲಿ ಬಹುಪಾಲು ಮಂದಿ ಲಾಕ್‌ಡೌನ್ ಹೇರಿದ್ದರಿಂದ ತಮ್ಮ ಜೀವನೋಪಾಯಗಳನ್ನು ಕಳಕೊಂಡಿರುತ್ತಾರೆ. ಅವರು ತಾವು ಉಳಕೊಂಡಿದ್ದ ಸ್ಥಳಗಳನ್ನೂ ಕಳಕೊಂಡಿದ್ದಾರೆ. ತಮ್ಮ ಕುಟುಂಬಗಳಿಗೆ ಆಹಾರ ಮತ್ತು ಆಶ್ರಯ ಇಲ್ಲದೆ ಹತಾಶರಾಗಿದ್ದಾರೆ. ವಲಸೆ ಕಾರ್ಮಿಕರು ಎಂದು ಕರೆಯಲಾಗುವವರಲ್ಲಿ ಬಹುಪಾಲು ನಿಜವಾಗಿಯೂ ಕಾರ್ಮಿಕ ವರ್ಗವೇ- ಕಟ್ಟಡ ನಿರ್ಮಾಣ, ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ಹಾಗೂ ಮಾರುಕಟ್ಟೆಗಳು ಮತ್ತು ವಿತರಣಾ ಜಾಲಗಳಲ್ಲಿನ ಕೂಲಿಕಾರರು.

ನವ-ಉದಾರವಾದಿ ಬಂಡವಾಳಶಾಹಿ ಪ್ರಜ್ಞಾಪೂರ್ವಕವಾಗಿಯೇ ಶ್ರಮಿಕ ಶಕ್ತಿಯನ್ನು ಅನೌಪಚಾರಿಕಗೊಳಿಸಿದೆ. ಗ್ರಾಮೀಣ ಪ್ರದೇಶಗಳಿಂದ ಅಥವ ಬೇರೆ ರಾಜ್ಯಗಳಿಂದ ನಗರಗಳಿಗೆ, ಅಥವ ಕೈಗಾರಿಕಾ ಪ್ರದೇಶಗಳಿಗೆ ಕೆಲಸ ಹುಡುಕಿಕೊಂಡು ಹೋದವರು ಬಹಳ ಕಾಲದಿಂದ ಕಾಖಾನೆಗಳಲ್ಲಿ, ವಾಣಿಜ್ಯ ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿದ್ದರೂ, ಅವರನ್ನು ಇನ್ನೂ 'ವಲಸೆ ಕಾರ್ಮಿಕರು' ಎಂದೇ ಕರೆಯಲಾಗುತ್ತಿದೆ. ಏಕೆಂದರೆ ಅವರಿಗೆ ಒಂದು ಖಾಯಂ ಉದ್ಯೋಗವಿಲ್ಲ, ಆದಾಯವಿಲ್ಲ, ಅಥವ ಸಾಮಾಜಿಕ ಭದ್ರತೆಯಿಲ್ಲ, ಅಥವ ತಮ್ಮದು ಎನ್ನುವ ವಸತಿ ಇಲ್ಲ.

ಸ್ವಾತಂತ್ರ್ಯದ ಆರಂಭದ ದಶಕಗಳಲ್ಲಿ ಕಾರ್ಮಿಕ ವರ್ಗದ ಮೊದಲ ಪೀಳಿಗೆ ತಮ್ಮ ಕೆಲಸದ ಸ್ಥಳಗಳ ಬಳಿಯೇ ನೆಲೆಸಿದರು, ಸ್ಥಳೀಯ ಸಮಾಜದ ಭಾಗವಾಗಿ ಬಿಟ್ಟರು. ಇದಕ್ಕೆ ವ್ಯತಿರಿಕ್ತವಾಗಿ, ಇಂದಿನ ಶ್ರಮಿಕ ಶಕ್ತಿಯ ಬಹುಪಾಲು (90 ಶೇ.) ದಿನಗೂಲಿಗಳು, ಕ್ಯಾಶುವಲ್ ಮತ್ತು ಕಾಂಟ್ರಾಕ್ಟ್ ಕಾರ್ಮಿಕರು, ಅವರಿಗೆ ತಮ್ಮ ಕೆಲಸದ ಸ್ಥಳಗಳ ಸಮೀಪ ಬೇರು ಬಿಡಲು ಅವಕಾಶ ಕೊಡುತ್ತಿಲ್ಲ.

ಹೀಗೆ ಇವರ ಪರಿಸ್ಥಿತಿಗಳನ್ನು ಫ್ರೆಡರಿಕ್ ಎಂಗೆಲ್ಸ್ ನಿರೂಪಿಸಿದ "ಬಂಡವಾಳಶಾಹೀ ಶೋಷಣೆಯ ತಾರುಣ್ಯ ಸ್ಥಿತಿ" ಎಂದು ವರ್ಣಿಸಬಹುದು. ಈ ಸ್ಥಿತಿಯಲ್ಲಿ ಕಾರ್ಮಿಕರು ಮತ್ತು ಅವರ ಕುಟುಂಬಗಳು ಶೋಷಣೆಯ ಅತ್ಯಂತ ಆದಿಮ ಸ್ವರೂಪಗಳ ಅಡಿಯಲ್ಲಿ ನರಳಬೇಕಾಗುತ್ತದೆ. ಎಂಗೆಲ್ಸ್ 1845ರಲ್ಲಿ ಬರೆದ ತನ್ನ "ಇಂಗ್ಲೆಂಡಿನಲ್ಲಿ ಕಾರ್ಮಿಕ ವರ್ಗದ ಪರಿಸ್ಥಿತಿ" ಕೃತಿಯಲ್ಲಿ ವಿಶದವಾಗಿ ಚಿತ್ರಿಸಿರುವಂತಹ ಸ್ಥಿತಿ.

ವ್ಯತ್ಯಾಸವೆಂದರೆ, ಶೋಷಣೆಯ ಈ ಆದಿಮ ಸ್ವರೂಪಗಳ ಮೇಲೆ ಉತ್ಪಾದನೆಯಲ್ಲಿ ತಂತ್ರಜ್ಞಾನದ ನಾವೀನ್ಯತೆಗಳನ್ನು ಬಳಸಿಕೊಂಡು ತೀವ್ರಗೊಳಿಸಿರುವ ಶೋಷಣೆಯ ಸ್ವರೂಪಗಳಿವೆ ಮತ್ತು ಜಾಗತಿಕ ಪೂರೈಕೆ ಕೊಂಡಿಗಳು ನಿರ್ಮಾಣಗೊಂಡಿವೆ.

ಈ ಕಾರ್ಮಿಕ ವರ್ಗ ಮತ್ತು ದುಡಿಯುವ ಜನಗಳೇ ಕೊರೊನ ವೈರಸ್‌ನ ಮಹಾಮಾರಿಯ ಆರ್ಥಿಕ ಮತ್ತು ಸಾಮಾಜಿಕ ಪರಿಣಾಮಗಳ ಹೊರೆಯನ್ನು ಹೊರಬೇಕಾದವರು. ಈ ಮಹಾಮಾರಿ ಕಾರ್ಮಿಕ ವರ್ಗದ ನಿಜವಾದ ಪರಿಸ್ಥಿತಿಗಳನ್ನು "ವಲಸೆ ಕಾರ್ಮಿಕರ ಬಿಕ್ಕಟ್ಟಿ"ನ ಮೂಲಕ ಬಿಚ್ಚಿಟ್ಟಿದೆ. ಇದು ಸದಾ ಮುಖ್ಯಧಾರೆಯ ಮಾಧ್ಯಮಗಳು ಮತ್ತು ಸಾರ್ವಜನಿಕ ಸಂವಾದಗಳಿಂದ ಮರೆಯಾಗಿಯೇ ಉಳಿದಿದ್ದ ಒಂದು ಸಂಗತಿ.

'ಶ್ರಮಿಕ ಸ್ಪೆಷಲ್" ಪ್ರಕರಣ:
ಅಮಾನವೀಯತೆಯ ಪ್ರದರ್ಶನ

ಮೋದಿ ಸರಕಾರ ಕಾರ್ಮಿಕ ವರ್ಗದ ಈ ಬೃಹತ್ ವಿಭಾಗವನ್ನು ಹೇಗೆ ಕಾಣುತ್ತಿದೆ ಎಂಬುದನ್ನೂ ಈ ಮಹಾಮಾರಿ ನಗ್ನವಾಗಿ ಬಯಲಿಗೆಳೆದಿದೆ. ಯಾವುದೇ ಮುನ್ಸೂಚನೆ ಕೊಡದ ಒಂದು ಲಾಕ್ ಡೌನ್ ಮೂಲಕ ಕಾರ್ಮಿಕ ವರ್ಗಧ ಈ ಅತ್ಯಂತ ಅಭದ್ರತೆಯಲ್ಲಿರುವ ವಿಭಾಗಗಳ ಮೇಲೆ ವಿನಾಶವನ್ನು ಹೇರಿದ ನಂತರ, ಮೋದಿ ಸರಕಾರ, ತಮ್ಮ ಹಳ್ಳಿಗಳಿಗೆ, ಮನೆಗಳಿಗೆ ಮರಳಬೇಕು ಎಂಬ ಈ ಲಕ್ಷಾಂತರ ಕಾರ್ಮಿಕರ ಹತಾಶ ಬಿನ್ನಹಗಳ ಬಗ್ಗೆ ನಿರ್ಲಕ್ಷ್ಯವನ್ನು ತೋರುತ್ತಿದೆ. ಮನೆಗಳಿಗೆ ಕಾಲ್ನಡಿಗೆಯಲ್ಲೇ ಹಿಂದಿರುಗಲು ಪ್ರಯತ್ನಿಸಿದವರನ್ನು ಥಳಿಸಲಾಯಿತು, ಅಂತರ-ರಾಜ್ಯ ಗಡಿಗಳಲ್ಲಿ ಹಿಂದಕ್ಕೆ ತಳ್ಳಲಾಯಿತು, ಕೆಲವರನ್ನು ಸುತ್ತುವರೆದು ತಾತ್ಕಾಲಿಕ ಶಿಬಿರಗಳಿಗೆ ಕಳಿಸಲಾಯಿತು.

ಸುಮಾರು 40 ದಿನಗಳ ನಂತರ, ರಾಜ್ಯ ಸರಕಾರಗಳ ಎಡೆಬಿಡದ ಅಗ್ರಹಗಳಿಂದಾಗಿ ಅವರನ್ನು ಸಾಗಿಸಲು ಬಸ್‌ಗಳಿಗೆ ಅವಕಾಶ ನೀಡಲಾಯಿತು. ಇದು ಕಾರ್ಯಸಾಧ್ಯವಲ್ಲ, ಬಹಳ ವೆಚ್ಚದಾಯಕ ಎಂದಾಗ, ಅಂತಿಮವಾಗಿ 'ಶ್ರಮಿಕ ಸ್ಪೆಷಲ್' ಎಂಬ ವಿಶೇಷ ರೈಲುಗಳನ್ನು ಮೇ 1ರಂದು ಪ್ರಕಟಿಸಲಾಯಿತು. ಆದರೆ ಇಲ್ಲಿ ಕೂಡ, ಸರಕಾರ ತನ್ನ ಅಮಾನವೀಯತೆಯನ್ನು ಪ್ರದರ್ಶಿಸಿತು, ಊರಿಗೆ ಮರಳುತ್ತಿರುವವರಿಂದ ಟಿಕೆಟ್ ದರಗಳನ್ನು ವಸೂಲಿ ಮಾಡಿ ಎಂದು ರೈಲ್ವೆ ಇಲಾಖೆಗೆ ಹೇಳಿತು.

ಅಸಹಾಯಕ ಕಾರ್ಮಿಕರನ್ನು ಸುಲಿಯುವ ಈ ನಿರ್ಮಮ ಪ್ರಯತ್ನಕ್ಕೆ ಪ್ರತಿಪಕ್ಷಗಳಿಂದ ಮತ್ತು ಮಾಧ್ಯಮಗಳಲ್ಲಿ ವ್ಯಾಪಕ ಆಕ್ರೋಶವನ್ನು ಕಂಡ ಸರಕಾರ ವಿಷಯವನ್ನು ಮಬ್ಬುಗೊಳಿಸುವ ಪ್ರಯತ್ನಕ್ಕೆ ಇಳಿಯಿತು. ಕೇಂದ್ರ ಸರಕಾರ 85ಶೇ. ಹೊರೆ ಹೊರುತ್ತದೆ, ಉಳಿದ 15ಶೇ.ವನ್ನು ಸಂಬಂಧಪಟ್ಟ ರಾಜ್ಯಗಳು ಹೊರಬೇಕು ಎಂದು ಸರಕಾರದ ವಕ್ತಾರರು ಒಂದು ದಾರಿ ತಪ್ಪಿಸುವ ವಿವರಣೆಯನ್ನು ಕೊಟ್ಟರು. ಇದನ್ನು ಯಾರೂ ನಂಬದಾಗ, ರಾಜ್ಯಗಳು ಕೇಳಿದ್ದಕ್ಕೇ ಈ ರೈಲುಗಳನ್ನು ಹಾಕಿದ್ದು, ಎಂದು ಅವುಗಳ ಹೆಗಲ ಮೇಲೆ ದಾಟಿಸುವ ಪ್ರಯತ್ನ ಮಾಡಿದರು. ಆದರೆ ರೈಲ್ವೆಯ ಸುತ್ತೋಲೆಯ ಪ್ರಕಾರ ಸ್ಲೀಪರ್ ದರಗಳ ಮೇಲೆ 50ರೂ. ಅಧಿಕ ದರವನ್ನು ಸೇರಿಸಿ ವಸೂಲು ಮಾಡಲಾಗಿದೆ.

ಇದರಿಂದಲೂ ಬಹಳ ಜನ ಕಾರ್ಮಿಕರಿಗೆ ಈ ವಿಶೇಷ ರೈಲುಗಳ ಪ್ರಯೋಜನ ಪಡೆಯಲಾಗಲಿಲ್ಲ. ಉದಾಹರಣೆಗೆ, ಮುಂಬೈಯಲ್ಲಿ ಕಾರ್ಮಿಕರು ಈ ಪ್ರಯಾಣ ಮಾಡಲು ಯೋಗ್ಯರಾಗಿದ್ದಾರೆ ಎಂದು ವೈದ್ಯಕೀಯ ಪ್ರಮಾಣ ಪತ್ರವನ್ನು ಕೊಡಬೇಕು ಎಂದು ಹೇಳಲಾಗಿದೆ ಎಂಬ ದೂರುಗಳು ಕೇಳಬಂದಿವೆ. ಅಂದರೆ ಅದನ್ನು ಪಡೆಯಲು ಖಾಸಗಿ ವೈದ್ಯರಿಗೆ/ಆಸ್ಪತ್ರೆಗಳಿಗೆ ಮತ್ತೆ 1000 ದಿಂದ 5000 ರೂ. ತೆರಬೇಕು. ಇದು ಅವರ ಅಳವಿಗೆ ಮೀರಿದ್ದು. ಹೀಗೆ, ಮತ್ತೊಮ್ಮೆ, ಮಾರ್ಚ್ 25ರಂದು ಲಾಕ್‌ಡೌನ್ ಜಾರಿಗೆ ಬಂದ ದಿನ ಕಂಡಂತೆ, ವಲಸೆ ಕಾರ್ಮಿಕರು ತಮ್ಮ ಊರುಗಳತ್ತ ದೀರ್ಘ ಪಯಣಕ್ಕೆ ಕಾಲ್ನಡಿಗೆಯಲ್ಲೇ ಹೊರಟದ್ದನ್ನು ನಾವು ಕಾಣುತ್ತಿದ್ದೇವೆ.

ಮೋದಿ ಸರಕಾರಕ್ಕೆ ರೈಲುಗಳ ಮೂಲಕ ವಲಸೆ ಕಾರ್ಮಿಕರನ್ನು ಅವರ ಊರುಗಳಿಗೆ ತಲುಪಿಸುವ ಪ್ರಾಜೆಕ್ಟನ್ನು ಕೈಗೊಳ್ಳುವ ಬಗ್ಗೆ ಪುನರಾಲೋಚನೆ ಬಂದಂತೆ ಕಾಣುತ್ತದೆ. ಮೇ 3 ರಂದು ಕೇಂದ್ರ ಗೃಹ ಕಾರ್ಯದರ್ಶಿ ವಿಶೇಷ ರೈಲುಗಳನ್ನು ಬಳಸುವವರ ಸಂಖ್ಯೆಯನ್ನು ಸೀಮಿತಗೊಳಿಸಬೇಕು ಎಂದು ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದರು. ಈ ವಿಶೇಷ ರೈಲುಗಳು, ಲಾಕ್‌ಡೌನಿನ ತುಸುವೇ ಮೊದಲು ತಮ್ಮ ಹುಟ್ಟೂರುಗಳಿಂದ ಕೆಲಸದ ಸ್ಥಳಗಳಿಗೆ ಹೋದವರು, ಹಿಂದಿರುಗಲಾಗದೆ ಸಿಲುಕಿಕೊಂಡವರಿಗಾಗಿ ಎಂದು ಒಂದು ಗೊಂದಲಕ್ಕೆ ಬೀಳಿಸುವ ಮಾರ್ಗನಿರ್ದೇಸನವನ್ನು ಕೊಡಲಾಯಿತು. ಇದರ ಪ್ರಕಾರ ತಮ್ಮ ಮನೆಗಳಿಗೆ ಹಿಂದಿರುಗ ಬಯಸುವ ಹೆಚ್ಚಿನ ವಲಸೆ ಕಾರ್ಮಿಕರು ಈ ಸೌಲಭ್ಯಕ್ಕೆ ಅನರ್ಹರಾಗುತ್ತಾರೆ.

ಮೋದಿ ಸರಕಾರಕ್ಕೆ, ಲಾಕ್‌ಡೌನನ್ನು ತೆರವು ಮಾಡಿದಾಗ ಉಂಟಾಗುವ ಕಾರ್ಮಿಕರ ಕೊರತೆಯ ಬಗ್ಗೆಯೇ ಹೆಚ್ಚು ಚಿಂತೆಯಿರುವಂತೆ ಕಾಣುತ್ತದೆ. ಕರ್ನಾಟಕದ ಮುಖ್ಯಮಂತ್ರಿ ಯೆಡ್ಯೂರಪ್ಪನವರು ರಾಜ್ಯವನ್ನು ಬಿಟ್ಟು ಹೋಗಬೇಡಿ ಎಂದು ಕಾರ್ಮಿಕರನ್ನು, ಬಿಲ್ಡರ್ ಲಾಬ್ಬಿಯ ಒತ್ತಡದಿಂದಾಗಿ, ಮನವಿ ಮಾಡಿಕೊಂಡಿರುವುದು ಇದನ್ನು ಬಿಂಬಿಸುತ್ತದೆ. ಕರ್ನಾಟಕ ಸರಕಾರ ವಲಸೆ ಕಾರ್ಮಿಕರನ್ನು ಬಿಹಾರಿಗೆ ಕಳಿಸಲು ಕೇಳಿದ್ದ ರೈಲುಗಳನ್ನು ರದ್ದು ಮಾಡಿತು. ಇದು ಒಂದು ಬಂಧಿತ ಅಗ್ಗದ ಶ್ರಮಶಕ್ತಿಯನ್ನು ಬಲವಂತದಿಂದ ಪಡೆಯಲು ಹಿಡಿದ ದಾರಿಯಲ್ಲದೆ ಮತ್ತೇನೂ ಅಲ್ಲ.

ಕಾರ್ಮಿಕರ ಹಕ್ಕುಗಳ ಮೇಲೆ ದಾಳಿಗಳ ಮುನ್ಸೂಚನೆ

1979ರ "ಅಂತರ-ರಾಜ್ಯ ವಲಸೆ ಕೆಲಸಗಾರರ(ಉದ್ಯೋಗ ಮತ್ತು ಸೇವಾ..ಷರತ್ತುಗಳ ನಿಯಂತ್ರಣ) ಕಾಯ್ದೆ"ಯು "ವೃತ್ತಿ ಸುರಕ್ಷತತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ ಮಸೂದೆ, 2019"ನ್ನು ಅಂಗೀಕರಿಸಿದಾಗ ರದ್ದಾಗುತ್ತದೆ. ಅಂತರ-ರಾಜ್ಯ ವಲಸೆ ಕೆಲಸಗಾರರ ಕಾಯ್ದೆ ವಲಸೆ ಕಾರ್ಮಿಕರಿಗೆ ಕೆಲವಾದರೂ ಕನಿಷ್ಟ ಹಕ್ಕುಗಳು ಮತ್ತು ಸೌಕರ್ಯಗಳನ್ನು ಒದಗಿಸಿದೆ. ಅದನ್ನು ಇದುವರೆಗೆ ಗಂಭೀರವಾಗಿ ಜಾರಿಗೊಳಿಸಿಲ್ಲ ಎಂಬುದು ಬೇರೆ ಮಾತು. ವಲಸೆ ಕಾರ್ಮಿಕರು ಸಾವು-ಬದುಕಿನ ಬಿಕ್ಕಟ್ಟನ್ನು ಎದುರಿಸುತ್ತಿರುವ ಸಮಯದಲ್ಲಿ ಈ ಕಾಯ್ದೆಯನ್ನು ರದ್ದು ಮಾಡುವುದು ಕ್ರಿಮಿನಲ್ ಕೃತ್ಯವಾಗುತ್ತದೆ ಎಂದು ಸಿಐಟಿಯು ಹೇಳಿದೆ. ವಾಸ್ತವವಾಗಿ ಈ ಕಾಯ್ದೆಯನ್ನು ಇನ್ನಷ್ಟು ಬಲಪಡಿಸಬೇಕಾಗಿದೆ ಮತ್ತು ಜಾರಿಯಾಗುವಂತೆ ಖಾತ್ರಿಪಡಿಸಬೇಕಾಗಿದೆ.

ವಲಸೆ ಕಾರ್ಮಿಕರನ್ನು ನಡೆಸಿಕೊಂಡಿರುವ ರೀತಿ ಒಟ್ಟಾರೆಯಾಗಿ ಕಾರ್ಮಿಕರ ಹಕ್ಕುಗಳ ಮೇಲೆ ಬರಲಿರುವ ದಾಳಿಗಳ ಮುನ್ಸೂಚನೆಯಾಗಿದೆ. ಈಗಾಗಲೇ ನಾಲ್ಕು ರಾಜ್ಯ ಸರಕಾರಗಳು ಕಾರ್ಖಾನೆಗಳ ಕಾರ್ಮಿಕರಿಗೆ ಕೆಲಸದ ಅವಧಿಯನ್ನು 8 ಗಂಟೆಗಳಿಂದ 12 ಗಂಟೆಗೆ ಹೆಚ್ಚಿಸಲು ಈಗಿರುವ ಕಾನೂನುಗಳು ಮತ್ತು ನಿಯಮಾವಳಿಗಳನ್ನು ಮಾರ್ಪಡಿಸಿವೆ. ರಾಜಸ್ಥಾನ ಇದರ ಸರಕಾರ ನೇತೃತ್ವ ವಹಿಸಿದೆ, ಗುಜರಾತ್, ಪಂಜಾಬ್ ಮತ್ತು ಹಿಮಾಚಲ ಪ್ರದೇಶ ಅದನ್ನು ಅನುಸರಿಸಿವೆ.

ಎಪ್ರಿಲ್ 27ರಂದು ಮುಖ್ಯ ಮಂತ್ರಿಗಳೊಂದಿಗೆ ವೀಡಿಯೋ ಕಾನ್ಫರೆನ್ಸಿನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅಶೋಕ ಗೆಹ್ಲೋಟ್ ಸರಕಾರ ಕೈಗೊಂಡ ಕ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಬೇರೆ ಯಾವುದೇ ರಾಜ್ಯ ಕೊರೊನ ವೈರಸ್ ಮಹಾಮಾರಿಯನ್ನು ನಿಭಾಯಿಸಲು ಮಾಡಿರುವ ಬೇರೆ ಯಾವುದೇ ಪ್ರಯತ್ನದ ಬಗ್ಗೆ ಅವರಿಂದ ಮೆಚ್ಚುಗೆಯ ಒಂದೇ ಒಂದು ಪದವಿರಲಿಲ್ಲ.

ರಾಜಸ್ಥಾನ ಸರಕಾರದ ಕ್ರಮಕ್ಕೆ ನರೇಂದ್ರ ಮೋದಿಯವರ ಪ್ರಶಂಸೆ ಇತರರಿಗೆ ಅದನ್ನೇ ಅನುಸರಿಸಬೇಕು ಎಂದು ನೀಡಿದ ಸಂಕೇತವಾಗಿದೆ. ಮಧ್ಯಪ್ರದೇಶದ ಮುಖ್ಯಮಂತ್ರಿಗಳು ಲೇಬರ್ ಇನ್ಸ್‌ಪೆಕ್ಷನ್ ಗಳನ್ನು ಸಡಿಲಗೊಳಿಸಲು, ದಾಖಲಾತಿಗಳನ್ನು ಇಡಬೇಕಿಲ್ಲ ಎಂಬ ವಿನಾಯ್ತಿ ಮತ್ತು ತಮ್ಮ ಅನುಕೂಲಕ್ಕೆ ಅನುಸಾರವಾಗಿ ಶಿಫ್ಟ್ ಸಮಯಗಳಲ್ಲಿ ಬದಲಾವಣೆ ಇತ್ಯಾದಿಗಳಿಗೆ ಅವಕಾಶ ಕಲ್ಪಿಸಲು ಕಾರ್ಮಿಕ ಕಾನೂನುಗಳಲ್ಲಿ ಬದಲಾವಣೆಗಳನ್ನು ತರಲಾಗುವುದು ಎಂದು ಪ್ರಕಟಿಸಿದ್ದರೆ. ಹೂಡಿಕೆಗಳನ್ನು ಆಕರ್ಷಿಸುವ ಹೆಸರಿನಲ್ಲಿ, ಹೊಸದಾಗಿ ಸ್ಥಾಪಿಸುವ ಕಾರ್ಖಾನೆಗಳಲ್ಲಿ ಕಾರ್ಮಿಕ ಕಲ್ಯಾಣ ನಿಧಿಗಾಗಿ ಪ್ರತಿ ಕಾರ್ಮಿಕರಿಗೆ 80 ರೂ. ವಾರ್ಷಿಕ ದೇಣಿಗೆಯನ್ನು ಕೊಡಬೇಕಾಗಿಲ್ಲ ಎಂದು ಮಾಲಕರಿಗೆ ವಿನಾಯ್ತಿ ಮತ್ತಿತರ ಇನ್ನಷ್ಟು ಕಾರ್ಮಿಕ-ವಿರೋಧಿ ಕ್ರಮಗಳಿರುತ್ತವೆ ಎಂದು ಹೇಳಿದ್ದಾರೆ.


ತಾನು ಎದುರಿಸಬೇಕಾದ ಪ್ರತಿಯೊಂದು ಬಿಕ್ಕಟ್ಟನ್ನು ಕಾರ್ಮಿಕರ ಹಿತಗಳನ್ನು ಬಲಿಗೊಟ್ಟೇ ಪರಿಹರಿಸಬೇಕು ಎಂಬುದು ಬಂಡವಾಳಶಾಹಿಯ ಒಂದು ನಿಯಮವೇ ಆಗಿದೆ. ಈಗಾಗಲೇ ದೊಡ್ಡ ಪ್ರಮಾಣದಲ್ಲಿ ಉದ್ಯೋಗ ನಷ್ಟಗಳು ನಡೆಯುತ್ತಿವೆ. ಸಿಎಂಐಇ ಪ್ರಕಾರ, ನಿರುದ್ಯೋಗ ದರ ಮಾರ್ಚ್ 15ರ ವಾರಾಂತ್ಯದಲ್ಲಿ ಇದ್ದ 6.74 ಶೇ. ದಿಂದ ಮೇ 3 ರ ವಾರಾಂತ್ಯದಲ್ಲಿ 27.11 ಶೇ.ಕ್ಕೆ ಜಿಗಿದಿದೆ. ಇನ್ನೂ ಉದ್ಯೋಗದಲ್ಲಿ ಇರುವವರನ್ನು ಹೆಚ್ಚು ಕಾಲ ದುಡಿಯುವಂತೆ, ಮತ್ತು ಇಳಿಸಲ್ಪಡುವ ಕೂಲಿಗಳಲ್ಲಿ, ಯಾವುದೇ ಭದ್ರತೆ ಮತ್ತು ಹಕ್ಕುಗಳಿಲ್ಲದೆ ಕೆಲಸ ಮಾಡುವಂತೆ ದಬಾಯಿಸಲಾಗುತ್ತಿದೆ.

ಮೋದಿ ಸರಕಾರ ಮತ್ತು ಆಳುವ ವರ್ಗ ಮುಂಬರುವ ದಿನಗಳಲ್ಲಿ ಜಾರಿಗೊಳಿಸಬೇಕೆಂದಿರುವುದು ಇದನ್ನೇ. ಇದನ್ನು ಐಕ್ಯ ಕಾರ್ಮಿಕ ಆಂದೋಲನ, ಹಾಗೂ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಪ್ರತಿರೋಧಿಸಬೇಕು ಮತ್ತು ಇದರ ವಿರುದ್ಧ ಹೋರಾಟ ನಡೆಸಬೇಕು.



ವ್ಯಂಗ್ಯಚಿತ್ರ ಕೃಪೆ: ಪಂಜು ಗಂಗೂಲಿ

ಮೋದಿ ಸರ್ಕಾರಕ್ಕೆ ವಲಸೆ ಕಾರ್ಮಿಕರು ನಾಗರಿಕರೇ ಅಲ್ಲ



ನಮ್ಮ ಸಮಾಜೋ–ಆರ್ಥಿಕ ವ್ಯವಸ್ಥೆಯ ಚೌಕಟ್ಟಿನೊಳಗೆ ಹುದುಗಿರುವ ಹೊಲಸು ಅಸಮಾನತೆಗಳು ಸಂವಿಧಾನಿಕ ಹಕ್ಕುಗಳು ಸಮಾನವಾಗಿ ಲಭ್ಯವಾಗುವುದಕ್ಕೆ ದೊಡ್ಡ ಅಡ್ಡಿಯಾಗಿವೆ. ಆದರೆ ಮಹಾಮಾರಿ ಬಿಕ್ಕಟ್ಟಿನ, ಲಾಕ್‌ಡೌನ್‌ನ ಈ ಅವಧಿಯು ಇದನ್ನು ಇನ್ನೂ ಸ್ಫುಟವಾಗಿ ಪ್ರದರ್ಶಿಸುತ್ತಿದೆ. ಈ ಬಿಕ್ಕಟ್ಟಿನ ಭಾರವನ್ನು ತಮ್ಮ ಶಕ್ತಿಮೀರಿ ಹೊತ್ತಿರುವ ನಮ್ಮ ಜನಸಂಖ್ಯೆಯ ಶ್ರಮಜೀವಿಗಳ ವಿಭಾಗವನ್ನು ಈ ಸರ್ಕಾರವು ಭಾರತದ ನಾಗರಿಕರೆಂದು ಪರಿಗಣಿಸುತ್ತಿದೆಯೇ ಇಲ್ಲವೇ ಎನ್ನುವ ಮೂಲಭೂತ ಪ್ರಶ್ನೆ ಎದ್ದಿದೆ. ಇದು ಲಾಕ್‌ಡೌನನ್ನು ಮೊದಲ ಬಾರಿ ಪ್ರಕಟಿಸಿದಾಗಲೂ ಕಂಡು ಬಂತು. ಎರಡನೇ ಬಾರಿ ಅದನ್ನು ವಿಸ್ತರಿಸುವ ಮೊದಲು ಅವರಿಗೆ ಮನೆಗೆ ಮರಳಲು ವ್ಯವಸ್ಥೆ ಮಾಡಬೇಕು ಎಂದು ಕೊನೆಗೂ ಸರಕಾರಕ್ಕೆ ಅನಿಸಿದಾಗಲೂ ಮತ್ತೊಮ್ಮೆ ಕಂಡು ಬಂತು.



ಬೃಂದಾ ಕಾರಟ್ ಅನು: ಎಸ್. ವಿಜಯಕುಮಾರ್

ಕೊರೋನಾ ವೈರಾಣುವಿನ ಪಿಡುಗು ಜಾಗತಿಕವಾಗಿ ವ್ಯಾಪಿಸಿದಂತೆಲ್ಲಾ ಅಂತರರಾಷ್ಟ್ರೀಯ ಪ್ರವಾಸವು ನಿರ್ಬಂಧಗೊಳಿಸಲ್ಪಟ್ಟಾಗ, ವಿದೇಶಗಳಲ್ಲಿ ನೆಲೆಸಿದ್ದ ನಾಗರಿಕರನ್ನು ಸ್ವದೇಶಕ್ಕೆ ಮರಳಲು ಅವಕಾಶ ಮಾಡಿಕೊಟ್ಟ ಮೊದಲ ದೇಶಗಳಲ್ಲಿ ಭಾರತವು ಒಂದು. ಭಾರತೀಯರು ಮನೆಗೆ ಮರಳಲು ವಿಶೇಷ ವಿಮಾನಗಳನ್ನು ಕಳುಹಿಸಲಾಯಿತು. ಮಾರ್ಚ್ 4 ರಂದು ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ವಿ. ಮುರಳೀಧರನ್ "ಚೀನಾಕ್ಕೆ ಕಳಿಸಲಾದ ಎರಡು ವಿಶೇಷ ವಿಮಾನಗಳ ವೆಚ್ಚ ರೂ. 5,98,90,352 ಪಾವತಿಸಬೇಕೆಂದು ಏರ್ ಇಂಡಿಯ ಒಂದು ಬಿಲ್ ಮಾಡಿದೆ" ಎಂದರು. ಚೀನಾದಿಂದ ಕರೆತರಲಾದ 647 ಪ್ರಯಾಣಿಕರ ತಲಾ ವೆಚ್ಚ ರೂ. 92,566.23 ಆಗಿದೆ, ಎಂದು ಈ ಸರ್ಕಾರಿ ಸ್ವಾಮ್ಯದ ವಿಮಾನಯಾನ ಸಂಸ್ಥೆ ಹೇಳಿದೆ. ಪ್ರಯಾಣಿಕರಿಂದ ಏನನ್ನೂ ವಸೂಲು ಮಾಡಲಿಲ್ಲ ಅದೇ ರೀತಿ ಇಟಲಿ, ಜಪಾನ್ ಮತ್ತು ಇರಾನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಇದೇ ಸೌಲಭ್ಯಗಳನ್ನು ನೀಡಿ ಮರಳಿ ಸ್ವದೇಶಕ್ಕೆ ಕರೆ ತರಲಾಯಿತು. ಇದು ಭಾರತ ಸರ್ಕಾರವೂ ಕೈಗೊಂಡ ಒಂದು ಮಾನವೀಯಾ ಕ್ರಮವಾಗಿತ್ತು.

ತಮ್ಮ ಮನೆಗಳನ್ನು ಬಿಟ್ಟು ದೂರದ ನಗರಗಳಲ್ಲಿ ನೆಲೆಸಿರುವ ವಲಸೆ ಕಾರ್ಮಿಕರಿಗೆ ನೆರವನ್ನು ಇದೇ ನೆಲೆಯಲ್ಲಿ ಏಕೆ ವಿಸ್ತರಿಸಬಾರದು? ಕಳೆದ ಎರಡು ತಿಂಗಳ ಲಾಕ್‌ಡೌನ್ ಅವಧಿಯಲ್ಲಿ ಕೇಂದ್ರ ಸರ್ಕಾರದ ನೀತಿಗಳನ್ನು ನೋಡುವುದಾದರೆ ವಲಸೆ ಕಾರ್ಮಿಕರು ಎನ್ನುವ ಪದ ಬಳಕೆಯು ಒಂದು ವ್ಯತಿರಿಕ್ತ "ಸಮಂಜಸ ವರ್ಗೀಕರಣ"ವನ್ನು ಪಡೆದುಕೊಂಡಂತೆ ಕಾಣುತ್ತದೆ. ಇದು ಭಾರತದ ಸಂವಿಧಾನದ ಅನುಚ್ಛೇದ 14ರ ಸಮಾನತೆಯ ಹಕ್ಕನ್ನು ಅವರಿಗೆ ವಂಚಿಸಿದೆ. ನಮ್ಮ ಸಮಾಜೋ–ಆರ್ಥಿಕ ವ್ಯವಸ್ಥೆಯ ಚೌಕಟ್ಟಿನೊಳಗೆ ಹುದುಗಿರುವ ಅಶ್ಲೀಲ ಅಸಮಾನತೆಗಳು ಸಂವಿಧಾನಿಕ ಹಕ್ಕುಗಳು ಸಮಾನವಾಗಿ ಲಭ್ಯವಾಗುವುದಕ್ಕೆ ದೊಡ್ಡ ಅಡ್ಡಿಯಾಗಿವೆ. ಆದರೆ ಮಹಾಮಾರಿ ಬಿಕ್ಕಟ್ಟಿನ, ಲಾಕ್‌ಡೌನ್‌ನ ಈ ಅವಧಿಯು ಇದನ್ನು ಇನ್ನೂ ಸ್ಫುಟವಾಗಿ ಪ್ರದರ್ಶಿಸುತ್ತಿದೆ. ಈ ಬಿಕ್ಕಟ್ಟಿನ ಭಾರವನ್ನು ತಮ್ಮ ಶಕ್ತಿಮೀರಿ ಹೊತ್ತಿರುವ ನಮ್ಮ ಜನಸಂಖ್ಯೆಯ ಈ ಶ್ರಮಜೀವಿಗಳ ವಿಭಾಗವನ್ನು ಈ ಸರ್ಕಾರವು ಭಾರತದ ನಾಗರಿಕರೆಂದು ಪರಿಗಣಿಸುತ್ತಿದೆಯೇ ಇಲ್ಲವೇ ಎನ್ನುವ ಮೂಲಭೂತ ಪ್ರಶ್ನೆಯನ್ನು ಎತ್ತಿದೆ.

ಇದನ್ನು ಗಮನಿಸಿ. ಲಾಕ್‌ಡೌನ್ ಹೇರುವುದಕ್ಕೆ ಮೊದಲು ಕೇಂದ್ರ ಸರಕಾರ ಕೇವಲ 4 ಗಂಟೆಗಳ ನೋಟೀಸು ಕೊಟ್ಟಿತು. ನಾಗರೀಕರಾಗಿ ವಲಸೆ ಕಾರ್ಮಿಕರ ಹಕ್ಕುಗಳನ್ನು ಪರಿಗಣನೆಗೆ ತೆಗೆದುಕೊಂಡಿದ್ದರೆ ಇದನ್ನು ಯೋಜನಾಬದ್ಧವಾಗಿಯೇ ರೂಪಿಸಬಹುದಾಗಿತ್ತು. ಬಹಳಷ್ಟು ವಲಸೆ ಕಾರ್ಮಿಕರು ತಮ್ಮ ಸ್ವಸ್ಥಳಗಳಿಗೆ ಮರಳಲು ತಾವೇ ವ್ಯವಸ್ಥೆ ಮಾಡಿಕೊಳ್ಳಬಹುದಿತ್ತು. ಈ ಹಕ್ಕನ್ನು ಅವರಿಗೆ ನಿರಾಕರಿಸಲಾಯಿತು. ಬದಲಾಗಿ ಭಾರತದ ಈ ಬಹುದೊಡ್ಡ ಶ್ರಮಿಕ ಸೇನೆಯನ್ನು ಅನುಮಾನದ ವಸ್ತುವಾಗುವ, ಹೊರೆಗಳೆಂದು ಕಾಣುವ ಮಟ್ಟಕ್ಕೆ ಇಳಿಸಲಾಯಿತು. ಮನೆಗೆ ತೆರಳುವ ತಪ್ಪು ಮಾಡುತ್ತಿದ್ದಾರೆಂದು ಥಳಿಸು ತಲೆಬಾಗುವಂತೆ ಮಾಡಲಾಯಿತು. ಶಿಬಿರಗಳಲ್ಲಿ ಮಂದೆಯಂತೆ ತುಂಬಲಾಯಿತು. ಸಮಾನ ನಾಗರಿಕರು ಎನ್ನುವುದನ್ನು ಬಿಡಿ ಮನುಷ್ಯರಿಗಿಂತ ಕಡೆಯಾಗಿ ವರ್ತಿಸಲಾಯಿತು.

ಏಪ್ರಿಲ್ 5 ರ ವರೆಗೆ ಭಾರತದ ಬೀದಿಗಳಲ್ಲಿ ದಿಕ್ಕೆಟ್ಟು ತಿರುಗುತ್ತಿದ್ದ ಲಕ್ಷ–ಲಕ್ಷ ಕಾರ್ಮಿಕರ ಪೈಕಿ ಸುಮಾರು 1.52 ದಶಲಕ್ಷ ಜನರಿಗೆ ಮಾತ್ರ ಸರ್ಕಾರಗಳು ಆಶ್ರಯವನ್ನೂ ನೀಡಿದವು. ಇದರ ಅರ್ಧದಷ್ಟು ಕೇರಳ ರಾಜ್ಯವೊಂದರಲ್ಲೇ ಇದ್ದವು. ಮನೆಗಳೂ ಇಲ್ಲದ, ಶಿಬಿರಗಳೂ ಇಲ್ಲದ ಇನ್ನಿತರ ರಾಜ್ಯಗಳ ಕಾರ್ಮಿಕರ ಗತಿ ಏನು?

ವಿಶ್ವ ಬ್ಯಾಂಕ್‌ನ ಇತ್ತೀಚಿನ "ಕೊವಿಡ್–19: ಒಂದು ವಲಸೆ ಗಾಜಿನ ಮೂಲಕ" ಎಂಬ ವರದಿ ಕೂಡ "ಭಾರತದಲ್ಲಿ ಲಾಕ್‌ಡೌನ್, ಉದ್ಯೋಗ ನಷ್ಟ ಮತ್ತು ಸಾಮಾಜಿಕ ಅಂತರದಿಂದಾಗಿ ಆಂತರಿಕ ವಲಸೆಗಾರರ ಸಾಮೂಹಿಕ ವಾಪಸಾತಿಯ ಒಂದು ಅವ್ಯವಸ್ಥಿತ ಮತ್ತು ನೋವು ಭರಿತ ಪ್ರಕ್ರಿಯೆ ನಡೆಯುವಂತಾಗಿದೆ" ಎನ್ನುತ್ತದೆ. ಈ ನೋವಿನಿಂದ ತುಂಬಿದ ಪ್ರಕ್ರಿಯೆ ಹಲವು ಜೀವಗಳನ್ನೂ ಬಲಿ ತೆಗೆದುಕೊಂಡಿದೆ. ನೋಟೀಸು ಕೊಟ್ಟಿದ್ದರೆ ಅದು 12 ವರ್ಷದ ಬಾಲಕಿ ಜಮ್ಲೊ ಮಕ್ದಂಳ ಜೀವವನ್ನು ಉಳಿಸುತ್ತಿತ್ತೇ ಎಂಬ ಪ್ರಶ್ನೆಯನ್ನು ನ್ಯಾಯವಾಗಿಯೇ ಕೇಳಬಹುದು. ತನ್ನ ತಂದೆ–ತಾಯಿಯ ಏಕಮಾತ್ರ ಮಗು, ಲಾಕ್‌ಡೌನಿನ ನಂತರ ತೆಲಂಗಾಣದಲ್ಲಿ ಮೆಣಸು ಹೆಕ್ಕುವ ಆದಿವಾಸಿ ಮಹಿಳೆಯರ ಒಂದು ಗುಂಪಿನೊಂದಿಗೆ ಮನೆಯತ್ತ ನಡೆದು ಬಂದವಳು ಹಸಿವು ಮತ್ತು ಮೈಯಲ್ಲಿ ನೀರಿನಂಶದ ಕೊರತೆಯಿಂದ ಪ್ರಾಣ ಬಿಟ್ಟಿದ್ದಾಳೆ. ಬಹುಶಃ ಲಾಕ್‌ಡೌನ್ ನಡೆಯುತ್ತದೆ ಎಂದು ಮೊದಲೇ ಗೊತ್ತಿದ್ದರೆ ಅವಳು ಬಸ್ ಹಿಡಿದು ಮನೆ ತಲುಪಬಹುದಿತ್ತೇನೋ? ಹಲವರು ಸತ್ತರು, ಹಲವರು ನರಳಿದರು. ಇದಕ್ಕೆ ಯಾರು ಹೊಣೆ? ಜವಾಬುದಾರರು ಯಾರು?

ಈಗ ಮೂರನೇ ಲಾಕ್‌ಡೌನ್ ಪ್ರಕಟಿಸಲಾಗಿದೆ. ಆದರೆ ಈಗಲೂ ಕೇಂದ್ರ ಸರಕಾರ ವಲಸೆ ಕಾರ್ಮಿಕರ ಅಪಹಾಸ್ಯವನ್ನೇ ಮಾಡಿದೆ. ಎಪ್ರಿಲ್ 29ರಂದು ಗೃಹ ಮಂತ್ರಾಲಯದ ಮೊದಲ ಅಧಿಸೂಚನೆ ಮೇ 4ರಿಂದ ವಲಸೆ ಕಾರ್ಮಿಕರು ಮನೆಗಳಿಗೆ ಮರಳಲು ಬಸ್‌ಗಳನ್ನು ಕಳಿಸಲು "ಪರಸ್ಪರ ಒಪ್ಪುವಂತೆ" ನಿರ್ದೇಶನ ಕೊಟ್ಟಿತು. ಪರವಾನಿಗೆ ರಸ್ತೆ ಮಾರ್ಗವಾಗಿ ಪ್ರಯಾಣಿಸಲು ಮಾತ್ರ ಆಗಿತ್ತು. ಈ ನಿರ್ದೇಶನದಲ್ಲಿ, ಮತ್ತೊಮ್ಮೆ ಈ ಸರಕಾರದ ಕಣ್ಣಲ್ಲಿ ವಲಸೆ ಕಾರ್ಮಿಕರು ನಾಗರಿಕರು ಎಂಬ ಸ್ಥಾನಮಾನವನ್ನೇ ಹೊಂದಿಲ್ಲ ಎಂಬ ವಾಸ್ತವ ಸಂಗತಿ ಬಿಂಬಿತವಾಗಿತ್ತಷ್ಟೇ ಅಲ್ಲ, ಒಂದು ಕನಿಷ್ಟ ಸಾಮಾನ್ಯ ಜ್ಞಾನದ ಕೊರತೆಯೂ ಎದ್ದು ಕಾಣುತ್ತಿತ್ತು. ಉದಾಹರಣೆಗೆ, ಪಂಜಾಬಿನಿಂದ ಬಿಹಾರಿಗೆ, ಅಥವ ಕೇರಳದಿಂದ ಬಂಗಾಲಕ್ಕೆ ಕಾರ್ಮಿಕರನ್ನು ಒಯ್ಯಲು ಎಷ್ಟು ದಿನಗಳು ಬೇಕಾದೀತು ಎಂದೇನಾದರೂ ಕಲ್ಪನೆ ಇತ್ತೇ?

ಎಂಟು ರಾಜ್ಯಗಳು ಈ ಎಪ್ರಿಲ್ 29ರ ಸುತ್ತೋಲೆಗೆ ಪ್ರತಿಭಟನೆ ವ್ಯಕ್ತಪಡಿಸಿ ರೈಲು ಸೇವೆಗಳನ್ನು ಪುನರಾರಂಭಿಸಬೇಕು ಎಂದು ಆಗ್ರಹಿದಾಗಲೇ, ಎರಡು ದಿನಗಳ ನಂತರ ರೈಲ್ವೆ ಇಲಾಖೆ "ಶ್ರಮಿಕ ಸ್ಪೆಷಲ್"ಗಳನ್ನು ಓಡಿಸುವುದಾಗಿ ಘೋಷಿಸಲಾಯಿತು. ಇದು ಈಗಾಲೇ ಆರಂಭವಾಗಿದೆ. ಆದರೆ ಕಾರ್ಮಿಕರೇ ಪೂರ್ಣ ಟಿಕೆಟ್ ದರ ತೆರಬೇಕು. ನಿಯಮಿತ ದರವಷ್ಟೇ ಅಲ್ಲ, "ಎಕ್ಸ್‌ಪ್ರೆಸ್ ದರ"ಕ್ಕೆ ಮತ್ತು ಆಹಾರಕ್ಕೆ 'ಇನ್ನೂ 50 ರೂ. ತೆರಬೇಕು.

ವಿವಿಧ ರಾಜ್ಯ ಸರಕಾರಗಳು ಮಾಡಿರುವ ಅಂದಾಜುಗಳಂತೆ, ಸದ್ಯ ಒಂದು ಕೋಟಿಗೂ ಹೆಚ್ಚು ವಲಸೆ ಕಾರ್ಮಿಕರು ಮನೆಗೆ ಮರಳ ಬಯಸುತ್ತಿದ್ದಾರೆ. ವಲಸೆ ಕಾರ್ಮಿಕರ ಬಳಿಯಿದ್ದ ಹಣ ಪೂರ್ತಿ ಖಾಲಿಯಾಗಿದೆ. 2 ತಿಂಗಳಿಂದ ಅವರಿಗೆ ಕೆಲಸವಿಲ್ಲ. ವಲಸೆ ಕಾರ್ಮಿಕರು ದುಡಿದು ಕಳಿಸುವ ಹಣದ ಮೇಲೆಯೇ ಬದುಕನ್ನು ಅವಲಂಬಿಸಿರುವ ಅವರ ಕುಟುಂಬಗಳು ಸಾಲ ಮಾಡುವ ಅನಿವಾರ್ಯತೆಗೆ ಒಳಗಾಗಿದ್ದಾರೆ. ಹೀಗಾಗಿ ವಲಸೆ ಕಾರ್ಮಿಕರು ಮರಳಿ ಮನೆಗೆ ಬರಲು ಬೇಕಾಗುವ ಪ್ರಯಾಣದ ಟಿಕೆಟ್‌ನ ವೆಚ್ಚವನ್ನು ಅವರಿಗೆ ಕಳಿಸುವ ಸ್ಥಿತಿಯಲ್ಲಿ ಖಂಡಿತಾ ಇಲ್ಲ.

ಪ್ರಧಾನ ಮಂತ್ರಿಗಳು "ಪಿಎಂ ಕೇರ್ಸ್" ಅಂದರೆ ಪ್ರಧಾನ ಮಂತ್ರಿಗಳು ಕಾಳಜಿ ವಹಿಸುತ್ತಾರೆ ಎನ್ನುವ ನಿಧಿಯನ್ನು ಸ್ಥಾಪಿಸಿದ್ದಾರೆ. ಈ ನಿಧಿಗೆ ನೂರಾರು ಕೋಟಿ ರೂಪಾಯಿಗಳು ದೇಣಿಗೆಯಾಗಿ ಬಂದಿವೆ. ಈ ನಿಧಿಯ ಕುರಿತು ಸಾರ್ವಜನಿಕ ಅವಗಾಹನೆ ಇಲ್ಲದೆ ಇರುವುದರಿಂದ ನಾವು ಊಹೆ ಮಾಡಬಹುದಷ್ಟೆ. ಕಾರ್ಮಿಕರನ್ನು ಮನೆಗೆ ಕಳಿಸಲು ಈ ಹಣವನ್ನು ಏಕೆ ಬಳಸುತ್ತಿಲ್ಲ? ಭಾರತದ ಶ್ರಮಿಕರ, ಯಾವ ಸಂಪತ್ತನ್ನು ಸೃಷ್ಟಿಸುವ ಜೀವಶಕ್ತಿಯಾಗಿದ್ದಾರೋ ಅವರ ಕಾಳಜಿಯನ್ನು ವಹಿಸದೆ ಇನ್ನಾರ ಕಾಳಜಿ ವಹಿಸುತ್ತಿದ್ದಾರೆ? ಮತ್ತೆ, ಪ್ರಧಾನ ಮಂತ್ರಿಗಳ ಕನಸಿನ ಯೋಜನೆಯಾದ ಮುಂಬೈ–ಅಹಮದಾಬಾದ ನಡುವೆ ಬುಲೆಟ್ ರೈಲು ಓಡಿಸಲು 2020–21 ರ ಮುಂಗಡ ಪತ್ರದಲ್ಲಿ ರೂ. ರೂ.5600 ಕೋಟಿಗಳನ್ನು ರೈಲ್ವೆ ಇಲಾಖೆಗೆ ಮೀಸಲಿಡಲಾಗಿದೆ. ಇದು ವಲಸೆ ಕಾರ್ಮಿಕರನ್ನು ಅವರವರ ಮನೆಗಳಿಗೆ ಉಚಿತವಾಗಿ ಕಳುಹಿಸಲು ಮಾಡಬೇಕಾದ ವೆಚ್ಚಕ್ಕಿಂತ ಎಷ್ಟೋ ಹೆಚ್ಚಿನ ಪ್ರಮಾಣದಲ್ಲಿದೆ. ಈ ರೀತಿಯ ಅನವಶ್ಯಕ ವೆಚ್ಚದ ಬದಲು ಅದೇ ಹಣವನ್ನು ವಲಸೆ ಕಾರ್ಮಿಕರನ್ನು ಮನೆಗೆ ತಲುಪಿಸಲು ಬಳಸುವುದು ರಾಷ್ಟ್ರೀಯ ಹಿತಾಸಕ್ತಿಯನ್ನು ಉತ್ತಮ ಪಡಿಸಿದಂತಾಗುತ್ತದಲ್ಲವೆ?


ಅತ್ಯಂತ ಕಡಿಮೆ ಸಮಯದ ಚೌಕಟ್ಟಿನಲ್ಲಿ ವಲಸೆ ಕಾರ್ಮಿಕರನ್ನು ಕರೆತರುವ ಸಾಮರ್ಥ್ಯ ಭಾರತೀಯ ರೈಲ್ವೆಗಿದೆ. ರೈಲ್ವೆಯು ಪ್ರತಿದಿನ ಸರಾಸರಿ 2–3 ಕೋಟಿ ಪ್ರಯಾಣಿಕರನ್ನು ಸಾಗಿಸುತ್ತಿದೆ. ಕಡಿಮೆ ದೂರದ ರೈಲುಗಳಲ್ಲಿ ದಿನಂಪ್ರತಿ ಪ್ರಯಾಣಿಸುವ ಬಹುದೊಡ್ಡ ಸಂಖೆಯ ಪ್ರಯಾಣಿಕರನ್ನು ಹೊರತುಪಡಿಸಿಯೂ ಕಾರ್ಮಿಕರನ್ನು ಕೆಲವೇ ದಿನಗಳಲ್ಲಿ ಮನೆ ತಲುಪಿಸುವ ಸಾಮರ್ಥ್ಯವನ್ನು ನಮ್ಮ ರೈಲ್ವೆ ಹೊಂದಿದೆ ಎನ್ನುವುದನ್ನು ನಿರಾಕರಿಸಲಾಗದು. ಈಗ ಬೇಕಿರುವುದು ಕಾರ್ಮಿಕರ ಮನೆಗೆ ಮರಳುವ, ಅವರ ಹಕ್ಕಿನ ರಾಜಕೀಯ ಮಾನ್ಯತೆ.. ಹೌದು ಮಹಮಾರಿಯ ಈ ಸಂದರ್ಭದಲ್ಲಿ ಇದನ್ನು ಸುರಕ್ಷತೆಗಾಗಿಯೇ ತೀವ್ರ ಎಚ್ಚರಿಕೆ ಮತ್ತು ಮುಂಜಾಗ್ರತೆಯಿಂದ ಮಾಡಬೇಕಾಗುತ್ತದೆ. ವಲಸಿಗರ ವಾಪಸ್ಸಾತಿಗೆ ಯೋಜನೆ ರೂಪಿಸಲು ರಾಜ್ಯ ಸರ್ಕಾರಗಳಿಗೆ ಕಾಲಾವಕಾಶ ಇತ್ತು. ಅದನ್ನು ಅವು ಕೇಂದ್ರ ಸರ್ಕಾರದ ಯಾವುದೇ ಹಣಕಾಸು ಸಹಾಯವಿಲ್ಲದೆ ಮಾಡಬೇಕಾಗುತ್ತಿತ್ತು ಎನ್ನುವುದು ಬೇರೆ ವಿಷಯ. ಇಲ್ಲಿಯೂ ಕೂಡ ಪಿ.ಎಂ. ಕೇರ್ ನಿಧಿಯಿಂದ ರಾಜ್ಯಗಳಿಗೆ 1 ರೂಪಾಯಿಯೂ ಸಂದಾಯವಾಗಲಿಲ್ಲ. ವಿಪತ್ತು ನಿರ್ವಹಣಾ ಕಾಯ್ದೆ ಮತ್ತು ನಿಧಿಯ ಮೂಲಕ ಸಂಪನ್ಮೂಲ ವರ್ಗಾವಣೆಯಂತೂ ಆಗಲೇ ಇಲ್ಲ, ಬಿಡಿ.

ಕೇಂದ್ರವು ವಿಪತ್ತು ನಿರ್ವಹಣ ಕಾಯ್ದೆ ಮತ್ತು ಸಾಂಕ್ರಾಮಿಕ ರೋಗ ಕಾಯ್ದೆಗಳ ಮೂಲಕ ರಾಜ್ಯಗಳಿಗೆ ನಿರ್ದೇಶನ ನೀಡುವ ಮಾರ್ಗವನ್ನು ಆಯ್ಕೆ ಮಾಡಿಕೊಂಡಿತು. ಆದರೆ ಈಗಿನ ಸಂದರ್ಬದಲ್ಲಿ ಅತ್ಯಂತ ಪ್ರಸ್ತುತವಾಗಿರುವ "ವಲಸೆ ದುಡಿಮೆಗಾರರು(ಉದ್ಯೋಗ ನಿಯಂತ್ರಣ ಮತ್ತು ಸೇವಾ ನಿಯಮಗಳು) ಕಾಯ್ದೆ, 1979" ನ್ನು ಕಡೆಗಣಿಸಿತು. ಈ ಕಾಯ್ದೆಯು ದುರ್ಬಲ ಮತ್ತು ಅಪೂರ್ಣವಾಗಿದ್ದರೂ ಗುತ್ತಿಗೆದಾರರು ನೇಮಕ ಮಾಡಿಕೊಳ್ಳುವ ಅಂತರರಾಜ್ಯ ವಲಸೆ ಕಾರ್ಮಿಕರ ಒಂದು ವಿಭಾಗವನ್ನು ಮಾತ್ರ ಒಳಗೊಂಡಿದ್ದರೂ ವಲಸೆ ಕಾರ್ಮಿಕರಿಗೆ ಕೆಲ ನಿರ್ದಿಷ್ಟ ಹಕ್ಕುಗಳನ್ನು ನೀಡುತ್ತದೆ. ಇದು ವಲಸೆ ಕಾರ್ಮಿಕರ ದಾಖಲಾತಿಗೆ, ಕನಿಷ್ಠ ಕೂಲಿಗೆ ಬಹು ಮುಖ್ಯವಾಗಿ ಕೆಲಸದಿಂದ ವಜಾ ಮಾಡಿದಾಗ ಮರಳಿ ಊರಿಗೆ ಹೋಗಲು ಉಚಿತ ಪ್ರಯಾಣ ಸೌಲಭ್ಯವನ್ನು ಖಾತ್ರಿ ಪಡಿಸುತ್ತದೆ. ವಲಸೆ ಕಾಮಿಕರು ಕಳೆದುಕೊಂಡ ಕೂಲಿಯಲ್ಲದೆ, ಕೇಂದ್ರ ಸರಕಾರ ಪ್ರಯಾಣದ ವೆಚ್ಚವನ್ನೂ ಕಾನೂನು ಪ್ರಕಾರ ಕೊಡಬೇಕು ಎಂದು ಮೊಕದ್ದಮೆ ಹೂಡಬಹುದಾಗಿದೆ.

ದೇಶದಲ್ಲಿ ಇಂತಹ ಒಂದು ಅತಿದೊಡ್ಡ ಕಾರ್ಮಿಕರ ಪಡೆಯಿದೆ ಎನ್ನುವುದನ್ನು ಭಾರತ ಒಪ್ಪಿಕೊಳ್ಳಲೇ ಬೇಕಾಗಿ ಬಂದಿದೆ. ಇಂದೂ ಕೂಡ, ಲೆಕ್ಕ ಹಾಕುವ ಉತ್ಕೃಷ್ಟ ವಿಧಾನಗಳು ಇದ್ದಾಗ್ಯೂ ವಲಸೆ ಕಾರ್ಮಿಕರ ಸಂಖ್ಯೆಯು ಒಂದು ವಿಶ್ವಾಸಾರ್ಹ ಅಂದಾಜು ಸರ್ಕಾರದ ಬಳಿ ಇಲ್ಲ. ಸದ್ಯದ ಲಾಕ್‌ಡೌನ್ ಸಂದರ್ಭದ ಅನುಭವದಿಂದ ತಿಳಿದಿರುವಂತೆ ಆಗಬೇಕಿರುವ ತಕ್ಷಣದ ಕೆಲಸವೆಂದರೆ ವಲಸೆ ಕಾರ್ಮಿಕರ ದಾಖಲಾತಿ, ಅವರ ಸಬಲೀಕರಣದ ಕಾನೂನನ್ನು ಬಲಿಷ್ಠಗೊಳಿಸುವುದು., ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಅವರೂ ಭಾರತದ ಸಮಾನ ನಾಗರಿಕರು ಎನ್ನುವ ಅವರ ಹಕ್ಕನ್ನು ಮಾನ್ಯ ಮಾಡುವುದು ಆಗಬೇಕು. ಮೊದಲ ಹೆಜ್ಜೆಯಾಗಿ ಕಾರ್ಮಿಕರನ್ನು ಸನ್ಮಾನ ಪೂರ್ವಕವಾಗಿ ಮನೆಗಳಿಗೆ ಮರಳಿ ತಲುಪಿಸುವ ಹೊಣೆಯನ್ನು ಕೇಂದ್ರ ಸರಕಾರ ನಿಭಾಯಿಸಲಿ.



ಬಹುಶಃ ಲಾಕ್‌ಡೌನ್ ನಡೆಯುತ್ತದೆ ಎಂದು ಮೊದಲೇ ಗೊತ್ತಿದ್ದರೆ 12 ವರ್ಷದ ಬಾಲಕಿ ಜಮ್ಲೊ ಮಕ್ದಂ ಬಸ್ ಹಿಡಿದು ಮನೆ ತಲುಪ ಬಹುದಿತ್ತೇನೋ? ಈ 16 ಮಂದಿ ರೈಲಿನಲ್ಲೇ ಮನೆ ಸೇರುತ್ತಿದ್ದರೇನೋ ಇದಕ್ಕೆ ಉತ್ತರ ಕೊಡುವವರು ಯಾರು?



"ರೈಲಿನಲ್ಲಿ ನಮ್ಮ ಊರಿಗೆ ಕಳಿಸಿಕೊಡಿ"
ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಮುಂದುವರೆದ ಲಾಕ್‌ಡೌನ್: ಈ ಅವಧಿಯಲ್ಲಿ ಏನು ಮಾಡಬೇಕಾಗಿದೆ?

ದೇಶದ ಮುಂದೆ ಸಿಪಿಐ(ಎಂ) ನಿಂದ ಸಮಗ್ರ ಆರ್ಥಿಕ ಕ್ರಮಗಳ ಮಂಡನೆ



ರಾಷ್ಟ್ರವ್ಯಾಪಿ ಲಾಕ್ ಡೌನನ್ನು ಇನ್ನೂ ಎರಡು ವಾರಕ್ಕೆ ವಿಸ್ತರಿಸಿದಾಗ, ಅದನ್ನು ಕುರಿತು ಮೇ 2ರಂದು ಒಂದು ಹೇಳಿಕೆಯನ್ನು ನೀಡಿದ ಸಿಪಿಯ(ಎಂ), ಲಾಕ್‌ಡೌನಿನ ಆರಂಭದಿಂದಲೇ ಎದ್ದು ಬಂದಿರುವ ಸಮಸ್ಯೆಗಳು ಮತ್ತು ಕೋಟ್ಯಂತರ ಭಾರತೀಯ ಜನತೆ, ಅದರಲ್ಲೂ ವಲಸೆ ಕಾರ್ಮಿಕರು, ದಿನಗೂಲಿಯವರು ಮತ್ತು ಬಡಜನರು' ಬದುಕುಳಿಯಲು ಅಸಮರ್ಥರಾದವರು ಎದುರಿಸುತ್ತಿರುವ ಸಂಕಷ್ಟಗಳು ಆಳಗೊಳ್ಳುತ್ತಲೇ ಹೋಗುತ್ತವೆ ಎನ್ನುತ್ತ ಸರಕಾರ ಪ್ರಸಕ್ತ ಅವಧಿಯಲ್ಲಿ ಕೈಗೊಳ್ಳಬೇಕಾದ ಆರ್ಥಿಕ ಕ್ರಮಗಳನ್ನು ಸಾರ್ವಜನಿಕವಾಗಿ ಮುಂದಿಟ್ಟಿದೆ. ಇವಕ್ಕೆ ತುರ್ತಾಗಿ ಗಮನ ಹರಿಸಬೇಕು. ಕೇಂದ್ರ ಸರಕಾರ ತಕ್ಷಣವೇ ಈ ಆರ್ಥಿಕ ಮಾರ್ಗನಕಾಶೆಯನ್ನು ಕೈಗೆತ್ತಿಕೊಳ್ಳಬೇಕ್ತೆನ್ನುತ್ತ ಈ ಮಾರ್ಗನಕಾಶೆಯನ್ನು ಪಕ್ಷ ರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳಿಗೆ ಕಳಿಸಿದೆ.

ಈ ಆರ್ಥಿಕ ಕ್ರಮಗಳಲ್ಲಿ ತಕ್ಷಣವೇ ಕೈಗೊಳ್ಳಬೇಕಾದ ಕ್ರಮಗಳು, 5 ಮಧ್ಯಮಾವಧಿ ಹಾಗೂ ಎರಡು ದೀರ್ಘಾವಧಿಯ ಕ್ರಮಗಳನ್ನು ಮುಂದಿಡಲಾಗಿದೆ.

ತಕ್ಷಣದ ಕ್ರಮಗಳಲ್ಲಿ ಪ್ರತಿ ಆದಾಯ ತೆರಿಗೆದಾರರಲ್ಲದ ಕುಟುಂಬಕ್ಕೆ ಮೂರು ತಿಂಗಳ ಕಾಲ ಮಾಸಿಕ 7500 ರೂ. ಮತ್ತು ಆರು ತಿಂಗಳ ಕಾ'ಲ ಪ್ರತಿ ವ್ಯಕ್ತಿಗೆ 10 ಕೆ.ಜಿ.ಯಂತೆ ಉಚಿತವಾಗಿ ಆಹಾರಧಾನ್ಯಗಳ ಹಂಚಿಕೆ, ಇತರ ಕಾಯಿಲೆಗಳಿಣದ ನರಳುತ್ತಿರುವವರಿಗೆ ಶುಶ್ರೂಷೆ, ಔಷಧಿಗಳ ಕೊರತೆಯಾಗದಂತೆ ನೋಡಿಕೊಳ್ಳುವುದು, ಉದ್ಯೋಗ ನಷ್ಟ, ಸಂಬಳ ಕಡಿತಗಳಾಗದಂತೆ ಖಾತ್ರಿ ಪಡಿಸುವುದು ಸೇರಿದೆ. ಈ ತಕ್ಷಣದ ಕ್ರಮಗಳಿಗೆ ಎಷ್ಟು ಹಣ ಬೇಕಾದೀತು, ಮತ್ತು ಅದನ್ನು ಹೇಗೆ ಹೊಂದಿಸಿಕೊಳ್ಳಲು ಸಾಧ್ಯವಿದೆ ಎಂಬುದನ್ನೂ ಪಕ್ಷ ಇದರಲ್ಲಿ ವಿಶದಪಡಿಸಿದೆ.

ಈ ತಕ್ಷಣದ ಕ್ರಮಗಳ ನಂತರ ನಿಧಾನವಾಗಿ ಲಾಕ್‌ಡೌನನ್ನು ತೆಗೆಯುತ್ತಿದ್ದಂತೆ ಮಧ್ಯಮಾವಧಿಯ ಕ್ರಮಗಳನ್ನು ಎತ್ತಿಕೊಳ್ಳಬೇಕು. ಇದರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಪುನರುಜ್ಜೀವನ, ಅತಿ ತಣ್ಣ, ಸಣ್ಣ, ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಮತ್ತು ಕೃಷಿಗೆ ಹೆಚ್ಚುವರಿ ಬೆಂಬಲ, ವಲಸೆ ಕಾರ್ಮಿಕರು ಮತ್ತೆ ಕೆಲಸಕ್ಕೆ ಬರುವಂತೆ ಪ್ರೋತ್ಸಾಹ, ಆವಶ್ಯಕ ಸರಕುಗಳ ಪೂರೈಕೆ ಮತ್ತು ಗ್ರಾಮೀಣ ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವುದು ಸೇರಿದೆ.

ದೀರ್ಘಕಾಲೀನ ಕ್ರಮಗಳನ್ನೂ ಈಗಲೇ ಆರಂಭಿಸಬೇಕು. ಇದರಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸುವುದು ಮತ್ತು ಧ್ರುವೀಕರಣದ ಹಾಗೂ ಸರ್ವಾಧಿಕಾರಶಾಹಿ ದಾಳಿಗಳನ್ನು ತೊರೆಯುವುದು ಸೇರಿದೆ.

ಪ್ರಸಕ್ತ ಅವಧಿಯಲ್ಲಿ ಬೇಕಾಗಿರುವ ಆರ್ಥಿಕ ಕ್ರಮಗಳು

ಕೊವಿಡ್ ಮಹಾಮಾರಿಯ ಮುನ್ನವೇ ಉತ್ಪಾದನೆಯಲ್ಲಿ ದೊಡ್ಡ ಪ್ರಮಾಣದ ಇಳಿಕೆ, ಉದ್ಯೋಗ ನಷ್ಟ, ಕೃಷಿ ಸಂಕಟ ಮತ್ತು ನಿರುದ್ಯೋಗದಲ್ಲಿ ತೀವ್ರ ಏರಿಕೆಯೊಂದಿಗೆ ಭಾರತೀಯ ಅರ್ಥ ವ್ಯವಸ್ಥೆ ಆಗಲೇ ಒಂದು ತೀವ್ರ ಹಿಂಜರಿತದ ಹಿಡಿತಕ್ಕೆ ಒಳಗಾಗಿತ್ತು. ಈ ಲಾಕ್ ಡೌನಿನೊಂದಿಗೆ ಪರಿಸ್ಥಿತಿ ಇನ್ನೂ ಕೆಟ್ಟಿದೆ, ಜನಗಳ ಸಂಕಟಗಳು ಬಹುಪಟ್ಟು ಬೆಳೆದಿವೆ.

ಇಂತಹ ಸನ್ನಿವೇಶಗಳಲ್ಲಿ, ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಸರಕಾರ ತಕ್ಷಣವೇ ಕೈಗೆತ್ತಿಕೊಳ್ಳಬೇಕಾದ ಒಂದು ಆರ್ಥಿಕ ಯೋಜನೆಯನ್ನು ಮುಂದಿಡುತ್ತಿದೆ. ಆರ್ಥಿಕ ಬಿಕ್ಕಟ್ಟು ಮತ್ತು ಅದರೊಂದಿಗೆ ಉಂಟಾಗುವ ಜನಗಳ ನೋವುಗಳನ್ನು ತಕ್ಷಣದ ಕಾರ್ಯಭಾರಗಳಿಗೆ ಸಂಬಂಧಿಸಿದ ಕ್ರಮಗಳು, ಮಧ್ಯಮಾವಧಿಯ ಕ್ರಮಗಳು ದೀರ್ಘಾವಧಿ ಕ್ರಮಗಳ ಮೂಲಕ ಎದುರಿಸಬೇಕಾಗಿದೆ. ಆದರೆ ಈ ಮೂರನ್ನೂ ಇದೀಗಲೇ ಆರಂಭಿಸಬೇಕಾಗಿದೆ.

ನಮ್ಮ ಅರ್ಥವ್ಯವಸ್ಥೆಗೆ ಮತ್ತು ಜನಗಳಿಗೆ ಈ ಗಂಭೀರವಾದ ಗಮನಕ್ಕೆ ಅರ್ಹವಾಗಿರುವ ಈ ಪ್ರಸ್ತಾವಗಳನ್ನು ಕೇಂದ್ರ ಸರಕಾರ ತಕ್ಷಣವೇ ಪರಿಶೀಲಿಸಬೇಕು ಎಂದು ಸಿಪಿಐ(ಎಂ) ಕರೆ ನೀಡುತ್ತದೆ.

ನಮ್ಮ ಎಲ್ಲ ಜನವಿಭಾಗಗಳು, ರಾಜಕೀಯ ಪಕ್ಷಗಳು ಮತ್ತು ಜನತಾ ಚಳುವಳಿಗಳು ಒಟ್ಟುಗೂಡಿ ಈ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಈ ಮುಂದಿನವುಗಳನ್ನು ಜಾರಿಗೊಳಿಸುವಂತೆ ಒತ್ತಡ ತರಬೇಕು ಎಂದು ಸಿಪಿಐ(ಎಂ) ಮನವಿ ಮಾಡಿಕೊಳ್ಳುತ್ತದೆ.

ತಕ್ಷಣದ ಕ್ರಮಗಳು

1. ತಕ್ಷಣದ ಸಮಸ್ಯೆ, ಕೋಟ್ಯಂತರ ದುಡಿಯುವ ಜನಗಳು ಈಗ ಉಪವಾಸವಿದ್ದಾರೆ, ನಿರುದ್ಯೋಗಿಗಳಾಗಿದ್ದಾರೆ ಮತ್ತು ಅವರಿಗೆ ಯಾವುದೇ ಆದಾಯ ಇಲ್ಲ ಎಂಬುದಕ್ಕೆ ಸಂಬಂಧಪಟ್ಟದ್ದು; ಹಲವರನ್ನು ಕ್ವಾರಂಟೈನ್ ಶಿಬಿರಗಳಲ್ಲಿ ಕೂಡ ಹಾಕಲಾಗಿದೆ. ತೀವ್ರ ಏರುಗತಿಯಲ್ಲಿ ಇದ್ದ ಕೊವಿಡ್–19 ಸೋಂಕಿತರ ಸಂಖ್ಯೆ ಈಗ ಸುಮಾರಾಗಿ ಒಂದೇ ಮಟ್ಟದಲ್ಲಿರುವಂತಹ ಪರಿವರ್ತನೆಯನ್ನು ಲಾಕ್‌ಡೌನ್ ತಂದಿದೆ ಎಂಬ ಸರಕಾರದ ದಾವೆಯನ್ನು ಒಪ್ಪಿಕೊಂಡರೂ, ಲಾಕ್‌ಡೌನ್ ಅಂತ್ಯಗೊಂಡಾಗ ಅದು ಮತ್ತೆ ತೀವ್ರ ಏರುಗತಿಯನ್ನು ಪಡೆಯುವ ಸಾಧ್ಯತೆಯಿದೆ. ಲಾಕ್‌ಡೌನನ್ನೇ ವಿಸ್ತರಿಸಲಿ, ಅಥವ ಬೇರೆ ಯಾವುದೇ ರೀತಿಯ ಬಲವಂತದ ಅಂತರವನ್ನು ಜಾರಿಗೊಳಿಸಲಿ, ಈ ಕೋಟ್ಯಂತರ ಜನಗಳ ಬದುಕಿನಲ್ಲಿ ಉಂಟಾಗಿರುವ ಅಸ್ತವ್ಯಸ್ತತೆ ಮುಂದುವರೆಯುತ್ತದೆ. ಅವರಿಗೆ ಆಹಾರ ಮತ್ತು ನಗದಿನ ರೂಪದಲ್ಲಿ ಒತ್ತಾಸೆ ನೀಡುವುದು ತಕ್ಷಣದ ಆದ್ಯತೆ; ವಿಸ್ಮಯದ ಸಂಗತಿಯೆಂದರೆ, ರೂ.1.7ಕ್ಷ ಕೋಟಿ ರೂ.ಗಳ ಅತ್ಯಲ್ಪ ಆರಂಭಿಕ ಪ್ಯಾಕೇಜಿನ ನಂತರ ಕೇಂದ್ರ ಸರಕಾರ ಈ ಕೋಟ್ಯಂತರ ಸಂಕಷ್ಟಪೀಡಿತರಿಗೆ ನೆರವಾಗಲು ಅಕ್ಷರಶಃ ಏನೂ ಮಾಡಿಲ್ಲ; ಆರಂಭದ ಆ 1.ಲಕ್ಷ ಕೋಟಿ ರೂ.ಗಳಲ್ಲೂ ಸುಮಾರು ಅರ್ಧದಷ್ಟು ಹೊಸ ರೂಪ ತೊಡಿಸಿದ ಹಳೆಯ ಸ್ಕೀಮುಗಳೇ ಆಗಿವೆ.

2. ಈ ಸಂಕಷ್ಟಗಳು ಎಷ್ಟು ಕಾಲ ಮುಂದುವರೆಯುತ್ತವೆ ಎಂದು ಗೊತ್ತಿಲ್ಲ; ಆದರೆ ಕೇಂದ್ರ ಸರಕಾರ ಮೊದಲಿಗೆ ಆದಾಯ ತೆರಿಗೆದಾರರಲ್ಲದ ಕುಟುಂಬಗಳಿಗೆ ತಿಂಗಳಿಗೆ ರೂ.7500ರಂತೆ ಮೂರು ತಿಂಗಳ ಕಾಲ, ಮತ್ತು ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ.ಧಾನ್ಯದಂತೆ ಆರು ತಿಂಗಳ ಕಾಲ ಲಭ್ಯಗೊಳಿಸುವುದರೊಂದಿಗೆ ಆರಂಭಿಸಬೇಕು. ಭಾರತ ಆಹಾರ ನಿಗಮ(ಎಫ್‌ಸಿಐ)ದ ಬಳಿ ಈಗ 7.7 ಕೋಟಿ ಟನ್ ಆಹಾರಧಾನ್ಯಗಳಿವೆ. ಬಫರ್ ಮತ್ತು ಕಾರ್ಯನಿರ್ವಹಣೆಗೆ ವಿಧಿಸಿರುವ ಮಟ್ಟ 2.4 ಕೋಟಿ ಟನ್‌ಗಳು. ಇದಲ್ಲದೆ, 4 ಕೋಟಿ ಟನ್ ಹಿಂಗಾರು ಕಟಾವು ಬಂದು ಸೇರಲಿದೆ. ಹೀಗೆ ವಿತರಣೆಗೆ ಧಾನ್ಯಗಳು ಪುಷ್ಕಳವಾಗಿವೆ, ಎಷ್ಟೆಂದರೆ, ಸರಕಾರ ಅಕ್ಕಿ ದಾಸ್ತಾನನ್ನು ಇಥನೋಲ್ ಉತ್ಪಾದಿಸಲು ಬಳಸುವ ಯೋಜನೆ ಹಾಕುತ್ತಿದೆ. ಇಂತಹ ಬಳಕೆಗಿಂತ ಖಂಡಿತವಾಗಿಯೂ ಕೋಟ್ಯಂತರ ಸಂಕಷ್ಟಪೀಡಿತರಿಗೆ ಇದನ್ನು ಉಚಿತವಾಗಿ ಹಂಚುವುದು ಆದ್ಯತೆ ಪಡೆಯಬೇಕು. ಇದನ್ನು ಪಡೆಯುವವರ ಬಳಿ ಅದನ್ನು ಬೇಯಿಸಿ ತಿನ್ನುವ ಸೌಕರ್ಯಗಳಿಲ್ಲದ್ದಲ್ಲಿ ಧಾನ್ಯಗಳ ಬದಲು ಬೇಯಿಸಿದ ಆಹಾರವನ್ನು ಕೊಡಬಹುದು. ಮಧ್ಯಾಹ್ನದ ಊಟದ ರಾಷ್ಟ್ರವ್ಯಾಪಿ ಜಾಲವನ್ನು ಈ ಉದ್ದೇಶಕ್ಕೆ ಬಳಸಿಕೊಳ್ಳಬಹುದು. ಧಾನ್ಯಗಳಲ್ಲದೆ, ಒಂದು ನಿರ್ದಿಷ್ಟ ಪ್ರಮಾಣದ ಬೇಳೆಕಾಳುಗಳು, ಅಡುಗೆ ಎಣ್ಣೆ ಮತ್ತು ಇತರ ಆವಶ್ಯಕತೆಗಳನ್ನು ಕೂಡ ಈ ಅವಧಿಯಲ್ಲಿ ಉಚಿತವಾಗಿ ಪೂರೈಸಬೇಕು.

3. ಇಂತಹ 3 ತಿಂಗಳ ವರೆಗಿನ ನಗದು ಮತ್ತು ಆರು ತಿಂಗಳ ವರೆಗಿನ ಆಹಾರ ವರ್ಗಾವಣೆಗಳಿಗೆ ಬೇಕಾಗುವ ಒಟ್ಟು ಮೊತ್ತ, 20ಶೇ. ಶ್ರೀಮಂತರು ಫಲಾನುಭವಿಗಳ ಪಟ್ಟಿಯಿಂದ ತಾವಾಗಿಯೇ ಹೊರಗಿರುತ್ತಾರೆ ಎಂದು ಭಾವಿಸಿದರೆ, ಸುಮಾರಾಗಿ ಒಟ್ಟು ಆಂತರಿಕ ಉತ್ಪನ್ನ(ಜಿಡಿಪಿ)ದ 3ಶೇ.ದಷ್ಟಾಗುತ್ತದೆ ಎಂದು ಅಂದಾಜು ಮಾಡಲಾಗಿದೆ. ಇದಕ್ಕಾಗಿ ತೆರಿಗೆಯನ್ನು ಎತ್ತುವ ಸಾಧ್ಯತೆಯನ್ನು ನಂತರ, ಒಂದು ಪೂರಕ ಬಜೆಟನ್ನು ಮಂಡಿಸಬೇಕಾಗಿ ಬಂದಾಗ ಶೋಧಿಸಬಹುದು. ಆ ಬಜೆಟಿನಲ್ಲಿ ಸಂಪತ್ತು ತೆರಿಗೆ ಒಂದು ನಿರ್ಣಾಯಕ ಪಾತ್ರವನ್ನು ವಹಿಸಬೇಕಾಗುತ್ತದೆ: ಅದು ಸಂಪನ್ಮೂಲಗಳನ್ನೂ ಎತ್ತಿ ಕೊಡುತ್ತದೆ ಮತ್ತು ತ್ವರಿತವಾಗಿ ಹೆಚ್ಚುತ್ತಿರುವ ಸಂಪತ್ತಿನ ಅಸಮಾನತೆಗಳನ್ನು ತಡೆಗಟ್ಟುತ್ತದೆ. ಇದರೊಂದಿಗೇ, ಕಡು ಶ್ರೀಮಂತರ ಮೇಲೆ ಒಂದು ತೆರಿಗೆಯನ್ನೂ ಹಾಕಬೇಕು. ಆದರೆ, ಸದ್ಯಕ್ಕೆ, ಈ ಸಮಸ್ತ ವೆಚ್ಚವನ್ನು ಭಾರತೀಯ ರಿಝರ್ವ್ ಬ್ಯಾಂಕಿನಿಂದ ಸಾಲ ಪಡೆದು ಭರಿಸಬೇಕು. ಇದು, ನಮ್ಮ ಅಭಿಪ್ರಾಯದಲ್ಲಿ, ಇಂದಿನ ಸಂದರ್ಭದಲ್ಲಿ, ದೇಶದಲ್ಲಿ ಪೂರ್ಣವಾಗಿ ಬಳಕೆಯಾಗದ ಉತ್ಪಾದನಾ ಸಾಮರ್ಥ್ಯ ಮತ್ತು ಮಾರಾಟವಾಗದ ಆಹಾರ ದಾಸ್ತಾನು ದೊಡ್ಡ ಪ್ರಮಾಣದಲ್ಲಿರುವಾಗ ಅರ್ಥವ್ಯವಸ್ಥೆಗೆ ಯಾವುದೇ ತೊಂದರೆಗಳನ್ನು ಉಂಟುಮಾಡುವುದಿಲ್ಲ.

4. ಇಂತಹ ವರ್ಗಾವಣೆಗಳಿಗೆ ಸಂಪನ್ಮೂಲಗಳನ್ನು ಕೇಂದ್ರವು ಕೊಡಬೇಕು, ವಾಸ್ತವಿಕ ವರ್ಗಾವಣೆ ರಾಜ್ಯ ಸರಕಾರಗಳ ಅಡಿಯಲ್ಲಿ ನಡೆಯಬೇಕು. ಆದ್ದರಿಂದ ಕೇಂದ್ರವು ಧಾನ್ಯ ವರ್ಗಾವಣೆಗಳನ್ನು ರಾಜ್ಯಗಳಿಗೆ ಉಚಿತವಾಗಿ ಲಭ್ಯಗೊಳಿಸಬೇಕು, ಮತ್ತು ನಗದು ವರ್ಗಾವಣೆಗಳಿಗೆ ಅನುದಾನಗಳ ರೂಪದಲ್ಲಿ ಕೊಡಬೇಕು; ರಾಜ್ಯಗಳ ನಡುವೆ ಇದರ ವಿತರಣೆ ನಡೆಸುವುದು ಸುಲಭವಾಗಿದೆ, ಏಕೆಂದರೆ ವರ್ಗಾಣೆಗಳು ಸಾರ್ವತ್ರಿಕವಾಗಿರುವುದರಿಂದ ಜನಸಂಖ್ಯೆಯೊಂದೇ ನಿರ್ಧಾರಕ ಮಾನದಂಡವಾಗುತ್ತದೆ. ರಾಜ್ಯಗಳು ಇದರಿಂದ ಸೂಕ್ತ ಮೊತ್ತಗಳನ್ನು ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳಿಗೆ ಒದಗಿಸಬೇಕು. ವರ್ಗಾವಣೆಗಳನ್ನು ಮಾಡುವುದರಲ್ಲಿ ಈ ಸಂಸ್ಥೆಗಳ ನೆರವು ಅತ್ಯಗತ್ಯವಾಗಿರುತ್ತದೆ.

5. ಇಂತಹ ವರ್ಗಾವಣೆಗಳಲ್ಲದೆ, ರಾಜ್ಯ ಸರಕಾರಗಳು ಹೆಚ್ಚುವರಿ ವೆಚ್ಚಗಳನ್ನು ಕೈಗೊಳ್ಳ ಬಯಸಬಹುದು. ಕೇಂದ್ರವು ಜಿಎಸ್‌ಟಿ ಪರಿಹಾರ ಮೊತ್ತಗಳನ್ನು ಕೊಡುವುದಾಗಿ ಗಂಭೀರ ಆಶ್ವಾಸನೆಯನ್ನು ಕೊಟ್ಟಿದ್ದರೂ, ಆಗಸ್ಟ್ ತಿಂಗಳಿಂದ ಅದನ್ನು ಪಾವತಿ ಮಾಡಿಲ್ಲ ಎಂಬುದು ವಿಸ್ಮಯಕಾರಿ ಸಂಗತಿ. ಈ ಮೊತ್ತವನ್ನು ತಕ್ಷಣವೇ ತೆರಬೇಕು. ಇದರೊಂದಿಗೇ, ರಾಜ್ಯ ಸರಕಾರಗಳ ಸಾಲ ಎತ್ತುವ ಮಿತಿಗಳನ್ನು ದ್ವಿಗುಣಗೊಳಿಸಬೇಕು. ನಿಜ ಹೇಳಬೇಕೆಂದರೆ, ಪ್ರತಿಯೊಂದು ರಾಜ್ಯದ ಸಾಲ ಮಿತಿಯನ್ನು ಪ್ರಮಾಣಾನುಗುಣವಾಗಿ ದ್ವಿಗುಣಗೊಳಿಸುವುದು ತಕ್ಷಣದ ಹೆಜ್ಜೆಯಾಗಬೇಕು. ಮತ್ತು ರಾಜ್ಯಗಳು ಬಹಿರಂಗ ಮಾರುಕಟ್ಟೆಯಿಂದ ಸಾಲ ಎತ್ತುವ ಬದಲು ಕೇಂದ್ರೀಯ ಬ್ಯಾಂಕಿನಿಂದ ಸಾಲ ಪಡೆಯಲು ಬಿಡಬೇಕು. ರಾಜ್ಯ ಸಾಲಪತ್ರಗಳ ಬಹಿರಂಗ ಹರಾಜಿನ ಬಡ್ಡಿದರಗಳು ಇತ್ತೀಚಿನ ಸಮಯದಲ್ಲಿ ಏರಿವೆ, ಇದು ಈಗಾಗಲೆ ಹಣಕಾಸು ಹೊಡೆತಗಳಿಗೆ ಈಡಾಗಿರುವ ರಾಜ್ಯಗಳ ಮೇಲೆ ಅಗಾಧ ಹೊರೆಯನ್ನು ಹಾಕಿದೆ. ಈ ದಾರಿಯನ್ನು ಅವಲಂಬಿಸುವ ಬದಲು, ರಾಜ್ಯ ಸಾಲಪತ್ರಗಳನ್ನು ರಿಝರ್ವ್ ಬ್ಯಾಂಕ್ ಸದ್ಯದ ರೆಪೊ ದರಗಳಲ್ಲಿ ಖರೀದಿಸಬೇಕು. ಇದನ್ನು ವಿವಿಧ ರೀತಿಗಳಲ್ಲಿ ಯು.ಎಸ್. ಫೆಡರಲ್ ರಿಝರ್ವ್, ಯುರೋಪಿಯನ್ ಸೆಂಟ್ರಲ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡ್, ಹಾಗೂ ಅಭಿವೃದ್ಧಿಶೀಲ ದೇಶಗಳ ಹಲವು ಕೇಂದ್ರೀಯ ಬ್ಯಾಂಕುಗಳು ಮಾಡುತ್ತಿವೆ. ಇವೆಲ್ಲವೂ ಅಲ್ಲದೆ, ಮುಖ್ಯವಾಗಿ ಕೇಂದ್ರ ಸರಕಾರವು ಪ್ರಧಾನ ಮಂತ್ರಿಗಳ ಹೆಸರಿಟ್ಟಿರುವ ಖಾಸಗಿ ಟ್ರಸ್ಟ್‌ನಲ್ಲಿ ಸಂಗ್ರಹಿಸಲಾಗುತ್ತಿರುವ ಸಾವಿರಾರು ಕೋಟಿ ರೂಪಾಯಿಗಳಿಂದ ರಾಜ್ಯ ಸರಕಾರಗಳಿಗೆ ಮಹಾಮಾರಿಯ ವಿರುದ್ಧ ಹೋರಾಡಲು ಮತ್ತು ಆರೋಗ್ಯಪಾಲನೆ ಸೌಕರ್ಯಗಳನ್ನು ಉತ್ತಮ ಪಡಿಸಲು, ಅಂದರೆ ವೆಂಟಿಲೇಟರುಗಳು, ಮುಖಗವಸುಗಳು, ಸುರಕ್ಷಾ ಉಡುಗೆಗಳು, ತಪಾಸಣಾ ಸಾಧನಗಳು ಇತ್ಯಾದಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸಹಾಯವನ್ನು ಕೊಡಬೇಕು.

6. ಮಹಾಮಾರಿಯ ವಿರುದ್ಧ ಹೋರಾಟವನ್ನು ನಡೆಸಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುತ್ತಲೇ, ಗಂಭೀರ ಕಾಯಿಲೆಗಳಿಂದ ನರಳುತ್ತಿರುವ ಯಾರೂ ಕೂಡ ಅಗತ್ಯ ವೈದ್ಯಕೀಯ ಸಹಾಯದಿಂದ ವಂಚಿತರಾಗುವುದಿಲ್ಲ ಎಂದು ಕೇಂದ್ರ ಸರಕಾರ ತಕ್ಷಣವೇ ಖಾತ್ರಿಪಡಿಸಬೇಕು. ನಮ್ಮ ಮಕ್ಕಳಿಗೆ ಜೀವವುಳಿಸುವ ಚುಚ್ಚುಮದ್ದುಗಳು ಮತ್ತು ಗರ್ಭಿಣಿಯರಿಗೆ ಚುಚ್ಚುಮದ್ದುಗಳು ಮಹಾಮಾರಿಯ ವಿರುದ್ಧ ನಮ್ಮ ಹೋರಾಟದೊಂದಿಗೇ ಮುಂದುವರೆಯುವಂತೆ ನೋಡಿಕೊಳ್ಳಬೇಕು. ಔಷಧಿಗಳ ಕೊರತೆ, ಜತೆಗೆ, ರಕ್ತ ಮುಂತಾದವುಗಳ ಕೊರತೆ ಉಂಟಾಗದಂತೆ ಯುದ್ಧೋಪಾದಿಯಲ್ಲಿ ಅದನ್ನು ಎದುರಿಸಬೇಕು.

7. ಕೇಂದ್ರವು ರಾಜ್ಯಗಳಿಗೆ ಕೊಡಬಹುದಾದ ಸಹಾಯಗಳನ್ನು ನೀಡಿದಾಗ್ಯೂ, ಮಹಾಮಾರಿಯನ್ನು ನೇರವಾಗಿ ಎದುರಿಸುತ್ತಿರುವ ರಾಜ್ಯ ಸರಕಾರಗಳು ಸಾರ್ವಜನಿಕ ಆರೋಗ್ಯಪಾಲನೆ ಸೌಕರ್ಯಗಳನ್ನು ಮಾತ್ರವೇ ಅವಲಂಬಿಸಿದ್ದರೆ, ಕೊರತೆಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ, ಸ್ಪೇನ್ ಮಾಡಿರುವಂತೆ, ಖಾಸಗಿ ಆರೋಗ್ಯಪಾಲನೆ ಸೌಕರ್ಯಗಳನ್ನು ಮಹಾಮಾರಿ ಇರುವ ವರೆಗಾದರೂ ಜನಗಳ 'ತಪಾಸನೆಗೆ ಮತ್ತು ಉಚಿತ ಶುಶ್ರೂಷೆಯ ಸಾರ್ವಜನಿಕ ಉದ್ದೇಶದಿಂದ ವಶಪಡಿಸಿಕೊಳ್ಳಬೇಕು. ಸರಕಾರ ಡಾಕ್ಟರುಗಳು ಮತ್ತು ನರ್ಸ್‌ಗಳ ಸೇವೆಗಳನ್ನು ತರ್ಕಬದ್ಧ ದರಗಳಲ್ಲಿ ಬಳಸಿಕೊಳ್ಳುವುದಾಗಿ ಹೇಳಬೇಕು. ಸುಪ್ರಿಂ ಕೋರ್ಟ್ ಖಾಸಗಿ ಆರೋಗ್ಯಪಾಲನೆ ಸೌಕರ್ಯಗಳಲ್ಲಿ ತಪಾಸಣೆಯನ್ನು ಶುಲ್ಕರಹಿತಗೊಳಿಸಿತ್ತು, ಆದರೆ ನಂತರ ಅದು ಈ ನಿಲುವಿನಿಂದ ಹಿಂದಕ್ಕೆ ಸರಿದಿರುವುದು ತಬ್ಬಿಬ್ಬುಗೊಳಿಸಿರುವ ಸಂಗತಿ. ಇದು ಕಾರ್ಯಾಂಗದ ಮಧ್ಯಪ್ರವೇಶವನ್ನು ಸಂಪೂರ್ಣವಾಗಿ ಆವಶ್ಯಕಗೊಳಿಸುತ್ತದೆ. ಅಯೋಜಿತ ಮತ್ತು ಸರಿಯಾಗಿ ಪರಿಕಲ್ಪಿಸದೇ ಮಾಡಿರುವ ಲಾಕ್‌ಡೌನ್‌ನಿಂದ ಲಕ್ಷಾಂತರ ಜನಗಳಿಗೆ ತೀಕ್ಷ್ಣ ಸಂಕಷ್ಟಗಳನ್ನು ಉಂಟು ಮಾಡಿರುವ ಕೇಂದ್ರ ಸರಕಾರಕ್ಕೆ ಈ ಬಿಕ್ಕಟ್ಟಿನ ಸಮಯದಲ್ಲಿ ಖಾಸಗಿ ಆರೋಗ್ಯಪಾಲನೆ ಸೌಕರ್ಯಗಳನ್ನು ಬಳಸಿಕೊಳ್ಳುವಂತೆ ಮಾಡಲಾಗದಿದ್ದರೆ, ಆಗ ಅದು ಒಂದು ಆಘಾತಕಾರೀ ವರ್ಗ ಪಕ್ಷಪಾತವನ್ನು ಪ್ರದರ್ಶಿಸಿದಂತಾಗುತ್ತದೆ; ಇದು ಮಹಾಮಾರಿಯ ವಿರುದ್ಧ ಹೋರಾಡಲು ಅತ್ಯಗತ್ಯವಾಗಿ ಬೇಕಾಗಿರುವ ರಾಷ್ಟ್ರೀಯ

ಪುಟ 10 ನೋಡಿ

ಏನು ಮಾಡಬೇಕಾಗಿದೆ?

ಹಿಂದಿನ ಪುಟದಿಂದ

ಸೌಹಾರ್ದವನ್ನು ಶಿಥಿಲಗೊಳಿಸಿದಂತಾಗುತ್ತದೆ.

8. ಉದ್ಯೋಗನಷ್ಟಗಳು ಮತ್ತು ಸಂಬಳ ಕಡಿತಗಳು ಇಲ್ಲದಂತೆ ಖಾತ್ರಿಪಡಿಸಲು ಕೇಂದ್ರ ಸರಕಾರ ತಕ್ಷಣವೇ ಕ್ರಮಗಳನ್ನು ಕೈಗೊಳ್ಳಬೇಕು. ಅವಕ್ಕೆ ಗ್ಯಾರಂಟಿಯಾಗಿ ನಿಲ್ಲಬೇಕು. ಅತ್ಯಂತ ಹೆಚ್ಚು ಬಾಧಿತರಾಗುವ ವಿಭಾಗಗಳು–ಮಹಿಳೆಯರು, ನಿರ್ದಿಷ್ಟವಾಗಿ ಆದಿವಾಸಿಗಳು, ಕಾಂಟ್ರಾಕ್ಟ್ ಮತ್ತು ದಲಿತ ದೈಹಿಕ ಶ್ರಮಜೀವಿಗಳು– ವಿಶೇಷವಾಗಿ ರಕ್ಷಣೆ ಪಡೆಯುವಂತೆ ವಿಶೇಷ ಗಮನವನ್ನು ನೀಡಬೇಕು. ಜಗತ್ತಿನ ಹಲವು ದೇಶಗಳು ಸಂಬಳಗಳ ಮೊತ್ತಕ್ಕೆ ಗ್ಯಾರಂಟಿ ಪ್ರಕಟಿಸಿವೆ, ಕೆಲವು 80ಶೇ.ದ ವರೆಗೂ ಹೊಣೆ ತಗೊಂಡಿವೆ. ಕೇಂದ್ರ ಸರಕಾರ ಇದನ್ನು ತಕ್ಷಣವೇ ಪ್ರಕಟಿಸಬೇಕು.

9. ಸಾರ್ವತ್ರಿಕ ವರ್ಗಾವಣೆಗಳನ್ನು ಹೇಗೆ ಜಾರಿಗೆ ತರುವುದು ಎಂಬುದು ಸಮಸ್ಯೆಗಳನ್ನು ಒಡ್ಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಫಲಾನುಭವಿಗಳ ಈಗಿರುವ ಯಾವ ಪಟ್ಟಿಯೂ ಸಾಲದಾಗುತ್ತದೆ, ಅದೇ ರೀತಿಯಲ್ಲಿ ರೇಷನ್ ಅಂಗಡಿಗಳು ಮುಂತಾದ ಈಗಿರುವ ಯಾವುದೇ ಒಂದು ಕೊಂಡಿಯಿಂದ ಎಲ್ಲರನ್ನೂ ತಲುಪಲು ಸಾಧ್ಯವಾಗಲಿಕ್ಕಿಲ್ಲ. ಈ ಸಮಸ್ಯೆ ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಹೆಚ್ಚು ಗಂಭೀರವಾಗಿರುತ್ತದೆ. ಧಾನ್ಯ ವಿತರಣೆಯನ್ನು ವಿವಿಧ ಗುರುತು ದಾಖಲೆಗಳ(ರೇಷನ್ ಕಾರ್ಡ್, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ನರೇಗ ಜಾಬ್ ಕಾರ್ಡ್ ಇತ್ಯಾದಿ) ಸಂಯೋಜನೆಯಿಂದ ಮಾಡಬಹುದು. ಇದರ ಜತೆಗೆ, ಈ ಯಾವ ಕಾರ್ಡ್‌ಗಳೂ ಇರದವರನ್ನು ತಲುಪುವುದನ್ನು ಖಾತ್ರಿಪಡಿಸಲು ಸ್ವಲ್ಪ ಮಟ್ಟದ ವರೆಗೆ ಶಾಸಕರ, ಗ್ರಾಮ ಪಂಚಾಯತು ಮುಖ್ಯಸ್ಥರ, ನಗರಸಭಾ ಸದಸ್ಯರ ವಿವೇಚನೆಗೆ ಅವಕಾಶ ಕೊಡಬಹುದು. ವಿವಿಧ ರಾಜ್ಯ ಸರಕಾರಗಳು ನಗದು ವರ್ಗಾವಣೆಗೆ ಈಗಿರುವ ಫಲಾನುಭವಿಗಳ ಪಟ್ಟಿಗಳು ಮತ್ತು ಬ್ಯಾಂಕ್ ಖಾತೆಗಳನ್ನಷ್ಟೇ ಅವಲಂಬಿಸದೆ ಎಲ್ಲರನ್ನೂ(ಕೆಲವರನ್ನು ಹೊರತುಪಡಿಸಿ) ತಲುಪಲು ವಿವಿಧ ನವೀನ ದಾರಿಗಳನ್ನು ಶೋಧಿಸುತ್ತಿವೆ. ಇವನ್ನು ವಿಸ್ತರಿಸಬೇಕು.

10. ಈ ಕಾರ್ಯಾಚರಣೆಗಳನ್ನು, ಭಾರತವು ಜಾಗತಿಕ ಅರ್ಥ ವ್ಯವಸ್ಥೆಯಿಂದ ಸಾಕಷ್ಟು ಪ್ರಮಾಣದಲ್ಲಿ ಎದುರುಗಾಳಿಯನ್ನು ಎದುರಿಸ ಬೇಕಾಗಿರುವ ಮತ್ತು ನಮ್ಮ ಪಾವತಿ ಶಿಲ್ಕು ಒತ್ತಡಕ್ಕೆ ಒಳಗಾಗಬಹುದಾಗಿರುವ ಸಮಯದಲ್ಲಿ ಕೈಗೊಳ್ಳಲೇ ಬೇಕಾಗಿದೆ. ಮಹಾಮಾರಿ ಸ್ಪಷ್ಟವಾಗಿ ಬಂಡವಾಳಶಾಹಿ ಜಾಗತೀಕರಣದ ಕುಂದುಕೊರತೆಗಳನ್ನು ಪ್ರಕಟಗೊಳಿಸಿದೆ. ಒಂದೆಡೆಯಲ್ಲಿ, ಗಡಿಗಳ ಆಚೆ–ಈಚೆ ವೈರಾಣುವಿನ ಹರಡಿಕೆ, ಗಡಿಗಳ ಆಚೆ–ಈಚೆ ಹಣಕಾಸು ಬಂಡವಾಳದ ಚಲನವಲನದಷ್ಟೇ ತ್ವರಿತವಾಗಿ ನಡೆದಿದೆ. ಇನ್ನೊಂದೆಡೆಯಲ್ಲಿ, ರಾಷ್ಟ್ರೀಯ ಸರಕಾರಗಳು, ವಿಶೇಷವಾಗಿ ಭಾರತ ಸರಕಾರವೂ ಸೇರಿದಂತೆ, ಹಣಕಾಸಿನ ಪ್ರತಿಯೊಂದೂ ಚಪಲತೆಯ ಎದುರು ತಲೆಬಾಗುವಂತೆ ಹೆದರಿಸಲಾಗಿದೆ. ಇದರಲ್ಲಿ ಮಹಾಮಾರಿಯ ಸಂದರ್ಭದಲ್ಲೂ, ವಿತ್ತೀಯ ಕೊರತೆಯ ನಿರ್ಬಂಧಗಳನ್ನು ಗೌರವಿಸುವ, ಆ ಮೂಲಕ ಕೋಟ್ಯಂತರ ದುಡಿಯುವ ಜನಗಳ ಸಂಕಷ್ಟಗಳನ್ನು ನಿವಾರಿಸಲು ಸಾಕಷ್ಟು ವೆಚ್ಚ ಮಾಡದೇ ಇರುವಂತಹ ಅವಿವೇಕವೂ ಸೇರಿದೆ. ಆದರೆ, ಈಗಲೂ, ಭಾರತೀಯ ಸರಕಾರ ಹಣಕಾಸು ಬಂಡವಾಳದ ತಾಕೀತುಗಳನ್ನು ವಿಧೇಯವಾಗಿ ಪಾಲಿಸಿ, ಸಂಕಷ್ಟಗಳನ್ನು ನಿವಾರಿಸುವಲ್ಲಿ ಅತ್ಯಂತ ಜಿಪುಣತನವನ್ನು ತೋರಿದರೂ, ಕೇಂದ್ರ ಸರಕಾರದ ನೌಕರರಿಗೆ ತುಟ್ಟಿ ಭತ್ಯೆಯನ್ನು ನಿರಾಕರಿಸುವ ವರೆಗೂ ಹೋಗಿದ್ದರೂ, ಹಣಕಾಸು ಬಂಡವಾಳ ದೇಶ ಬಿಟ್ಟು ಪಲಾಯನ ಮಾಡುತ್ತಿದೆ. ಇದರ ಫಲಿತಾಂಶವಾಗಿ ರೂಪಾಯಿ ಮೌಲ್ಯ ಡಾಲರಿಗೆ ಎದುರಾಗಿ ಹಿಂದೆಂದೂ ಕಾಣದ ರೀತಿಯಲ್ಲಿ ಇಳಿಯುತ್ತಿದೆ. ಹಣಕಾಸು ಬಂಡವಾಳದ ಈ ರೀತಿಯ ಹೊರ ಹಾರಾಟ ಮೂರನೇ ಜಗತ್ತಿನ ಎಲ್ಲ ದೇಶಗಳಲ್ಲೂ ಕಾಣಬರುತ್ತಿದೆ. ಇದರಲ್ಲಿ ಭಾರತದ ಸ್ಥಿತಿಯೇ ಇತರರಿಗಿಂತ ಉತ್ತಮವಾಗಿದೆ, ಏಕೆಂದರೆ ಅರ್ಧ ಟ್ರಿಲಿಯನ್ ಡಾಲರ್‌ಗಳಷ್ಟು ವಿದೇಶಿ ವಿನಿಮಯ ಮೀಸಲು ಭಾರತದಲ್ಲಿದೆ. ಈ ಟಿಪ್ಪಣಿಯಲ್ಲಿ ಸೂಚಿಸಿದ ಕ್ರಮಗಳನ್ನು ಕೈಗೊಂಡರೆ ದೇಶದಿಂದ ಹೊರಗೆ ಪಲಾಯನ ಮಾಡುವ ಹಣಕಾಸು ಬಂಡವಾಳದ ಪ್ರವೃತ್ತಿ ಇನ್ನಷ್ಟು ಗಟ್ಟಿಗೊಳ್ಳುತ್ತದೆ. ಅದನ್ನು ಎದುರಿಸಲು ತಕ್ಷಣವೇ ಎರಡು ಕ್ರಮಗಳನ್ನು ಕೈಗೊಳ್ಳಬೇಕು. ಮೊದಲನೆಯದಾಗಿ, ಹಣಕಾಸು ಬಂಡವಾಳದ ಹೊರ ಹರಿವಿನ ಮೇಲೆ ಸ್ವಲ್ಪ ಮಟ್ಟಿನ ನೇರ ಹತೋಟಿಯನ್ನು ತರುವುದು; ಏಕೆಂದರೆ ನಮ್ಮ ವಿದೇಶಿ ವಿನಿಮಯ ಮೀಸಲು ಬಂಡವಾಳದ ಹೊರಹರಿವಿಗೆ ಪೋಲು ಆಗಬಾರದು. ಎರಡನೆಯ ಕ್ರಮ ಐಎಂಎಫ್ ಗಮನಾರ್ಹ ಪ್ರಮಾಣದಲ್ಲಿ ಹೊಸ 'ಸ್ಪೆಷಲ್ ಡ್ರಾಯಿಂಗ್ ರೈಟ್ಸ್'(ಎಸ್.ಡಿ.ಆರ್.– ವಿಶೇಷ ಹಣ ಪಡೆಯುವ ಹಕ್ಕು–ಅನು)ಗಳನ್ನು ನೀಡುವುದಕ್ಕೆ ಸಂಬಂಧಪಟ್ಟದ್ದು. ಭಾರತ, ಈಗ ಸರಕಾರ ಮಾಡಿರುವಂತೆ, ಇದನ್ನು ತರ್ಕಹೀನವಾಗಿ ವಿರೋಧಿಸುವ ಬದಲು, ಇದನ್ನು ಸಕ್ರಿಯವಾಗಿ ಬೆಂಬಲಿಸಬೇಕು. ಯುಎಸ್ ಫೆಡರಲ್ ರಿಝರ್ವ್ ಬೋರ್ಡಿನ ಸ್ವಾಪ್ ಲೈನ್ಸ್ ಸೇರಿದಂತೆ ಬೇರೆಲ್ಲ ಸಾಲಗಳಂತಲ್ಲದೆ, ಎಸ್‌ಡಿಆರ್‌ಗಳಲ್ಲಿ ತಾರತಮ್ಯಗಳಿಲ್ಲ, ಇವು ಯಾರದೋ ವಿವೇಚನಾ ಅಧಿಕಾರವನ್ನು ಅವಲಂಬಿಸಿಲ್ಲ, ಬಡ್ಡಿರಹಿತವಾಗಿವೆ, ಮರುಪಾವತಿ ಮಾಡಬೇಕಾಗಿಲ್ಲ, ಮತ್ತು ಯಾವುದೇ "ಷರತ್ತುಗಳಿಗೆ" ಒಳಪಟ್ಟಿಲ್ಲ ಅಥವ ಯಾರೂ ಕೈತಿರುಚಲು ಅವಕಾಶವಿಲ್ಲ,

ಮಧ್ಯಮಾವಧಿ ಕ್ರಮಗಳು

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಸ್ಕೀಮ್ (ಮನರೇಗ)

11. ಈ ತಕ್ಷಣದ ಕ್ರಮಗಳನ್ನು ಅನುಸರಿಸಿ, ಲಾಕ್‌ಡೌನನ್ನು ನಿಧಾನವಾಗಿ ತೆರವು ಮಾಡುತ್ತಿರುವಂತೆಯೇ, ಮಧ್ಯಮಾವಧಿ ಕ್ರಮಗಳನ್ನು ಕೈಗೊಳ್ಳಬೇಕು. ಇವುಗಳಲ್ಲಿ, ನಾಲ್ಕು ಕೇಂದ್ರೀಯ ಮಹತ್ವ ಹೊಂದಿವೆ. ಮೊದಲನೆಯದ್ದು ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಸ್ಕೀಮ್(ಮನರೇಗ)ಗೆ ಸಂಬಂಧಪಟ್ಟದ್ದು. ಹೆಚ್ಚಿನ ರಾಜ್ಯಗಳಲ್ಲಿ ಇದು ಸುಮಾರಾಗಿ ನಿಂತೇ ಹೋಗಿದೆ. ಮನರೆಗದ ಅಡಿಯಲ್ಲಿ ಕಾಮಗಾರಿಗಳನ್ನು ಪುನರುಜ್ಜೀವನಗೊಳಿಸಬೇಕು. ಈ ಮೂಲಕ ಮೇಲೆ ಸೂಚಿಸಿದಂತಹ ನಗದು ವರ್ಗಾವಣೆ ಖಾಲಿಯಾಗಲಾರಂಭಿಸುವ ವೇಳೆಗೆ, ಲಾಕ್‌ಡೌನಿನಿಂದಾಗಿ ಊರುಗಳಿಗೆ ಮರಳಿದ, ಸದ್ಯ ಆದಾಯವಿಲ್ಲದ ಕೆಲಸಗಾರರೂ ಸೇರಿದಂತೆ ಎಲ್ಲ ಕೂಲಿಕಾರರರಿಗೆ ಜೀವನೋಪಾಯ ಸಿಕ್ಕಂತಾಗುತ್ತದೆ. ಉದ್ಯೋಗ ಖಾತ್ರಿಗೆ ಸಂಬಂಧಪಟ್ಟಂತೆ ನಾಲ್ಕು ಅಂಶಗಳು ನಿರ್ಣಾಯಕವಾಗಿವೆ. ಮೊದಲನೆಯದು, ಬಾಕಿಯಾಗಿರುವ ಕೂಲಿಗಳನ್ನು ತಕ್ಷಣವೇ ಪಾವತಿ ಮಾಡಬೇಕು. ಎರಡು, ಪಟ್ಟಣಗಳಿಂದ ಹಿಂದಿರುಗಿರುವ ವಲಸಿಗರೂ ಸೇರಿದಂತೆ, ಈ ಸ್ಕೀಮಿನಲ್ಲಿ ಈ ಹಿಂದೆ ದಾಖಲಾತಿ ಪಡೆದವರು ಮಾತ್ರವಲ್ಲದೆ, ಕೆಲಸ ಕೇಳುವ ಯಾರಿಗೇ ಆದರೂ ಉದ್ಯೋಗವನ್ನು ಕೊಡಬೇಕು. ಮೂರನೆಯದಾಗಿ, 100 ದಿನಗಳ ಕೆಲಸದ ಖಾತ್ರಿಯನ್ನು ಕುಟುಂಬಗಳಿಗೆ ಸೀಮಿತಗೊಳಿಸದೆ, ಪ್ರತಿಯೊಬ್ಬ ವಯಸ್ಕ ರಿಗೆ ವಿಸ್ತರಿಸಬೇಕು; ಮತ್ತು ಉದ್ಯೋಗ ಕೊಡಲಾಗದಿದ್ದಾಗ, ಈ ಕಾಯ್ದೆ ವಿಧಿಸಿರುವಂತೆ, ನಿರುದ್ಯೋಗ ಭತ್ಯೆಯನ್ನು ಕೊಡಬೇಕು. ಮತ್ತು ಕೊನೆಯದಾಗಿ, ಮನರೇಗವನ್ನು ನಗರ ಪ್ರದೇಶಗಳಿಗೆ ವಿಸ್ತರಿಸಬೇಕು. ಇದರಲ್ಲಿ ಸಣ್ಣ ಉದ್ದಿಮೆಗಳಲ್ಲಿ, ವಿಶೇಷವಾಗಿ ಅಗತ್ಯ ಸರಕುಗಳು ಮತ್ತು ಸೇವೆಗಳನ್ನು ಪೂರೈಸುವ ಉದ್ದಿಮೆಗಳಲ್ಲಿ ಉದ್ಯೋಗಗಳು ಸೇರಿರಬಹುದು: ಈ ಮೂಲಕ ಒಂದು ಅವಧಿಯ ವರೆಗೆ ಸರಕಾರ ಈ ಸಣ್ಣ ಉದ್ದಿಮೆಗಳ ಸಂಬಳಗಳ ವೆಚ್ಚವನ್ನು ವಹಿಸಿಕೊಂಡಂತಾಗುತ್ತದೆ. ಇದು ಸಣ್ಣ ಉದ್ದಿಮೆಗಳಿಗೆ ಸಬ್ಸಿಡಿ ಕೊಡುವ ಒಂದು ದಾರಿಯೂ ಆಗಬಲ್ಲದು. ಮತ್ತು ಇದು ಶ್ರಮವನ್ನೂ ಪೂರೈಸಿ, ಹಾಗೂ ಅದಕ್ಕೆ ಹಣ ತೆರುವ ಅಗತ್ಯವಿಲ್ಲದಂತಾಗಿ ನಿಧಾನವಾಗಿ ಇವನ್ನು ಪುನರುಜ್ಜೀವನಗೊಳಿಸುವ ಒಂದು ದಾರಿಯೂ ಆಗಬಲ್ಲದು.

ಅತಿ ಸಣ್ಣ, ಸಣ್ಣ ಮತ್ತು ಮಧ್ಯಮಗಾತ್ರದ ಉದ್ದಿಮೆ(ಎಂಎಸ್‌ಎಂಇ)ಗಳು

12. ಎರಡನೇ ಮಧ್ಯಮಾವಧಿ ಕ್ರಮ ನಿರ್ದಿಷ್ಟವಾಗಿ ಎಂಎಸ್‌ಎಂಇ ಗಳಿಗೆ ಮತ್ತು ಕೃಷಿಗೆ ಸಂಬಂಧಪಟ್ಟದ್ದು. ಒಂದು ನಗರ ಪ್ರದೇಶ ಉದ್ಯೋಗ ಖಾತ್ರಿ ಯೋಜನೆಯ ಮೂಲಕ ಇವಕ್ಕೆ ಶ್ರಮಶಕ್ತಿಯನ್ನು ಪೂರೈಸಿದರೆ ಸಾಲದು. ಅವಕ್ಕೆ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿನ ಬೆಂಬಲವೂ ಬೇಕಾಗುತ್ತದೆ. ಬ್ಯಾಂಕುಗಳು ಅವುಗಳಿಗೆ ಸಮಯಕ್ಕೆ ಸರಿಯಾಗಿ ಸಾಲಗಳನ್ನು ಬಹಳೇನೂ ಜಾಮೀನು ಭದ್ರತೆ ಕೇಳದೆ ಕೊಡಬೇಕು. ಸರಕಾರ ಇದಕ್ಕೆ ಸಾಲ ಗ್ಯಾರಂಟಿ ಒದಗಿಸಬೇಕು. ಇದಲ್ಲದೆ, ರಿಝರ್ವ್ ಬ್ಯಾಂಕ್‌ನ ಸಾಲ ಮರುಪಾವತಿಯನ್ನು ಒಂದು ನಿರ್ದಿಷ್ಟ ಅವಧಿಯ ವರೆಗೆ ಕೇಳದಿರುವ ವ್ಯವಸ್ಥೆಯನ್ನು ಮೂರು ತಿಂಗಳಿಂದ ಒಂದು ವರ್ಷಕ್ಕೆ ಏರಿಸಿ ಇವುಗಳಿಗೂ ವಿಸ್ತರಿಸಬೇಕು. ಬೇಡಿಕೆ ಇದ್ದಕ್ಕಿದಂತೆ ನಿಂತು ಹೋದರೆ ಅಥವ ತೀವ್ರವಾಗಿ ಇಳಿದರೆ, ಸಾಮಾನ್ಯ ಸ್ಥಿತಿಗೆ ಮರಳುವ ವರೆಗೆ ಬದುಕುಳಿಯುವುದು ಇವುಗಳಲ್ಲಿ ಬಹಳಷ್ಟು ಉದ್ದಿಮೆಗಳಿಗೆ ಕಷ್ಟವಾಗುವುದರಿಂದಾಗಿ, ಗಡುವನ್ನು ವಿಸ್ತರಿಸುವ , ಮತ್ತು ಎಲ್ಲ ಬಡ್ಡಿದರಗಳನ್ನು ಒಳಗೊಳ್ಳುವಂತಹ ಸರಕಾರದ ನೆರವು ವ್ಯವಸ್ಥೆ ಅಗತ್ಯವಾಗುತ್ತದೆ. ಕೃಷಿಯ ವಿಷಯದಲ್ಲಿ, ರೈತರಿಗೆ ಸಾಲ ಮನ್ನಾ ಆಗಬೇಕು, ಮತ್ತು ಸರಕಾರ ವಹಿಸಿಕೊಳ್ಳುವ ಬಡ್ಡಿದರಗಳಲ್ಲಿ ಹೊಸ ಸಾಲಗಳನ್ನು ಒದಗಿಸಬೇಕು. ಇದರೊಂದಿಗೆ, ಹೈನು ಸಹಕಾರಿಗಳಿಗೆ ಪ್ರತಿ ಲೀಟರ್ ಹಾಲಿಗೆ 5 ರೂ. ಸಬ್ಸಿಡಿ ಹೈನು ರೈತರಿಗೆ ನೆರವಾಗಲು ಮತ್ತು ಹಾಲಿಗೆ ಬೇಡಿಕೆಯ ಪುನರುಜ್ಜೀವನಕ್ಕೆ ಅಗತ್ಯವಾಗಿದೆ.

ವಲಸೆ ಕಾರ್ಮಿಕರ ವಾಪಸಾತಿ

13. ಮೂರನೇ ಮಧ್ಯಮಾವಧಿ ಕ್ರಮವೆಂದರೆ ತಮ್ಮ ಹಳ್ಳಿಗಳಿಗೆ ಮರಳಿರುವ ವಲಸಿಗರಿಗೆ ತಮ್ಮ ಈ ಹಿಂದಿನ ಕೆಲಸದ ಸ್ಥಳಗಳಿಗೆ ಹಿಂದಿರುಗಿ ಬರಲು ಪ್ರೋತ್ಸಾಹ ನೀಡುವುದು. ಇದಕ್ಕೆ ಸಮಯ ತಗಲುತ್ತದೆ, ಮತ್ತು ಇದು ಸುಲಭವೇನಲ್ಲ. ಏಕೆಂದರೆ ಕಾಯಿಲೆಯ ನೆರಳು ಮತ್ತು ಮತ್ತೊಮ್ಮೆ ಲಾಕ್‌ಡೌನಿನ ಭೀತಿ ಪ್ರತಿಯೊಬ್ಬರನ್ನೂ ದೀರ್ಘ ಕಾಲದ ವರೆಗೆ ಕಾಡುತ್ತದೆ. ವಲಸೆ ಕಾರ್ಮಿಕರ ಭಯಗಳನ್ನು ನಿವಾರಿಸಬೇಕು, ಮತ್ತು ನಮ್ಮ ಈಗಿನ, ಹುಚ್ಚುಹುಚ್ಚಾದ ನಿರ್ಧಾರಗಳನ್ನು ಕೈಗೊಂಡು, ಅವನ್ನು ಪೋಲಿಸ್ ಲಾಠಿಗಳನ್ನು ಬಳಸಿ ಜಾರಿ ಮಾಡುವ ಸರಕಾರದ ಬದಲು, ಒಂದು ಮಾನವೀಯ ಸರಕಾರದ ಬಿಂಬವನ್ನು ಸ್ಥಾಪಿಸಬೇಕು. ವಿದೇಶಗಳಿಂದ ಹಿಂದಿರುಗ ಬಯಸುವ ವಲಸಿಗರ ವಾಪಸಾತಿಗೆ ಸೌಕರ್ಯಗಳನ್ನು ವ್ಯವಸ್ಥೆ ಮಾಡಬೇಕು.

ಆವಶ್ಯಕ ಸಾಮಗ್ರಿಗಳ ಪೂರೈಕೆ

14. ನಾಲ್ಕನೇ ಮಧ್ಯಮಾವಧಿ ಕ್ರಮ ಆವಶ್ಯಕ ಸಾಮಗ್ರಿಗಳು ಮತ್ತು ಸಾಮೂಹಿಕ ಬಳಕೆಯ ವಸ್ತುಗಳನ್ನು ತರ್ಕಬದ್ಧ ಬೆಲೆಗಳಲ್ಲಿ ಸ್ಥಿರವಾಗಿ, ಸಾಕಷ್ಟು ಪ್ರಮಾಣದಲ್ಲಿ ಮತ್ತು ಸತತವಾಗಿ ಲಭ್ಯಗೊಳಿಸುವುದಕ್ಕೆ ಸಂಬಂಧಪಟ್ಟಿದೆ. ಲಾಕ್‌ಡೌನ್ ಈಗಾಗಲೇ ಪೂರೈಕೆ ಕೊಂಡಿಗಳನ್ನು ಮುರಿದಿದೆ, ಮತ್ತು ಆವಶ್ಯಕ ಸೇವೆಗಳ ಮತ್ತು ಸಾಮಗ್ರಿಗಳ ಉತ್ಪಾದನೆಯನ್ನು ಹಲವು ರೀತಿಗಳಲ್ಲಿ ಅಸಮರ್ಥಗೊಳಿಸಿದೆ. ಇವಕ್ಕೆಲ್ಲ ಮತ್ತೆ ಜೀವ ತುಂಬಲು ನಿರ್ದಿಷ್ಟ ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರಗಳ ಸಂಯೋಜಿತ ಪ್ರಯತ್ನಗಳು ಅಗತ್ಯವಾಗಿವೆ. ಇದಕ್ಕೆ , ಇಂತಹ ಉತ್ಪಾದನೆಯಲ್ಲಿನ ಲಾಗುವಾಡುಗಳು–ಉತ್ಪನ್ನಗಳ ಸಂಬಂಧಗಳನ್ನು ಅವು ಗಮನದಲ್ಲಿಡಬೇಕಾಗುತ್ತದೆ. ಆದ್ದರಿಂದ ಇದಕ್ಕೆ ದೇಶಾದ್ಯಂತ ಒಂದು ತೆರನ ಯೋಜನಾ ವ್ಯವಸ್ಥೆಯನ್ನು ಮತ್ತೆ ಸ್ಥಾಪಿಸಬೇಕಾಗುತ್ತದೆ.

ಗ್ರಾಮ ಅರ್ಥವ್ಯವಸ್ಥೆಯ ಪುನರುಜ್ಜೀವನ

15. ಐದನೇ ಮಧ್ಯಮಾವಧಿ ಕ್ರಮವೆಂದರೆ, ಸ್ಥಳೀಯ ಉತ್ಪನ್ನಗಳನ್ನು ಸಂಸ್ಕರಿಸುವುದು ಮುಂತಾದ ಹಲವು ರಂಗಗಳಲ್ಲಿ ಪಂಚಾಯತುಗಳ ಒಡೆತನದ ಸಣ್ಣ ಗ್ರಾಮ ಮಟ್ಟದ ಉದ್ದಿಮೆಗಳನ್ನು ಆರಂಭಿಸುವುದು. ಎಲ್ಲ ಪ್ರಯತ್ನಗಳು, ಆಶ್ವಾಸನೆಗಳ ಹೊರತಾಗಿಯೂ ಹಲವು ವಾಪಾಸು ಬಂದ ವಲಸೆ ಕಾರ್ಮಿಕರು ಗ್ರಾಮೀಣ ಪ್ರದೇಶಗಳಲ್ಲೇ ಉಳಿಯುತ್ತಾರೆ. ಅವರಿಗೆ ಮನರೇಗವಲ್ಲದೆ, ಅದರ ಹೊರಗೂ ಉದ್ಯೋಗಾವಕಾಶಗಳನ್ನು ಹುಡುಕಬೇಕಾಗುತ್ತದೆ. ಕೃಷಿವ್ಯಾಪಾರಗಳಿಗೆ ಉತ್ತೇಜನೆ ಕೊಡಲು ಕೋಲ್ಡ್ ಸ್ಟೋರೇಜ್‌ಗಳಲ್ಲಿ ಕಾದಿಡುವ ಮತ್ತು ಮಾರಾಟದ ಮೂಲರಚನೆಗಳನ್ನು ಒದಗಿಸಬೇಕು. ಇದು ಗ್ರಾಮ ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಮತ್ತು ಉದ್ಯೋಗ ಸೃಷ್ಟಿಸುವ ದಿಕ್ಕಿನಲ್ಲಿ ಒಂದು ಪರ್ಯಾಯ ಮಾರ್ಗವಾಗುತ್ತದೆ. ಈ ಉದ್ದೇಶಕ್ಕೆ ಪರಿಣಿತ ತಾಂತ್ರಿಕ ಮತ್ತು ನಿರ್ವಹಣಾ ಸಲಹೆಗಳ ಜೊತೆಗೆ ಬ್ಯಾಂಕ್ ಸಾಲವನ್ನು ಲಭ್ಯಗೊಳಿಸಬೇಕು. ಇವಕ್ಕೆ ಏರ್ಪಾಟುಗಳನ್ನು ರಾಜ್ಯ ಸರಕಾರಗಳು ಮಾಡಬಹುದು.

ದೀರ್ಘಾವಧಿ ಕ್ರಮಗಳು

ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಬೇಕು

16. ನಾವೀಗ ದೀರ್ಘಾವಧಿ ಕ್ರಮಗಳಿಗೆ ಬರುತ್ತೇವೆ. ಇವನ್ನೂ ಈಗಲೇ ಆರಂಭಿಸಬೇಕು. ಅರ್ಥವ್ಯವಸ್ಥೆಯ ಬೆಳವಣಿಗೆ ಕಾರ್ಯವ್ಯೂಹವನ್ನು ಪುನರ‍್ರೂಪಿಸುವ ಅಗತ್ಯವಿದೆ. ಇದನ್ನು ಆಂತರಿಕ ಮಾರುಕಟ್ಟೆಯ ಆಧಾರದಲ್ಲಿ ಮತ್ತು ಅದರಿಂದಾಗಿ ಅಂತಿಮವಾಗಿ ಈ ಮಾರುಕಟ್ಟೆಯ ಬೆಳವಣಿಗೆಯನ್ನು ನಿರ್ಧರಿಸುವ ಕೃಷಿ ಬೆಳವಣಿಗೆಯ ಆಧಾರದಲ್ಲಿ ಮಾಡಬೇಕು. ಕೃಷಿಯನ್ನು ಇತ್ತೀಚಿನ ಅವಧಿಯಾದ್ಯಂತ ನಿರ್ಲಕ್ಷಿಸಲಾಗಿದೆ. ಆದರೂ, ಲಾಕ್‌ಡೌನ್ ಪ್ರದರ್ಶಿಸಿರುವಂತೆ ಕೋಟ್ಯಂತರ ಜನಗಳಿಗೆ ಈಗಲೂ ಕೃಷಿಯೇ ಕೊನೆಯ ಆಶ್ರಯವಾಗಿದೆ. ಕೃಷಿಯ ಈ ನಿರ್ಲಕ್ಷ್ಯವನ್ನು ಬದಲಿಸಲೇ ಬೇಕಾಗಿದೆ. ಫಲದಾಯಕ ಖರೀದಿ ಬೆಲೆಗಳು, ಈ ಹಿಂದೆ ಇದ್ದಂತೆ ಖರೀದಿ ಕ್ರಿಯೆಗಳನ್ನು ನಗದು ಬೆಳೆಗಳಿಗೂ ವಿಸ್ತರಿಸುವುದು, ಆಂತರಿಕ ಬೆಲೆಗಳನ್ನು ಅಂತರ್ರಾಷ್ಟ್ರೀಯ ಬೆಲೆಗಳ ಏರುಪೇರುಗಳ ಪ್ರಭಾವದಿಂದ ರಕ್ಷಿಸಲು ದರಪಟ್ಟಿಗಳ ಬಳಕೆ, ಹೊಸ ಇಳುವರಿ ಹೆಚ್ಚಿಸುವ ಕೆಲಸ ಕಾರ್ಯಗಳ ಬಗ್ಗೆ ಸಂಶೋಧನೆ, ಕಡಿಮೆ ನೀರಿನ ಬಳಕೆಯ ತಳಿಗಳ ಅಭಿವೃದ್ಧಿ, ಬಳಕೆಯಾಗದ ಭೂಮಿ ಇರುವ ಪ್ಲಾಂಟೇಶನ್‌ಗಳಿಂದ ಆರಂಭಿಸಿ ಭೂಹೀನರಿಗೆ ಭೂಮಿತಿ ಮೀರಿದ ಹೆಚ್ಚುವರಿ ಭೂಮಿಯ ವಿತರಣೆ ಮುಂತಾದ ಹಲವಾರು ಹೆಜ್ಜೆಗಳ ಮೂಲಕ ಬದಲಿಸಬೇಕು. ರೈತರು ಮತ್ತು ಕೃಷಿಕೂಲಿಕಾರರ ತಲಾ ಕೃಷಿ ಆದಾಯಗಳನ್ನು ಹೆಚ್ಚಿಸುವುದು ಭಾರತದ ದುಡಿಯುವ ಜನಸಮೂಹಗಳ ಮೇಲೆ ಬಡತನದ ಬಿಗಿಮುಷ್ಠಿಯನ್ನು ಮುರಿಯುವುದಕ್ಕೆ ಕೀಲಿಕೈ ಆಗಿದೆ.

ಇದರ ಜತೆಗೆ, ಕೃಷಿಯೇತರ ಚಟುವಟಿಕೆಗಳನ್ನು ಅವುಗಳ ಪರಿಸರ ಸುಸ್ಥಿರತೆ ಮತ್ತು ಉದ್ಯೋಗಾವಕಾಶ ನಿರ್ಮಾಣದ ಸಾಮರ್ಥ್ಯವನ್ನು ಗಮನದಲ್ಲಿಟ್ಟುಕೊಂಡು ಪ್ರೋತ್ಸಾಹಿಸಬೇಕು. ಇದರ ಅರ್ಥ "ಹಸಿರು" ಉತ್ಪಾದನೆಗೆ ಮತ್ತು ಪಾಲನೆಯ ಸೇವೆಗಳನ್ನು ವಿಸ್ತರಿಸುವುದರ ಮೇಲೆ ಹೆಚ್ಚಿನ ಒತ್ತು ನೀಡುವುದು.

ಮಹಾಮಾರಿಯ ವಿರುದ್ಧ ಈ ಹೋರಾಟ ದೇಶದಲ್ಲಿನ ಆರೋಗ್ಯಪಾಲನೆ ವ್ಯವಸ್ಥೆಯಲ್ಲಿನ ತೀವ್ರ ಮಿತಿಗಳನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದೆ. ಕೇಂದ್ರ ಸರಕಾರ ನಮ್ಮ ಜಿಡಿಪಿಯ ಕನಿಷ್ಟ 3ಶೇ.ವನ್ನು ವೆಚ್ಚ ಮಾಡಿ ಒಂದು ಸಾರ್ವತ್ರಿಕ ಆರೋಗ್ಯಪಾಲನೆ ವ್ಯವಸ್ಥೆಯನ್ನು ಸ್ಥಾಪಿಸಲು ತುರ್ತು ಪ್ರಯತ್ನಗಳನ್ನು ಮಾಡಬೇಕು. ಈ ಮೊತ್ತಗಳಿಗೆ ರಾಜ್ಯ ಸರಕಾರಗಳೂ ಈ ವ್ಯವಸ್ಥೆಯನ್ನು ನಿರ್ಮಿಸಲು ಸೇರಿಸಬೇಕು. ಔಷಧಿಗಳ ಮೇಲೆ ಸಿಜಿಎಸ್‌ಟಿ ದರವನ್ನು ಇಳಿಸಬೇಕು. ಮತ್ತು ಔಷಧಿಗಳ ಆಂತರಿಕ ಉತ್ಪಾದನೆಯಲ್ಲಿ ಸ್ವಾವಲಂಬನೆಗೆ ಸಾರ್ವಜನಿಕ ಮೂಲರಚನೆಯನ್ನು ಬಲಪಡಿಸಬೇಕು. ಇದೇ ಸಮಯದಲ್ಲಿ ಶಿಕ್ಷಣಕ್ಕೆ, ಅದರಲ್ಲೂ ಶಾಲಾಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಸಾಕಷ್ಟು ಪ್ರಮಾಣದಲ್ಲಿ ಹೂಡಿಕೆ ಮಾಡಬೇಕು. ಇದನ್ನು ಕೇಂದ್ರ ಸರಕಾರ ಕನಿಷ್ಟ ಜಿಡಿಪಿಯ 6 ಶೇ.ಕ್ಕೆ ಏರಿಸಬೇಕು.

ಭೌತಿಕ ಅಂತರ–ಸಾಮಾಜಿಕ ಸೌಹಾರ್ದತೆ

ಧ್ರುವೀಕರಣ ಮತ್ತು ಸರ್ವಾಧಿಕಾರಶಾಹಿ ದಾಳಿಗಳನ್ನು ತೊರೆಯಬೇಕು

17. ಮಹಾಮಾರಿ ಎಲ್ಲರೂ ಒಂದುಗೂಡಬೇಕಾದ ಒಂದು ಸಮಯ. ಒಂದು ಹೊಸ ರಾಷ್ಟ್ರೀಯ ಐಕ್ಯತೆಯನ್ನು ಬೆಸೆಯುವುದು ಮಹಾಮಾರಿಗೆ ನಿಜವಾದ ಅಂತಿಮ ಸಿದ್ಧೌಷಧ. ಮಹಾಮಾರಿಯನ್ನು ಸರಕಾರದ ಸೂಚ್ಯ ಬೆಂಬಲದಿಂದ ಕೋಮುವಾದೀಕರಿಸುವುದು, ಈ ಸಮಯವನ್ನೇ ನಾಗರಿಕ ಹಕ್ಕುಗಳಿಗೆ ಮತ್ತು ಸಿಎಎ ಮುಂತಾದ ಕ್ರಮಗಳ ವಿರುದ್ಧ ಹೋರಾಡುತ್ತಿರುವವರನ್ನು ಯುಎಪಿಎಯಂತಹ ಕರಾಳ ಕಾಯ್ದೆಗಳ ಅಡಿಯಲ್ಲಿ ಜೈಲಿಗಟ್ಟುವುದು, ಸರಕಾರದ ವಿಮರ್ಶೆ ಮಾಡುವ ಪತ್ರಕರ್ತರ ಮೇಲೆ ಗುರಿಯಿಟ್ಟು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿಯಿಡುವುದು ಇವೆಲ್ಲವೂ ಒಂದು ಸರ್ವಾಧಿಕಾರಶಾಹಿ ಅಜೆಂಡಾದ ಭಾಗ. ಇವು ಈಗ ಅಥವ ಬೇರೆ ಯವುದೇ ಸಮಯದಲ್ಲೂ ಬೇಕಾಗಿರುವುದಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿರುವಂತವುಗಳು. ಇದನ್ನು ಬದಲಿಸದಿದ್ದರೆ, ನಮ್ಮ ದೇಶ ಮತ್ತು ಜನತೆ ಮಹಾಮಾರಿಯ ವಿರುದ್ಧ ಹೋರಾಟ ನಡೆಸಲು ಸಾಧ್ಯವಿಲ್ಲ..

ಶತಮಾನೋತ್ಸವ ಲೇಖನ ಮಾಲೆ-25

ಉಕ್ಕೇರಿದ ಕಾರ್ಮಿಕ ವರ್ಗದ ಹೋರಾಟಗಳ ಅಲೆ-1946

ಎರಡನೇ ಮಹಾಯುದ್ಧದ ದುಷ್ಪರಿಣಾಮಗಳ ಹೊರೆಯನ್ನು ದುಡಿಯುವ ಜನರ ಮೇಲೇ ಹೇರಲಾಯಿತು. ಈ ದಾಳಿಗಳಿಗೆ ಪ್ರತಿರೋಧವಾಗಿ ಕಾರ್ಮಿಕ ವರ್ಗವು ದೇಶಾದ್ಯಂತ ದೊಡ್ಡ ಹೋರಾಟದ ಅಲೆಯನ್ನೇ ಎಬ್ಬಿಸಿತು. 1946ರಲ್ಲಿ ಕಾರ್ಮಿಕ ವರ್ಗವು ಎಂತಹ ಪ್ರತಿರೋಧ ಒಡ್ಡಿತು ಎಂಬುದನ್ನು ಅಸಾಧಾರಣ ರೀತಿಯಲ್ಲಿ ಎದ್ದುಬಂದ ಮುಷ್ಕರಗಳ ಸಂಖ್ಯೆಯೇ ಸಾರುತ್ತದೆ. ಮುಷ್ಕರನಿರತ ಕಾರ್ಮಿಕರ ಉಗ್ರ ಹೋರಾಟದ ಕಿಚ್ಚು ಎಷ್ಟಿತ್ತೆಂದರೆ ಪ್ರತಿಯೊಂದು ರಾಷ್ಟ್ರೀಯ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ವಿಷಯಗಳಲ್ಲಿ ಅದು ವ್ಯಕ್ತವಾಗಿತ್ತು. ಎಐಟಿಯುಸಿಯಲ್ಲಿದ್ದ ಕಮ್ಯುನಿಸ್ಟರು ಕಾರ್ಮಿಕರಲ್ಲಿ ಬೆಳೆಯುತ್ತಿದ್ದ ಅಸಮಾಧಾನ ಮತ್ತು ಅತೃಪ್ತಿಗಳಿಗೆ ಒಂದು ಸಂಘಟಿತ ರೂಪ ಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಾರ್ಮಿಕ ವರ್ಗದಲ್ಲಿ ಬೆಳೆಯುತ್ತಿದ್ದ ರಾಜಕೀಯ ತಿಳುವಳಿಕೆಯು ಕಾಂಗ್ರೆಸ್ಸಿನ ಬೂರ್ಜ್ವಾ ನಾಯಕತ್ವದಲ್ಲಿ ಭೀತಿ ಹುಟ್ಟಿಸಿತು ಮತ್ತು ಅವರು ತಮ್ಮ ವರ್ಗ ಹಿತಾಸಕ್ತಿಯನ್ನು ರಕ್ಷಿಸುವ ಸಲುವಾಗಿ ಕಾರ್ಮಿಕ ವರ್ಗದ ಚಳುವಳಿಯನ್ನು ವಿಭಜಿಸುವ ದಾರಿ ತುಳಿದರು. ಆದರೂ ಈ ನಡುವೆ ಕಾರ್ಮಿಕ ವರ್ಗದ ಮಧ್ಯೆ ಅವರ ಆಯ್ಕೆಯ ಪಕ್ಷವಾಗಿ ಕಮ್ಯುನಿಸ್ಟ್ ಪಕ್ಷವು ಹೊರಹೊಮ್ಮಿತು.

ಕನ್ನಡಕ್ಕೆ: ಟಿ. ಸುರೇಂದ್ರ ರಾವ್

ಎರಡನೇ ವಿಶ್ವ ಮಹಾಯುದ್ಧದ ಅವಧಿಯಲ್ಲಿ, ಭಾರತದಲ್ಲಿನ ಕೈಗಾರಿಕಾ ಕಾರ್ಮಿಕರ ಸಂಖ್ಯೆಯು 50% ಗೂ ಮೀರಿ ಹೆಚ್ಚಾಯಿತು. ಯುದ್ಧ ಕೊನೆಗೊಂಡ ನಂತರ(1945), ತಮ್ಮ ಸ್ಥಿತಿಯು ಉತ್ತಮಗೊಳ್ಳುವುದೆಂದು ಕಾರ್ಮಿಕರು ನಿರೀಕ್ಷಿಸಿದ್ದರು. ಅದರ ಬದಲು, ಅವರ ಸಮಸ್ಯೆಗಳು ಹೆಚ್ಚಾದವು. ಈ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಭಾರಿ ಹೋರಾಟಗಳನ್ನು ಸಂಘಟಿಸುವುದರಲ್ಲಿ ಹಲವಾರು ಕಾರ್ಮಿಕ ಸಂಘಗಳನ್ನು ಮುನ್ನಡೆಸುತ್ತಿದ್ದ ಮತ್ತು ಅಖಿಲ ಭಾರತ ಕಾರ್ಮಿಕ ಸಂಘಗಳ ಮಂಡಲಿ(ಎಐಟಿಯುಸಿ) ಯಲ್ಲಿದ್ದ ಕಮ್ಯುನಿಸ್ಟರು ಮುಂಚೂಣಿಯಲ್ಲಿದ್ದರು.

ಯುದ್ಧದ ಸಮಯದಲ್ಲಿ ನೇಮಕಗೊಂಡಿದ್ದ ಕಾರ್ಮಿಕರನ್ನು ದೊಡ್ಡ ಸಂಖ್ಯೆಯಲ್ಲಿ ಕೆಲಸದಿಂದ ವಜಾ ಮಾಡಿದ್ದು ಮತ್ತು ಸಂಬಳ ಕಡಿತ ಮಾಡಿದ್ದು ಯುದ್ಧಾನಂತರದಲ್ಲಿ ಕಾರ್ಮಿಕ ವರ್ಗ ಎದುರಿಸಿದ ಬಹಳ ಪ್ರಮುಖವಾದ ಸಮಸ್ಯೆಗಳಾಗಿದ್ದವು. ಲಂಡನ್ನಿನ ದಿ ಟೈಮ್ಸ್ ಪತ್ರಿಕೆಯು ಪ್ರಕಟಿಸಿದ ಒಂದು ಅಂದಾಜಿನ ಪ್ರಕಾರ, ಕೈಗಾರಿಕಾ ಕಾರ್ಮಿಕರಿಂದ ಹಿಡಿದು ಸರ್ಕಾರಿ ನೌಕರರು ಹಾಗೂ ಸೇನೆ ಮುಂತಾದ ವಿವಿಧ ಕೆಲಸಗಳಲ್ಲಿ, ವೃತ್ತಿಗಳಲ್ಲಿ, ಉದ್ಯೋಗಗಳಲ್ಲಿ ತೊಡಗಿದ್ದ ಐವತ್ತು ಲಕ್ಷದಿಂದ ಎಪ್ಪತ್ತು ಲಕ್ಷ ಕೆಲಸಗಾರರನ್ನು ಯುದ್ಧಾನಂತರ ಕೆಲಸದಿಂದ ಕಿತ್ತುಹಾಕಿದರು. ಅದಕ್ಕೂ ಮಿಗಿಲಾಗಿ, 1946ರ ಜನವರಿ ಮತ್ತು ಸೆಪ್ಟೆಂಬರ್ ಅವಧಿಯಲ್ಲಿ ಜೀವನ ವೆಚ್ಚ ಸೂಚ್ಯಾಂಕವು(ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್) 15% ಹೆಚ್ಚಾಯಿತು. ಆ ಯುದ್ಧದ ಸಮಯದಲ್ಲಿ ಕಾರ್ಮಿಕ ವರ್ಗ ಗಳಿಸಿದ್ದ ಬೋನಸ್ ಈ ಬೆಲೆ ಏರಿಕೆಯನ್ನು ಸರಿದೂಗಿಸಲು ಏನೇನೂ ಸಾಕಾಗುತ್ತಿರಲಿಲ್ಲ. ಅದೂ ಸಾಲದೆಂಬಂತೆ, ದೇಶದಲ್ಲಿ ಆಹಾರ ಧಾನ್ಯಗಳ ಕೊರತೆಯಿತ್ತು ಮತ್ತು ಅದರ ಹೊರೆಯನ್ನೂ ಪಡಿತರ ಪೂರೈಕೆಯಲ್ಲಿನ ಭಾರಿ ಕಡಿತದ ಮೂಲಕ ದುಡಿಯುವ ಜನರ ಮೇಲೇ ಹೇರಲಾಗಿತ್ತು. ಈ ದಾಳಿಗಳಿಗೆ ಪ್ರತಿರೋಧವಾಗಿ ಕಾರ್ಮಿಕ ವರ್ಗವು ದೇಶಾದ್ಯಂತ ದೊಡ್ಡ ಹೋರಾಟದ ಅಲೆಯನ್ನೇ ಎಬ್ಬಿಸಿತು. 1946ರಲ್ಲಿ ಕಾರ್ಮಿಕ ವರ್ಗವು ಎಂತಹ ಪ್ರತಿರೋಧ ಒಡ್ಡಿತು ಎಂಬುದನ್ನು ಅಸಾಧಾರಣ ರೀತಿಯಲ್ಲಿ ಎದ್ದುಬಂದ ಮುಷ್ಕರಗಳ ಸಂಖ್ಯೆಯೇ ಸಾರುತ್ತದೆ. ಆ ಒಂದೇ ವರ್ಷದಲ್ಲಿ, 19,61,948 ಕಾರ್ಮಿಕರನ್ನು ಒಳಗೊಂಡ 1,629 ಮುಷ್ಕರಗಳು ನಡೆದವು. ಇದು ಆ ಹಿಂದಿನ ವರ್ಷ, ಅಂದರೆ 1945ರಲ್ಲಿ ನಡೆದ ಮುಷ್ಕರಗಳ ಸಂಖ್ಯೆಗಿಂತ ಎರಡು ಪಟ್ಟು ಮತ್ತು ಪಾಲ್ಗೊಂಡಿದ್ದ ಕಾರ್ಮಿಕರ ಸಂಖ್ಯೆಯಲ್ಲಿ ಎರಡೂವರೆ ಪಟ್ಟು ಹೆಚ್ಚಿದ್ದವು.

ಮುಷ್ಕರನಿರತ ಕಾರ್ಮಿಕರ ಉಗ್ರ ಹೋರಾಟದ ಕಿಚ್ಚು ಎಷ್ಟಿತ್ತೆಂದರೆ ಪ್ರತಿಯೊಂದು ರಾಷ್ಟ್ರೀಯ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ವಿಷಯಗಳಲ್ಲಿ ಅದು ವ್ಯಕ್ತವಾಗಿತ್ತು. ರೈಲ್ವೇಯಲ್ಲಿ ಮುಷ್ಕರ ಬೇಕೆ ಬೇಡವೇ ಎಂಬ ನಿರ್ಧಾರವನ್ನು ಮತಕ್ಕೆ ಹಾಕಿದಾಗ, 100% ಕಾರ್ಮಿಕರು ಮುಷ್ಕರದ ಪರವಾಗಿ ಮತ ನೀಡಿದರು. ಬ್ಯಾಂಕ್ ನೌಕರರು, ಜವಾನರು, ಪ್ರಾಥಮಿಕ ಶಿಕ್ಷಕರು, ಸರ್ಕಾರಿ ಸೇವಕರು, ಹೀಗೆ ಎಲ್ಲಾ ವಿಭಾಗದ ನೌಕರರು ಮುಷ್ಕರಗಳಲ್ಲಿ ಭಾಗವಹಿಸಿದರು. ಸರ್ಕಾರಿ ಸೇವೆಯಲ್ಲಿ ಇರುವವರೂ ಒಳಗೊಂಡಂತೆ ದೊಡ್ಡ ಸಂಖ್ಯೆಯಲ್ಲಿ ಮಧ್ಯಮ ವರ್ಗದ ನೌಕರರು ಮುಷ್ಕರದ ಚಳುವಳಿಗೆ ಪ್ರವೇಶ ಮಾಡಿದ್ದು ಯುದ್ಧಾನಂತರದ ವರ್ಷಗಳಲ್ಲಿ ನಡೆಸಿದ ಹಲವಾರು ಮುಷ್ಕರಗಳ ಒಂದು ಗಮನಾರ್ಹ ವೈಶಿಷ್ಟ್ಯವಾಗಿತ್ತು. ಸಂಘಟಿತ ಕಾರ್ಮಿಕ ವರ್ಗದ ಹೋರಾಟಗಳೊಂದಿಗೆ ಸರ್ಕಾರಿ ನೌಕರರ ಹೋರಾಟಗಳನ್ನು ಹಾಗೂ ಮುಷ್ಕರವನ್ನು ಸಂಯೋಜಿಸಲು ಸಾಧ್ಯ ಎಂದು ಕಾರ್ಮಿಕ ಸಂಘಗಳಾಗಲೀ ಅಥವಾ ಸರ್ಕಾರಿ ನೌಕರರಾಗಲೀ ಎಂದೂ ಎಣಿಸಿರಲಿಲ್ಲ.



ಮುಂಬೈಯ ಕಾಮಗಾರ್ ಮೈದಾನದಲ್ಲಿ ಕಾರ್ಮಿಕರ ರ್‍ಯಾಲಿ, 1946

ಎಐಟಿಯುಸಿಯಲ್ಲಿದ್ದ ಕಮ್ಯುನಿಸ್ಟರು ಕಾರ್ಮಿಕರಲ್ಲಿ ಬೆಳೆಯುತ್ತಿದ್ದ ಅಸಮಾಧಾನ ಮತ್ತು ಅತೃಪ್ತಿಗಳಿಗೆ ಒಂದು ಸಂಘಟಿತ ರೂಪ ಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕೆಲಸದಿಂದ ವಜಾ, ಮೂಲ ಸಂಬಳದಲ್ಲಿ ತುಟ್ಟಿಭತ್ಯೆ ವಿಲೀನ, ಕನಿಷ್ಠ ಕೂಲಿ, ದಿನಕ್ಕೆ ಎಂಟು ಗಂಟೆ ಕೆಲಸ, ಆರೋಗ್ಯ ವಿಮೆ, ಹಿರಿಯರಿಗೆ ನಿವೃತ್ತಿವೇತನ, ನಿರುದ್ಯೋಗ ಭತ್ಯೆ ಮತ್ತು ಹಲವಾರು ಸಾಮಾಜಿಕ ಸುಭದ್ರತಾ ಯೋಜನೆಗಳು ಮುಂತಾದ ಪ್ರಶ್ನೆಗಳನ್ನು ಎತ್ತಿದರು.

ಬಂಗಾಳ, ಬಿಹಾರ, ಒರಿಸ್ಸಾ, ಪಂಜಾಬ್, ಬೊಂಬಾಯಿ, ಮದ್ರಾಸ್ ಮುಂತಾದ ಬೇರೆ ಬೇರೆ ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕರು ಸತತ ಮುಷ್ಕರಗಳನ್ನು ಮಾಡಿದರು. ಪಾಟ್ನಾ, ಬೇಗುಸರಾಯ್ ಮುಂತಾದ ಕೆಲವು ಊರುಗಳಲ್ಲಿ ಪೋಲಿಸರೂ ಕೂಡ ತಮ್ಮ ಆರ್ಥಿಕ ಬೇಡಿಕೆಗಳಿಗಾಗಿ ಮುಷ್ಕರ ಮಾಡಿದರು.

ಕಾರ್ಮಿಕ ವರ್ಗದ ಈ ಸಮರಶೀಲ ಹೋರಾಟಗಳನ್ನು ಬಗ್ಗುಬಡಿಯಲು, ಸರ್ಕಾರವು ಪೋಲಿಸ್ ಗೋಲಿಬಾರ್ ಮತ್ತಿತರ ತೀವ್ರತರದ ದಮನಕಾರಿ ಕ್ರಮಗಳಿಗೆ ಮುಂದಾಯಿತು. ಹಲವಾರು ಕಾರ್ಮಿಕರು ಜೀವ ಕಳೆದುಕೊಂಡರು, ನೂರಾರು ಜನ ಗಾಯಗೊಂಡರು ಮತ್ತು ಬಂಧನಕ್ಕೊಳಗಾದರು. ಕಾರ್ಮಿಕ ವರ್ಗದ ಈ ಧೀರೋದಾತ್ತ ಹೋರಾಟಗಳು ಜನಸಮುದಾಯದಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಆಕ್ರೋಶವನ್ನು ಹೆಚ್ಚಿಸುವಲ್ಲಿ ಸ್ಫೂರ್ತಿ ನೀಡಿದವು.

ಅಂಚೆ ಮತ್ತು ತಂತಿ ಇಲಾಖೆಯ ಕಾರ್ಮಿಕರು ಮತ್ತು ನೌಕರರ ಮುಷ್ಕರವು ಆ ಅವಧಿಯಲ್ಲಿ ಇಡೀ ದೇಶವನ್ನೇ ನಡುಗಿಸಿದ ಮತ್ತು ವ್ಯಾಪಕ ಸಹಾನುಭೂತಿಯನ್ನು ಗಳಿಸಿದ ಅತ್ಯಂತ ಮಹತ್ವದ ಹೋರಾಟವಾಗಿತ್ತು. ಜನರ ಜೀವನೋಪಾಯಗಳ ಮೇಲೆ ನಡೆದ ಬಹುಮುಖೀ ದಾಳಿಯ ವಿರುದ್ಧ ಕಾರ್ಮಿಕ ವರ್ಗವು ನಡೆಸಿದ ದಿಟ್ಟತನದ ಪ್ರತಿರೋಧದ ಭಾಗವಾಗಿ ಅಂಚೆ ಮತ್ತು ತಂತಿ ಕಾರ್ಮಿಕರು ಹೋರಾಟ ನಡೆಸಿದ್ದರು. ಏನೇನೂ ಸಾಕಾಗದ ಸಂಬಳ ಶ್ರೇಣಿ ಮತ್ತು ತೀರ ಕಳಪೆ ದರ್ಜೆಯ ಸೇವಾ ನಿಯಮಗಳು ಅಂಚೆ ನೌಕರರನ್ನು ಬಲವಂತವಾಗಿ ಮುಷ್ಕರಕ್ಕೆ ಇಳಿಸಿದವು. ಸಂಬಳ ಹೆಚ್ಚಳದ ಹಕ್ಕೊತ್ತಾಯವನ್ನೂ ಒಳಗೊಂಡಂತೆ 16 ಹಕ್ಕೊತ್ತಾಯಗಳ ಪಟ್ಟಿಯೊಂದನ್ನು ಅವರು ಸರ್ಕಾರಕ್ಕೆ ಸಲ್ಲಿಸಿದ್ದರು. ಅವರ ಬೇಡಿಕೆಗಳನ್ನು ತಿರಸ್ಕರಿಸಿದ ಸರ್ಕಾರವು ಮುಷ್ಕರವನ್ನು ಕಾನೂನುಬಾಹಿರ ಎಂದು ಘೋಷಿಸಿತು. ಧೈರ್ಯಗುಂದದ ಅಂಚೆ ಸಂಘದ ಕೆಳ ದರ್ಜೆಯ ಸಿಬ್ಬಂದಿಗಳು ಮುಷ್ಕರ ಮುಂದುವರಿಸಿದರು. ಅದೇ ಸಮಯದಲ್ಲಿ, ಅಖಿಲ ಭಾರತ ತಂತಿ ಸಂಘವೂ ಮುಷ್ಕರಕ್ಕೆ ಕರೆ ನೀಡಿತು. ರೈಲು ಟಪ್ಪಾಲು ರವಾನೆ ಸೇವೆ(ರೈಲ್ವೇ ಮೈಲ್ ಸರ್ವಿಸ್) ಕೆಲಸಗಾರರೂ ಮುಷ್ಕರ ಸೇರಿಕೊಂಡರು. ಅಂಚೆ ಇಲಾಖೆಯ ಕೆಳ ದರ್ಜೆಯ ಸಿಬ್ಬಂದಿಗಳ ಮುಷ್ಕರದ ಕರೆಯು ಬಹಳ ಬೇಗ ಇಡೀ ಅಂಚೆ ಮತ್ತು ತಂತಿ ಇಲಾಖೆಗೆ ವ್ಯಾಪಿಸಿತು ಮತ್ತು ಇಡೀ ದೇಶಕ್ಕೆ ಹಬ್ಬಿತು.

ಪ್ರಮುಖವಾಗಿ ಬಂಗಾಳ, ಅಸ್ಸಾಂ, ಬೊಂಬಾಯಿ, ಮದ್ರಾಸ್, ದೆಹಲಿ, ರಾಜಪುತಾನಾ, ಮಧ್ಯ ಪ್ರಾಂತಗಳು, ಬೆರಾರ್, ಸಿಂಧ್ ಮತ್ತು ಬಲೂಚಿಸ್ತಾನಗಳಲ್ಲಿ ಮುಷ್ಕರವು ಯಶಸ್ವಿಯಾಯಿತು. ಬ್ರಿಟಿಷ್ ಆಡಳಿತದ ನಿರ್ದಯ ಕಾರ್ಮಿಕ ವಿರೋಧಿ ಧೋರಣೆಯ ವಿರುದ್ಧ ನಡೆಯುತ್ತಿರುವ ಅತಿದೊಡ್ಡ ಪ್ರತಿಭಟನೆಗಳ ಭಾಗವಾಗಿ ತಮ್ಮ ಪ್ರತಿಭಟನೆಯೂ ಇದೆ ಎಂದು ಮುಷ್ಕರನಿರತ ಕಾರ್ಮಿಕರು ಭಾವಿಸಿದರು. ಕಾರ್ಮಿಕ ವರ್ಗ ಹಾಗೂ ಹೋರಾಟದಲಲಿದ್ದ ಜನವಿಭಾಗಗಳು ಈ ಹೋರಾಟವನ್ನು ಜನರ ಸಾಮ್ರಾಜ್ಯಶಾಹಿ-ವಿರೋಧಿ ವಿಪ್ಲವ ಎಂದು ಬಗೆದರು ಮತ್ತು ಅವರ ಕ್ರಿಯಾಶೀಲ ಬೆಂಬಲವು ಈ ಆರ್ಥಿಕ ಮುಷ್ಕರವನ್ನು ಸಾಮ್ರಾಜ್ಯಶಾಹಿ-ವಿರೋಧಿ ರಾಷ್ಟ್ರೀಯ ಹೋರಾಟದ ಮಟ್ಟಕ್ಕೆ ಎತ್ತರಿಸಿತು.


ಅಂಚೆ ಇಲಾಖೆಯಲ್ಲಿನ ಮುಷ್ಕರದಲ್ಲಿ ಮಾತ್ರವಲ್ಲ ಈ ಮುಷ್ಕರನಿರತ ಕಾರ್ಮಿಕರ ಪರವಾಗಿ ಸೌಹಾರ್ದವನ್ನು ಸಂಘಟಿಸುವಲ್ಲಿ ಕೂಡ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಮುಖಂಡರು ಕ್ರಿಯಾಶೀಲ ಪಾತ್ರ ವಹಿಸಿದ್ದರು. ಎಲ್ಲೆಲ್ಲಿ ಕಮ್ಯುನಿಸ್ಟರು ನಾಯಕತ್ವ ಸ್ಥಾನದಲ್ಲಿದ್ದರೋ ಆ ಎಲ್ಲಾ ವಿದ್ಯಾರ್ಥಿ ಸಂಘಟನೆಗಳು ಮತ್ತು ಇತರ ಸಾಮೂಹಿಕ ಸಂಘಟನೆಗಳು ಸೌಹಾರ್ದ ಮುಷ್ಕರದಲ್ಲಿ ಸೇರಿಕೊಂಡವು. ಭಾರತದ ಎಲ್ಲಾ ಜನವಿಭಾಗಗಳು ಮುಷ್ಕರಕ್ಕೆ ಬೆಂಬಲ ನೀಡುತ್ತಿದ್ದಾಗ್ಯೂ, ಕಾಂಗ್ರೆಸ್ ಈ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಲಿಲ್ಲ. ಅದು ಸಾಲದೆಂಬಂತೆ, ಅದು ಸಾರ್ವಜನಿಕರಿಗೆ ಅನಾನುಕೂಲ ಉಂಟುಮಾಡುತ್ತಿದೆ ಮತ್ತು 'ರಾಷ್ಟ್ರೀಯ ಹಿತಾಸಕ್ತಿಯ' ದೃಷ್ಟಿಯಿಂದ ಮುಷ್ಕರ ಹಿಂತೆಗೆದುಕೊಳ್ಳುವಂತೆ ನೆಹರೂರವರು ಕಾರ್ಮಿಕರಿಗೆ ಮನವಿ ಮಾಡಿದರು.

ಕಾಂಗ್ರೆಸ್ ನಾಯಕತ್ವಕ್ಕೆ ಮನಸ್ಸಿಲ್ಲದಿದ್ದಾಗ್ಯೂ, ಮುಷ್ಕರಕ್ಕೆ ದೊರೆತ ಭಾರಿ ಮಟ್ಟದ ಸಾರ್ವಜನಿಕ ಬೆಂಬಲಕ್ಕೆ ತಲೆಬಾಗಿ, ಸರ್ಕಾರವು ಮುಷ್ಕರನಿರತ ಕಾರ್ಮಿಕರ ಬೇಡಿಕೆಗಳನ್ನು ಒಪ್ಪಲೇಬೇಕಾದ ಬಲವಂತಕ್ಕೆ ಸಿಲುಕಿಕೊಂಡಿತು. ಅವರ ಹನ್ನೆರಡು ಬೇಡಿಕೆಗಳನ್ನು ಒಪ್ಪಲಾಯಿತು ಮತ್ತು 'ಸನ್ನಡತೆಗಾಗಿ ಸಂಬಳ' ಎಂದು ಒಂದು ಕೋಟಿ ರೂಪಾಯಿಯನ್ನು ಅಂಚೆ ಮತ್ತು ತಂತಿ ಇಲಾಖೆಯ ಕಾರ್ಮಿಕರಿಗೆ ವೆಚ್ಚಮಾಡಲು ಸರ್ಕಾರ ಒಪ್ಪಿಕೊಂಡಿತು. ಅಂತಿಮವಾಗಿ ಆಗಸ್ಟ್ 1946ರಲ್ಲಿ ಮುಷ್ಕರವನ್ನು ಹಿಂತೆಗೆದುಕೊಳ್ಳಲಾಯಿತು.


ಇಡೀ ದೇಶವನ್ನು ನಡುಗಿಸಿದ ಕಾರ್ಮಿಕ ವರ್ಗದ ಮತ್ತೊಂದು ಮಹತ್ವದ ಹೋರಾಟವೆಂದರೆ ರೈಲ್ವೇ ಕಾರ್ಮಿಕರ ಮುಷ್ಕರ. 1946ರ ಆಗಸ್ಟ್-ಸೆಪ್ಟೆಂಬರ್‌ನಲ್ಲಿ ದಕ್ಷಿಣ ಭಾರತ ರೈಲ್ವೇ ಕಾರ್ಮಿಕರು ಮುಷ್ಕರಕ್ಕೆ ಇಳಿದರು. ಆಡಳಿತ ವರ್ಗವು ರೈಲ್ವೇ ಕಾರ್ಮಿಕರ ವಿರುದ್ಧ ಅತ್ಯಂತ ಕ್ರೂರ ದಬ್ಬಾಳಿಕೆ ನಡೆಸಿತು. ಅದರ ಪರಿಣಾಮ, ಪೋಲಿಸ್ ಗೋಲಿಬಾರಿನಿಂದ ಒಂಭತ್ತು ಕಾರ್ಮಿಕರು ಜೀವ ತೆತ್ತರು ಮತ್ತು ನೂರಕ್ಕೂ ಹೆಚ್ಚು ಜನ ಗಾಯಗೊಂಡರು. 400 ಕ್ಕೂ ಹೆಚ್ಚು ಜನರನ್ನು ಬಂಧಿಸಿದರು. ಆಗ ಸೆಪ್ಟೆಂಬರ್ 18ರಂದು ರೈಲ್ವೇ ಕಾರ್ಮಿಕರ ಪರವಾಗಿ ಒಂದು ದಿನದ ಸೌಹಾರ್ದವನ್ನು ವ್ಯಕ್ತಪಡಿಸಬೇಕೆಂದು ಎಐಟಿಯುಸಿ ಕರೆ ನೀಡಿತು. ಅದಕ್ಕೆ ಸ್ಪಂದಿಸಿ, ದೇಶದ ಹಲವಾರು ಕಡೆಗಳಲ್ಲಿ ಮೆರವಣಿಗೆಗಳನ್ನು ಮತ್ತು ಮತಪ್ರದರ್ಶನಗಳನ್ನು ನಡೆಸಲಾಯಿತು ಮತ್ತು ರೈಲ್ವೇ ಕಾರ್ಮಿಕರ ಸಹಾಯಾರ್ಥ ನಿಧಿ ಸಂಗ್ರಹ ಮಾಡಲಾಯಿತು. ಈ ಮುಷ್ಕರವು ಒಂದು ತಿಂಗಳ ಕಾಲ ನಡೆಯಿತು ಮಧ್ಯಂತರ ಸರ್ಕಾರದಲ್ಲಿ ರೈಲ್ವೇ ಸಚಿವರಾಗಿದ್ದ ಅಸಫ್ ಅಲಿಯವರು ಬೇಡಿಕೆಗಳನ್ನು ಈಡೇರಿಸುವುದಾಗಿ ಆಶ್ವಾಸನೆ ನೀಡಿದ ನಂತರವೇ

ಪುಟ 14 ನೋಡಿ

ನಾನ್ ಗಜೆಟೆಡ್ ನೌಕರರ ಮುಷ್ಕರ, ಮದ್ರಾಸ್, 1946



ಶಿಕ್ಷಕರ ಮುಷ್ಕರ, ಲಾಹೋರ್, 1946



ಕೊಲ್ಕತಾದಲ್ಲಿ ಜುಲೈ 29, 1946ರ ಸಾರ್ವತ್ರಿಕ ಮುಷ್ಕರದ ರ್‍ಯಾಲಿ



ಕೊರೋನೋತ್ತರ ಭಾರತ ಹೇಗಿರಬಹುದು?.....

ಪುಟ 6 ರಿಂದ



ಆದರೆ ಇಂದು ಇವು ಸುದ್ದಿ ಮಾಡುತ್ತಿಲ್ಲ. ಇವೆಲ್ಲ ಸಾಮಾನ್ಯ ಸಂಗತಿಗಳಾಗಿವೆ. ಇದೇ ರೀತಿ ಕೊರೊನ ಕೂಡ. ಕೆಲವು ತಿಂಗಳು ಜನ ಕೊರೋನದೊಂದಿಗೆ ಬದುಕಲು ಆರಂಭವಾದ ನಂತರ ಸಾಮಾನ್ಯ ಸಂಗತಿಯಾಗುತ್ತದೆ. ಜನವರಿಯಿಂದ ಮಾರ್ಚ್ ತನಕ ಕೊರೋನ ನಮ್ಮಲ್ಲಿ ಹರಡುತ್ತಿತ್ತು. ಆದರೆ ಟ್ರಂಪ್ ಸ್ವಾಗತ, ಡೆಲ್ಲಿಯ ಕೋಮುಗಲಭೆ, ಮಧ್ಯಪ್ರದೇಶದಲ್ಲಿ ಸರಕಾರ ಬದಲಾಯಿಸುವುದು ಇತ್ಯಾದಿಗಳಲ್ಲಿ ಆಳುವ ಪಕ್ಷಬ್ಯುಸಿಯಾಗಿತ್ತು. ಇವೆಲ್ಲ ಕಾರಣಗಳಿಂದ ಸರಕಾರಕ್ಕೆ ಜನವರಿಯಿಂದಲೇ ಕೊರೋನ ಬಗ್ಗೆ ಆಲೋಚಿಸಲು ಸಮಯ ಸಿಕ್ಕಿಲ್ಲ. ನಂತರ ಈ ಸಮಸ್ಯೆಯನ್ನು ಸರಕಾರ ಗಂಭೀರವಾಗಿ ಪರಿಗಣಿಸಿದೆ. ಮಾಧ್ಯಮಗಳು ಕೊರೋನಕ್ಕೆ ಪ್ರಚಾರ ಕೊಡಲು ಆರಂಭಿಸಿದವು. ಅಲ್ಲಿಂದ ಜನ ಕೊರೋನವನ್ನು ಗಂಭೀರವಾಗಿ ಪರಿಗಣಿಸಲು ಆರಂಭಿಸಿದರು. ಸರಕಾರ ಮತ್ತು ಮಾಧ್ಯಮಗಳು ಕೊರೋನವನ್ನು ಸಾಮಾನ್ಯಗೊಳಿಸಿದ ನಂತರ ಜನ ಗಂಭೀರವಾಗಿ ಪರಿಗಣಿಸುವುದಿಲ್ಲ.

ಪಳಗಿಸಿದ ಕೊರೋನ

ಲಸಿಕೆ ಬಂದು ಕೊರೋನ ಗುಣಪಡಿಸಬಹುದಾದ ಖಾಯಿಲೆ ಎಂದಾದ ಮೇಲೆ ಆಯ್ಯಪ್ಪನ ಭಕ್ತರ ಸ್ಥಿತಿ ನಿರ್ಮಾಣವಾಗಬಹುದು. ಕುಡಿತ, ಸಿಗರೇಟ್ ಮತ್ತು ಇತರ ಚಟ ಇರುವ ಕೆಲವರು ಇವುಗಳಿಂದ ಮುಕ್ತಿ ಪಡೆಯಲು ಆಯ್ಯಪ್ಪನ ಮಾಲೆ ಧರಿಸಿ ಕೆಲವು ದಿನ ಶಿಸ್ತಲ್ಲಿರುತ್ತಾರೆ. ಅಯ್ಯಪ್ಪನ ದರ್ಶನ ಮಾಡಿ ಬಂದ ನಂತರ ಇವರಲ್ಲಿ ಕೆಲವರು ಚಟ ಬಿಡುವ ಸಾಧ್ಯತೆ ಇದೆ. ಆದರೆ ಹಲವರು ಮುಂದುವರಿಸಿದ ಉದಾಹರಣೆಗಳಿವೆ. ಇದೇ ರೀತಿ ಕೊರೋನ ಪಳಗಿಸಬಹುದಾದ ಖಾಯಿಲೆ ಆದ ನಂತರ ಅದಕ್ಕೆ ಭಯ ಪಡುವ ಸಾಧ್ಯತೆ ಇಲ್ಲ. ದುಡ್ಡು, ಆಸ್ತಿಪಾಸ್ತಿಯ ನಶ್ವರತೆ, ಮನುಷ್ಯತ್ವದ ಪ್ರಾಮುಖ್ಯತೆ, ದೇವರ ಅನುಪಯುಕ್ತತತೆ, ಅನುಭೋಗ ಸಂಸ್ಕೃತಿಯ ದೋಷಗಳು, ಆರೋಗ್ಯ ಕ್ಷೇತ್ರದಲ್ಲಿ ದುಡಿಯುವವರೇ ದೇವರು, ಪೋಲಿಸರ ಮನುಷ್ಯತ್ವ, ಜಾತಿ, ಧರ್ಮ, ಲಿಂಗ ತಾರತಮ್ಯಗಳ ಅಪಹಾಸ್ಯ ಇವೆಲ್ಲ ಕೊರೋನ ಅಟ್ಟಹಾಸ ಸಂದರ್ಭದಲ್ಲಿ ಸೋಶಿಯಲ್ ಮೀಡಿಯಾದಲ್ಲಿ ಹೆಚ್ಚು ಚಲಾವಣೆಯಲ್ಲಿದ್ದ ಸಂಗತಿಗಳು. ಇವೆಲ್ಲವೂ ಸ್ಮಶಾನ ವೈರಾಗ್ಯದ ಲಕ್ಷಣಗಳು. ಇವು ಯಾವುವು ಕೂಡ ಬದಲಾಗುವ ಸಂಗತಿಗಳಲ್ಲ. ಅಂದರೆ ಹಿಂದಿನಂತೆ ಆಸ್ತಿಪಾಸ್ತಿ, ದೇವರು, ಜಾತಿ, ಧರ್ಮ, ಲಿಂಗ ತಾರತಮ್ಯಗಳು ಮುಖ್ಯವಾಗಲಿವೆ. ಸಮಾನತೆ, ಮನುಷ್ಯತ್ವ ಇತ್ಯಾದಿಗಳು ಹಿಂದಿನ ಬೆಂಚಲ್ಲೇ ಇರಲಿವೆ. ಅನುಭೋಗ ಸಂಸ್ಕೃತಿಯನ್ನು ಬೆಳೆಸಿರುವುದು ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ. ಇಲ್ಲಿ ಖರೀದಿಸುವ ಶಕ್ತಿ ಮತ್ತು ಅನುಭೋಗದ ನಡುವೆ ಸಂಬಂಧ ಇದೆ. ಕೊರೋನ ನಂತರವೂ ವಿವಿಧ ವರ್ಗಗಳ ಖರೀದಿಸುವ ಶಕ್ತಿಯಲ್ಲಿ ವಿಶೇಷ ಏರುಪೇರಾಗುವುದಿಲ್ಲ. ಇಂದು ಮತ್ತು ಮುಂದು ಕೂಡ ಮೇಲ್‌ಸ್ತರದ ಜನರು ಹೆಚ್ಚು ಅನುಭೋಗಿಸುತ್ತಾರೆ. ತಳಸ್ತರದ ಜನರು ಮೂಲಸೌಕರ್ಯಗಳಿಗೂ ಪರದಾಡುವುದು ತಪ್ಪುವುದಿಲ್ಲ.

ಇಡೀ ಕೊರೋನ ಅಟ್ಟಹಾಸದ ಸಂದರ್ಭದಲ್ಲಿ ಸರಕಾರಿ ಆರೋಗ್ಯ ವ್ಯವಸ್ಥೆ – ವೈದ್ಯರು, ನರ್ಸ್‌ಗಳು, ಆರೋಗ್ಯ ಸಹಾಯಕರು – ಯುದ್ಧೋಪಾದಿಯಲ್ಲಿ ಕೆಲಸ ಮಾಡಿದೆ. ಖಾಸಗಿ ಆರೋಗ್ಯ ಕ್ಷೇತ್ರ ಫೀಲ್ಡ್‌ಗೆ ಬರಲೇ ಇಲ್ಲ. ಖಾಸಗಿ ಕ್ಲಿನಿಕ್‌ಗಳು, ವೈದ್ಯರು ಕಡ್ಡಾಯವಾಗಿ ಸೇವೆ ನೀಡಬೇಕೆಂದು ಸರಕಾರ ಆದೇಶ ಮಾಡಿದರೂ ತಪ್ಪಿಸಿಕೊಳ್ಳಲು ಪ್ರಯತ್ನಿಸಿದವರೇ ಹೆಚ್ಚು. ಕೊರೋನ ಪಳಗಿಸಿದ ನಂತರ ಯಥಾಪ್ರಕಾರ ಖಾಸಗಿ ಆರೋಗ್ಯ ಕ್ಷೇತ್ರ ಮುಂಚೂಣಿಗೆ ಬರಲಿದೆ. ಜಾತಿ, ಧರ್ಮ, ಲಿಂಗ ತಾರತಮ್ಯಗಳು ಕೊರೋನ ಸಂದರ್ಭದಲ್ಲೂ ನಕರಾತ್ಮಕ ರೂಪದಲ್ಲಿ ಚರ್ಚಿಸಲ್ಪಟ್ಟಿವೆ. ಅಂದರೆ ಬಟ್ಟೆ ಒಗೆಯುವ, ಪಾತ್ರೆ ತೊಳೆಯುವ, ಕಸ ಗುಡಿಸುವ, ಮಕ್ಕಳ ಡೈಪರ್ ಬದಲಾಯಿಸುವ ಸ್ಥಿತಿ ಗಂಡಸಿಗೂ ಬಂತಲ್ಲ ಎನ್ನುವ ಚಿತ್ರಣ. ಕೆಲವರ ಜೀವತಳಿಯಲ್ಲಿಯೇ ಕೋಮು ದ್ವೇಷ ತುಂಬಿದೆ. ಇದನ್ನು ಬದಲಾಯಿಸಲು ಕೊರೋನ ಕೂಡ ವಿಫಲವಾಗಿದೆ. ನಮ್ಮೆಲ್ಲ ಸಮಸ್ಯೆಗೂ ಮುಸ್ಲಿಮರೇ ಕಾರಣ ಎನ್ನುವ ತುತ್ತೂರಿ ಕೊರೋನ ಅಟ್ಟಹಾಸ ಸಂದರ್ಭದಲ್ಲೂ ಬದಲಾಗಿಲ್ಲ. ಬಿಗಿಯಾದ ಕಾನೂನು ಕ್ರಮ ಇಲ್ಲವಾದರೆ ಇವರು ಮುಂದೆಯೂ ಬದಲಾಯಿಸಿಕೊಳ್ಳುವುದಿಲ್ಲ. ಇವೆಲ್ಲ ಮೇಲ್ಪದರದ ಬದಲಾವಣೆಗಳು. ಮುಂದಿನ ಭಾಗದಲ್ಲಿ ನಮ್ಮ ಆರ್ಥಿಕ, ರಾಜಕೀಯ, ಸಮಾಜ, ಸಂಸ್ಕೃತಿಗಳನ್ನು ಬುಡಮೇಲು ಮಾಡುವ ಅಥವಾ ಸಮಗ್ರ ಬದಲಾವಣೆಗಳು ಏಕೆ ಆಗುವುದಿಲ್ಲ ಎನ್ನುವುದನ್ನು ವಿವರಿಸಿದ್ದೇನೆ.

ಸಮಗ್ರ ಬದಲಾವಣೆ ಏಕಾಗುವುದಿಲ್ಲ?

ಬಹುತೇಕರು ಸಮಗ್ರ ಬದಲಾವಣೆಯನ್ನು ಆರ್ಥಿಕ ಕುಸಿತದ ಹಿನ್ನೆಲೆಯಲ್ಲಿ ಕಲ್ಪಿಸಿಕೊಳ್ಳುತ್ತಿದ್ದಾರೆ. ಇವರ ವಾದ ಸರಣಿ ಇಂತಿದೆ. ಕೊರೋನ ಮುನ್ನವೇ ನಮ್ಮಅರ್ಥ ವ್ಯವಸ್ಥೆ ಕುಂಟುತ್ತಾ ಸಾಗುತ್ತಿತ್ತು. ಕೊರೋನ ನಂತರ ಆರ್ಥಿಕ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಂಡಿವೆ. ಇದರಿಂದ ಆರ್ಥಿಕ ಪ್ರಗತಿ ದರ ಮೈನಸ್ ಆಗುವ ಸಾಧ್ಯತೆ ಇದೆ. ಆರ್ಥಿಕ ಪ್ರಗತಿಯೇ ಇಲ್ಲವಾದರೆ ತೆರಿಗೆ ಸಂಗ್ರಹ ಕ್ಷೀಣಿಸುತ್ತದೆ. ಇದರಿಂದಶಿಕ್ಷಣ, ಆರೋಗ್ಯ, ಭದ್ರತೆ, ಉದ್ಯೋಗ ಇತ್ಯಾದಿ ಜವಾಬ್ದಾರಿಗಳನ್ನು ನಿರ್ವಹಿಸುವುದು ಸರಕಾರಕ್ಕೆ ಕಷ್ಟವಾಗುತ್ತದೆ. ಸರಕಾರದ ವೈಫಲ್ಯ ಎಲ್ಲ ಕ್ಷೇತ್ರಗಳಲ್ಲೂ ಎದ್ದು ಕಾಣಲು ಆರಂಭವಾಗುತ್ತದೆ. ಈಗಾಗಲೇ ನಿರುದ್ಯೋಗ ಹೆಚ್ಚಿರುವ ಸಂದರ್ಭದಲ್ಲಿ ಸರಕಾರದ ವೈಫಲ್ಯ ದೊಡ್ಡಪ್ರಮಾಣದ ಅರಾಜಕತೆಯನ್ನು ಸೃಷ್ಟಿಸಬಹುದು. ಇವೆಲ್ಲವೂ ಬದಲೀ ರಾಜಕೀಯ ಧ್ರುವೀಕರಣಕ್ಕೆ ಎಡೆಮಾಡಿಕೊಡಬಹುದು ಎನ್ನುವ ಊಹೆ ಇದೆ.


ಆರ್ಥಿಕ ಕುಸಿತದಿಂದ ರಾಜಕೀಯ ಧ್ರುವೀಕರಣದ ವಾದವನ್ನು ಎರಡು ಮೂರು ನೆಲೆಯಲ್ಲಿ ಒಪ್ಪಲು ಸಾಧ್ಯವಿಲ್ಲ. ಒಂದು, ಕೊರೋನದಿಂದ ಖಂಡಿತವಾಗಿಯೂ ನಮ್ಮ ಆರ್ಥಿಕ ಪ್ರಗತಿ ಕುಂಠಿತವಾಗಲಿದೆ. ನೋಟು ರದ್ಧತಿ, ಜಿಎಸ್‌ಟಿಗಳಿಂದ ಸಣ್ಣಪುಟ್ಟ ವ್ಯಾಪಾರ ಉದ್ದಿಮೆಗಳು ಕೊರೋನ ಮೊದಲೇ ನೆಲೆಕಚ್ಚಿವೆ. ಕೊರೋನ ಇವನ್ನು ತಲೆ ಎತ್ತದಂತೆ ಮಾಡಿದೆ. ವರ್ಕಿಂಗ್ ಕ್ಯಾಪಿಟಲ್ ಕೊರತೆ, ಬೇಡಿಕೆ ಕೊರತೆ, ಕೆಲಸಗಾರರ ಕೊರತೆಗಳಿಂದ ಇವು ಒಂದೆರಡು ವರ್ಷ ಉಸಿರಾಡುವುದು ಕಷ್ಟ. ಕೃಷಿ ಈಗಾಗಲೇ ಅಗತ್ಯಕ್ಕಿಂತ ಹೆಚ್ಚು ಜನರನ್ನು ಸೇರಿಸಿಕೊಂಡಿತ್ತು. ಒಂದೆರಡು ಜನರು ತೊಡಗಿಸಿಕೊಳ್ಳಬೇಕಾದ ಜಾಗದಲ್ಲಿ ಬೇರೆ ಉದ್ಯೋಗವಿಲ್ಲದೆ ಏಳೆಂಟು ಜನ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಪೇಟೆಪಟ್ಟಣಗಳಿಗೆ ವಲಸೆ ಹೋದವರು ಕೊರೋನ ನಂತರ ಊರು ಸೇರುತ್ತಿದ್ದಾರೆ. ಇವರಿಗೆಲ್ಲ ಕೃಷಿ ಅಥವಾ ಗ್ರಾಮೀಣ ಪ್ರದೇಶದಲ್ಲಿರುವ ಕೃಷಿಯೇತರ ಚಟುವಟಿಕೆಗಳೇ ಆಧಾರವಾಗಬೇಕು. ಕೃಷಿ ಮತ್ತು ಕೃಷಿಯೇತರ ಚಟುವಟಿಕೆ ಎರಡೂ ಕೂಡ ಸರಕಾರದಿಂದ ಆದ್ಯತೆ ಪಡೆದಿಲ್ಲ. ಕೊರೋನ ನಂತರವೂ ಆದ್ಯತೆ ಪಡೆಯುವ ಸಾಧ್ಯತೆಗಳು ಕಡಿಮೆ. ಆದರೆ ಇವಕ್ಕೆ ಆದ್ಯತೆ ನೀಡದಿದ್ದರೆ ಪೇಟೆಪಟ್ಟಣದಿಂದ ಹಿಂತಿರುಗಿದ ವಲಸೆ ಕೆಲಸಗಾರರು ತಕ್ಷಣ ನೆಲೆಕಾಣುವುದು ಕಷ್ಟ. ಕೊರೋನ ಅರ್ಬನ್ ಸಮಸ್ಯೆಯಾದರೂ ಇದರ ಪರಿಣಾಮ ಗ್ರಾಮೀಣ ಪ್ರದೇಶದಲ್ಲೂ ಕಾಣಬಹುದು. ಇವೆಲ್ಲಕ್ಕಿಂತ ಮುಖ್ಯವಾಗಿ ಕೊರೋನದ ನಕರಾತ್ಮಕ ಆರ್ಥಿಕ ಪರಿಣಾಮದ ಮೊದಲ ಬಲಿ ಸಣ್ಣಪುಟ್ಟ ವ್ಯಾಪಾರ, ಉದ್ದಿಮೆಗಳು, ಅಸಂಘಟಿತ ವಲಯದ ಕಾರ್ಮಿಕರು ಮತ್ತು ವಲಸೆ ಕಾರ್ಮಿಕರು. ನಮ್ಮ ಜನಸಂಖ್ಯೆ ಶೇ.70ರಷ್ಟು ಇವರೇ ಇದ್ದಾರೆ. ಆದರೆ ಇವರೆಲ್ಲ ಜಾತಿ, ಧರ್ಮ, ಭಾಷೆ, ಪ್ರದೇಶ ನೆಲೆಯಲ್ಲಿ ಛಿದ್ರಗೊಂಡಿದ್ದಾರೆ. ಇವರನ್ನು ವರ್ಗದ ನೆಲೆಯಲ್ಲಿ ಒಂದುಗೂಡಿಸುವುದು ಸುಲಭದ ಕೆಲಸವಲ್ಲ.

ಎರಡು, ನಮ್ಮಲ್ಲಿ ಆರ್ಥಿಕ ಕುಸಿತದಿಂದ ಅರಾಜಕತೆ ಸೃಷ್ಟಿಯಾಗುವುದು ಕಷ್ಟ. ಏಕೆಂದರೆ ಹಿಂದಿನಿಂದಲೂ ನಮ್ಮ ಆರ್ಥಿಕ ಪ್ರಗತಿಯ ಹೆಚ್ಚಿನ ಲಾಭವನ್ನು ಪಡೆಯುತ್ತಿರುವವರು ಶ್ರೀಮಂತರು ಮತ್ತು ಮಧ್ಯಮ ವರ್ಗದ ಜನರು. ಏಣಿಯ ಬುಡದಲ್ಲಿರುವವರು ಅತ್ಯಂತ ಕಡಿಮೆ ಸಂಪನ್ಮೂಲದಲ್ಲಿ ಬದುಕುತ್ತಿದ್ದಾರೆ. 2019ರ ಆಕ್ಸ್‌ಫಾಮ್ ವರದಿ ಪ್ರಕಾರ ಶೇ.10ರಷ್ಟು ಭಾರತೀಯಲ್ಲಿ ನಮ್ಮ ದೇಶದ ಶೇ.77ರಷ್ಟು ಸಂಪತ್ತು ಕ್ರೋಢೀಕರಣಗೊಂಡಿದೆ ಮತ್ತು ಏಣಿಯ ಬುಡದಲ್ಲಿರುವಬಹುತೇಕರು ಶೇ.5ರಷ್ಟು ಸಂಪನ್ಮೂಲದಲ್ಲಿ ಉಸಿರಾಡುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ ವೇತನಕ್ಕೆ ದುಡಿಯುವನೊಬ್ಬನ ಆದಾಯ ಖಾಸಗಿ ಉದ್ದಿಮೆಗಳ ಉನ್ನತ ಹುದ್ದೆಯಲ್ಲಿರುವನ ಒಂದು ವರ್ಷದ ಆದಾಯಕ್ಕೆ ಸಮವಾಗಬೇಕಾದರೆ 941 ವರ್ಷಗಳು ಬೇಕೆನ್ನುತ್ತದೆ ವರದಿ. ಇಂತಹ ಅಸಮಾನತೆಯನ್ನೂ ಅಭಿವೃದ್ಧಿ ಎಂದು ಮಂಡಿಸುವ ಸಾಕಷ್ಟು ವಿದ್ವಾಂಸರಿದ್ದಾರೆ. ಆರ್ಥಿಕ ಅಸಮಾನತೆ ಮುಖ್ಯ ಚರ್ಚೆಯ ವಸ್ತುವಾಗದಂತೆ ಮಾಧ್ಯಮ ಕೂಡ ನೋಡಿಕೊಂಡಿದೆ. ಅಷ್ಟುಮಾತ್ರವಲ್ಲಆರ್ಥಿಕ ಅಸಮಾನತೆಗಿಂತ ಜಾತಿ, ಧರ್ಮಗಳೇ ಮುಖ್ಯವೆಂದು ಮಾಧ್ಯಮಗಳು ಜನರನ್ನು ಒಪ್ಪಿಸಿವೆ. ಇಂತಹ ಪರಿಸರದಲ್ಲಿ ಆರ್ಥಿಕ ನೆಲೆಯಲ್ಲಿ ಜನರನ್ನು ಸಂಘಟಿಸುವುದು ಹೇಗೆ ಎನ್ನುವ ಪ್ರಶ್ನೆ ಇದೆ.

ಮೂರು, ಅಧಿಕಾರದಲ್ಲಿರುವ ಆರ್ಥಿಕ ನೀತಿಗೂ ಬಹುತೇಕ ವಿರೋಧ ಪಕ್ಷಗಳ ಆರ್ಥಿಕ ನೀತಿಗೂ ವಿಶೇಷ ಭಿನ್ನತೆಯೇ ಇಲ್ಲ. ಇಬ್ಬರೂ ನಿಯೋ ಲಿಬರಲ್ ಆರ್ಥಿಕ ನೀತಿ ಹಾಗು ಲಿಬರಲ್ ಡೆಮಾಕ್ರಸಿಗೆ ಮಹತ್ವ ನೀಡುವವರು. ಅಂದರೆ ಮಾರುಕಟ್ಟೆ ನಿರ್ದೇಶಿತ ಅಭಿವೃದ್ಧಿ ಮತ್ತು ರಾಜಕೀಯ ಸಮಾನತೆ ಮೂಲಕ ಆರ್ಥಿಕ ಸಾಮಾಜಿಕ ಸಮಾನತೆಗೆ ಪ್ರಯತ್ನಿಸುವವರು. ಭಾರತದಲ್ಲಿ ಎಡಪಂಥೀಯ ಪಕ್ಷಗಳು ಮಾತ್ರ ಸೋಶಿಯಲ್ ಡೆಮಾಕ್ರಸಿಗೆ ಮಹತ್ವ ನೀಡುವವರು. ಅಂದರೆ ಆರ್ಥಿಕ, ಸಾಮಾಜಿಕ ಸಮಾನತೆಗೆ ಮಹತ್ವ ನೀಡುವವರು. ಈಗ ತಳಸ್ತರದ ಜನರು ಎದುರಿಸುವ ಸಮಸ್ಯೆಗಳಿಗೆ ಸೋಶಿಯಲ್ ಡೆಮಾಕ್ರಸಿ ಪಾಲಿಸಿಗಳು ಮಾತ್ರ ಪರಿಹಾರ ನೀಡಲು ಸಾಧ್ಯ. ಆದರೆ ನಮ್ಮಲ್ಲಿ ಎಡಪಂಥೀಯ ಪಕ್ಷಗಳ ಬಗ್ಗೆ ಜನರಲ್ಲಿ ಎಷ್ಟು ಹೆದರಿಕೆ ಮೂಡಿಸಿದ್ದಾರೆಂದರೆ ತಳಸ್ತರದ ಜನರು ಅತ್ತ ಸುಳಿಯದಿರುವ ಸ್ಥಿತಿ ಇದೆ. ಕಮ್ಯುನಿಸ್ಟ್ ಅಂದರೆ ಡಿಕ್ಟೇಟರ್‌ಶಿಪ್, ಕಮ್ಯುನಿಸ್ಟ್ ಅಂದರೆ ಸ್ವಾತಂತ್ರ್ಯ ಇಲ್ಲ, ಕಮ್ಯುನಿಸ್ಟ್ ಅಂದರೆ ಧರ್ಮ ವಿರೋಧಿ ಹೀಗೆ ಹಲವು ಚಿತ್ರಣಗಳಿವೆ. ಇವೆಲ್ಲ ರಶ್ಯಾ, ಚೀನಾ ದೇಶದ ಕಮ್ಯುನಿಸ್ಟ್ ಸರಕಾರಗಳನ್ನು ನೋಡಿ ಕೊಡುವ ಚಿತ್ರಣಗಳು. ಕಮ್ಯುನಿಸ್ಟ್ ನೀತಿಗಳು ಡಿಕ್ಟೇಟರ್‌ಶಿಪ್‌ಲ್ಲೇ ಜಾರಿ ಬರಬೇಕಾಗಿಲ್ಲ, ಪ್ರಜಾಪ್ರಭುತ್ವದಲ್ಲೂ ಜಾರಿಗೊಳಿಸಬಹುದು ಎನ್ನುವುದನ್ನು ನಮ್ಮ ದೇಶ ಸಾಧಿಸಿ ತೋರಿಸಿದೆ.

ತ್ರಿಪುರ, ಪಶ್ಚಿಮ ಬಂಗಾಳ, ಕೇರಳದಲ್ಲಿ ಕಮ್ಯುನಿಸ್ಟ್ ಸರಕಾರಗಳು ತಳಸ್ತರದ ಜನರ ಹಿತಾಸಕ್ತಿಗಳನ್ನು ರಕ್ಷಿಸುವ ಕೆಲಸ ಮಾಡಿವೆ. ಇವೆಲ್ಲ ಏನೇನೂ ದೋಷ ಇಲ್ಲದ ಆಡಳಿತ ನಡೆಸಿವೆ ಎಂದಲ್ಲ. ಅಲ್ಲೂ ತಪ್ಪುಗಳಾಗಿವೆ. ಅವೇ ಕಾರಣಕ್ಕಾಗಿ ಪಕ್ಷ ಅಧಿಕಾರ ಕಳೆದುಕೊಂಡಿದೆ. ಹಿಂದೆ ಕೇರಳ ಅಭಿವೃದ್ಧಿ ಮಾದರಿ ಬಗ್ಗೆ ಚರ್ಚೆ ನಡೆದಿತ್ತು. ಇವತ್ತು ಕೊರೋನ ಹತೋಟಿ ಸಾಧಿಸಲು ಕೇರಳ ಸರಕಾರ ಹಮ್ಮಿಕೊಂಡ ಕಾರ್ಯಕ್ರಮಗಳು ಕೂಡ ಪ್ರಪಂಚವ್ಯಾಪಿ ಹೆಸರು ಮಾಡಿವೆ. ಆದರೆ ಎಲ್ಲ ಕಡೆ ಕೇರಳದ ಮಾದರಿ ಎಂದು ಚರ್ಚಿಸಲ್ಪಡುತ್ತಿದೆಯೇ ಹೊರತು ಕೇರಳದ ಕಮ್ಯುನಿಸ್ಟ್ ಸರಕಾರದ ಮಾದರಿ ಎಂದು ಚರ್ಚಿಸಲ್ಪಡುವುದಿಲ್ಲ. ನಮ್ಮದೊಂದು ಪ್ರಜಾಪ್ರಭುತ್ವ ರಾಷ್ಟ್ರ. ಐದು ವರ್ಷಕ್ಕೊಮ್ಮೆ ಚುನಾವಣೆ ಗೆದ್ದ ಪಕ್ಷ ಮಾತ್ರ ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯ. ನಿರ್ದಿಷ್ಟ ಪಕ್ಷದ ಧೋರಣೆಗಳು ಇಷ್ಟವಿಲ್ಲದಿದ್ದರೆ ಮತ್ತೊಂದು ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರದಿಂದ ಇಳಿಸುವ ಅವಕಾಶ ಇದೆ. ಇದೇ ನೀತಿಯನ್ನು ಬಳಸಿಕೊಂಡು ಕಮ್ಯುನಿಸ್ಟರಿಗೂ ಒಂದು ಅವಕಾಶ ನೀಡಬಹುದೆನ್ನುವ ಚರ್ಚೆ ಮಾಧ್ಯಮಗಳಲ್ಲಿ ಇಷ್ಟರವರೆಗೆ ನಡೆದಿಲ್ಲ. ಕೊರೋನದ ನಂತರ ಇಂತಹ ಚರ್ಚೆಗೆ ಮಹತ್ವ ಬರಲೂಬಹುದು.

ನಾನು ಮೇಲೆ ಹೇಳಿರುವ ಎಲ್ಲ ಸಂಗತಿಗಳು ಊಹೆಗಳು. ಈ ಕೆಳಗಿನ ಗ್ರಹಿಕೆಗಳ ನೆಲೆಯಲ್ಲಿ ಊಹೆಗಳನ್ನು ಮಾಡಲಾಗಿದೆ. ಒಂದು, 3–4 ತಿಂಗಳಲ್ಲಿ ಕೊರೋನ ಸೋಂಕಿತರ ಸಂಖ್ಯೆ ಇಳಿಮುಖವಾಗಬಹುದು. ಎರಡು, 1 ವರ್ಷದಲ್ಲಿ ಕೊರೋನ ರೋಗ ಗುಣಪಡಿಸುವ ಲಸಿಕೆ ಬರಬಹುದು. ಒಂದು ವೇಳೆ ಗ್ರಹಿಕೆಗಳು ತಪ್ಪಾದರೆ ಊಹೆಗಳು ತಪ್ಪಾಗಬಹುದು.



ನೆರೆ ದೇಶಗಳಿಂದ ನೇರ ಹೂಡಿಕೆಗೆ ಹೊಸ ನಿಯಮಗಳು –ಆರ್ಥಿಕ ಕ್ರಮವೇ ಅಥವಾ ರಾಜಕೀಯ ಕ್ರಮವೇ?



ಕೊವಿಡ್–19 ಅಂಟು ರೋಗವು ಇಡೀ ವಿಶ್ವವನ್ನು ಪೀಡಿಸುತ್ತಿರುವ ಸನ್ನಿವೇಶದಲ್ಲಿ, ಭಾರತದ ಕಂಪೆನಿಗಳನ್ನು ಸ್ವಾಧೀನಪಡಿಸಿಕೊಳ್ಳುವ/ನುಂಗುವ ಅವಕಾಶವಾದಿ ಪ್ರಯತ್ನಗಳನ್ನು ಹತ್ತಿಕ್ಕುವ ಸಲುವಾಗಿ ಸರ್ಕಾರವು ತನ್ನ ಎಫ್‌ಡಿಐ ನೀತಿಯನ್ನು ಪರಾಮರ್ಶೆಗೆ ಒಳಪಡಿಸಿ, ಕೆಲವು ಬದಲಾವಣೆಗಳನ್ನು ಜಾರಿಗೆ ತಂದಿರುವುದಾಗಿ ಹೇಳಿದೆ. ಇದರ ಗುರಿ ಚೀನಾದಿಮದ ಬರುವ ಎಫ್‌ಡಿಐಗಳೆ ಎಂಬುದು ಎಲ್ಲರಿಗೂ ಗೊತ್ತಿರುವ ಗುಟ್ಟು. ಈ ಕ್ರಮ ಕೈಗೊಂಡದ್ದು ದೇಶದ ಆರ್ಥಿಕ ಹಿತದೃಷ್ಟಿಯಿಂದಲೇ ಅಥವ ರಾಜಕೀಯ ಕಾರಣಗಳಿಂದ್ದಾಗಿಯೋ?
ಅರ್ಥಶಾಸ್ತ್ರದ ಪ್ರಾಧ್ಯಾಪಕಿ ಪ್ರೊ. ಸುನಂದಾ ಸೆನ್ ಇಲ್ಲಿ ವಿಶ್ಲೇಷಿಸಿದ್ದಾರೆ.

ಅನು: ಕೆ.ಎಂ.ನಾಗರಾಜ್


1991ರ ಆರ್ಥಿಕ ಸುಧಾರಣೆಗಳ ನಂತರ, ದೇಶದಲ್ಲಿ ವಿದೇಶಿ ಬಂಡವಾಳವು ದೊಡ್ಡ ಪ್ರಮಾಣದಲ್ಲಿ ಹೂಡಿಕೆಯಾಗಿದೆ. ಇದು, ದೇಶದ ಮೇಲಿನ ಸಾಲವಲ್ಲ. ವಿದೇಶಿ ಬಂಡವಾಳದ ಹೂಡಿಕೆ ಎರಡು ರೀತಿಯದ್ದಾಗಿರುತ್ತದೆ. ಒಂದು, ಎಫ್‌ಡಿಐ. ಇನ್ನೊಂದು, ಎಫ್‌ಐಐ. ಎಫ್‌ಡಿಐ (ಫಾರಿನ್ ಡೈರೆಕ್ಟ್ ಇನ್ವೆಸ್ಟ್‌ಮೆಂಟ್) ಅಂದರೆ, ವಿದೇಶಿ ಬಂಡವಾಳದ ನೇರ ಹೂಡಿಕೆ. ಎಫ್‌ಐಐ ಅಂದರೆ ಪೋರ್ಟ್‌ಫೋಲಿಯೋ ಅಥವಾ ಷೇರು ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿಕೆ. ನೇರ ಹೂಡಿಕೆ (ಎಫ್‌ಡಿಐ) ಅಂದರೆ, ಉತ್ಪಾದನಾ ಚಟುವಟಿಕೆಗಳ ಮೇಲೆ ಅಥವಾ ಅಸ್ತಿತ್ವದಲ್ಲಿರುವ ಉತ್ಪಾದನಾ ಸಂಸ್ಥೆಯ ಒಡೆತನದ ಮೇಲೆ ಮಾಡುವ ಬಂಡವಾಳದ ದೀರ್ಘಾವಧಿಯ ಹೂಡಿಕೆ. ಇಂತಹ ಹೂಡಿಕೆಯಿಂದ ದೇಶಕ್ಕೆ ಅನುಕೂಲ ಹೆಚ್ಚು, ಏಕೆಂದರೆ, ಇಂತಹ ಹೂಡಿಕೆಯನ್ನು ಹಿಂತೆಗೆಯುವ ಪ್ರಕ್ರಿಯೆಯೇ ದೀರ್ಘಾವಧಿಯದಾಗಿರುತ್ತದೆ. ಆದರೆ, ಎಫ್‌ಐಐ ಅಥವಾ ಷೇರು ಮಾರುಕಟ್ಟೆ ಅಥವಾ ಪೋರ್ಟ್‌ಫೋಲಿಯೋ ಹೂಡಿಕೆಯಿಂದ ದೇಶಕ್ಕೆ ಅಪಾಯವೇ ಹೆಚ್ಚು, ಏಕೆಂದರೆ, ಅದನ್ನು ಕ್ಷಣಾರ್ಧದಲ್ಲಿ ಹಿಂತೆಗೆಯಬಹುದು. ಹಿಂತೆಗೆದ ಮರುಕ್ಷಣದಲ್ಲಿಯೇ ಹಿಂತೆಗೆದಷ್ಟು ಮೊತ್ತದ ವಿದೇಶಿ ವಿನಿಮಯ ನಮ್ಮ ಸಂಗ್ರಹದಿಂದ ಹೊರಹೋಗುತ್ತದೆ. ಈ ಕಾರಣದಿಂದಾಗಿಯೇ, ಇದನ್ನು ಹಾಟ್ ಮನಿ ಎಂದು ಕರೆಯುತ್ತಾರೆ. ವಿದೇಶಿ ಬಂಡವಾಳ ಹೂಡಿಕೆಯ ನೀತಿಯನ್ನು ಸತತವಾಗಿ ಸಡಿಲಗೊಳಿಸುತ್ತಾ ಬಂದ ಪರಿಣಾಮವಾಗಿ, ಎಫ್‌ಡಿಐ ಗಿಂತ ಅಗಾಧ ಪ್ರಮಾಣದ ಎಫ್‌ಐಐ (ಪೋರ್ಟ್‌ಫೋಲಿಯೋ) ನಮ್ಮ ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯಾಗಿದೆ. ಅದು ನಮ್ಮ ಹಣಕಾಸು ಮಾರುಕಟ್ಟೆಯನ್ನು ಅನಿಶ್ಚಿತತೆಗೆ ತಳ್ಳಿದೆ.

ಜಾಗತಿಕ ಹಣಕಾಸು ಬಿಕ್ಕಟ್ಟಿನ ನಂತರ, 2008ರಿಂದ ಹಿಡಿದು 2018ರವರೆಗಿನ ಅವಧಿಯಲ್ಲಿ ನಮ್ಮ ಜಿಡಿಪಿ ಉನ್ನತವಾಗಿ ಬೆಳೆದಿತ್ತು. ಈ ಅವಧಿಯಲ್ಲಿ, ಆಗಿದ್ದ ವಿದೇಶಿ ಬಂಡವಾಳದ ನೇರ ಹೂಡಿಕೆ ಪ್ರಮಾಣ ಬಹಳ ಕಡಿಮೆಯೇ ಇತ್ತು. ನೇರ ಹೂಡಿಕೆಗೆ ಹೋಲಿಸಿದರೆ, ಷೇರು ಮಾರುಕಟ್ಟೆಯಲ್ಲಿ ಆಗಿದ್ದ ಹೂಡಿಕೆಯೇ ಅಗಾಧವಾಗಿತ್ತು. ರಿಸರ್ವ್ ಬ್ಯಾಂಕ್ ಮೂಲಗಳ ಪ್ರಕಾರ, 2018–19ಕ್ಕೆ ಕೊನೆಗೊಂಡ ವರ್ಷದ ಹಿಂದಿನ ಆರು ವರ್ಷಗಳಲ್ಲಿ, ಷೇರು ಮಾರುಕಟ್ಟೆಯಲ್ಲಿ ವಾರ್ಷಿಕ ಸರಾಸರಿ 244.7 ಬಿಲಿಯನ್ ಡಾಲರ್ ಪೋರ್ಟ್‌ಫೋಲಿಯೋ ಹೂಡಿಕೆಯಾಗಿದೆ. ಇದೇ ಆರು ವರ್ಷಗಳಲ್ಲಿ, ವಿದೇಶಿ ಬಂಡವಾಳದ ನೇರ ಹೂಡಿಕೆಯ ಪ್ರಮಾಣವು ವಾರ್ಷಿಕ ಸರಾಸರಿ 53.3 ಬಿಲಿಯನ್ ಡಾಲರ್‌ನಷ್ಟಿತ್ತು. ಈ ಎರಡೂ ರೀತಿಯ ಹೂಡಿಕೆಗಳಲ್ಲಿ ಅಜ ಗಜಾಂತರ ವ್ಯತ್ಯಾಸವಿದೆ. ಬಿಡಿ ಬಿಡಿಯಾಗಿ ಒಂದೇ ಒಂದು ವರ್ಷದ ಈ ಎರಡೂ ರೀತಿಯ ಹೂಡಿಕೆಗಳನ್ನು ತುಲನೆಮಾಡಿ ನೋಡಿದರೂ ಸಹ, ಅವುಗಳ ನಡುವೆ ಅಗಾಧ ವ್ಯತ್ಯಾಸವಿರುವುದು ಎದ್ದು ಕಾಣುತ್ತದೆ. ಉದಾಹರಣೆಗೆ, 2018–19 ವರ್ಷದಲ್ಲಿ 64.8 ಬಿಲಿಯನ್ ಡಾಲರ್ ನೇರ ಹೂಡಿಕೆಯಾಗಿತ್ತು ಮತ್ತು 256.9 ಬಿಲಿಯನ್ ಡಾಲರ್ ಪೋರ್ಟ್‌ಫೋಲಿಯೋ ಹೂಡಿಕೆಯಾಗಿತ್ತು. ಅಂದರೆ, ನೇರ ಹೂಡಿಕೆಯ ಸುಮಾರು ನಾಲ್ಕು ಪಟ್ಟು ಹೆಚ್ಚು ಪೋರ್ಟ್‌ಫೋಲಿಯೋ ಹೂಡಿಕೆಯಾಗಿತ್ತು.

ವಿದೇಶಿ ಬಂಡವಾಳದ ಒಳ-ಹರಿವಿನ ಏರಿಕೆ ಮತ್ತು ಅದರ ಭಾಗಗಳಾದ ನೇರ ಹೂಡಿಕೆ ಹಾಗೂ ಪೋರ್ಟ್‌ಫೋಲಿಯೋ ಹೂಡಿಕೆಗಳ ನಡುವಿನ ಅಜಗಜಾಂತರದ ವ್ಯತ್ಯಾಸಗಳು ಭಾರತದ ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡಿದ ಪರಿಣಾಮಗಳು ಮೊದಲೇ ಊಹಿಸಿದ ರೀತಿಯಲ್ಲೇ ಇದ್ದವು. ಪೋರ್ಟ್‌ಫೋಲಿಯೋ ಹೂಡಿಕೆಯು ರಿಯಲ್ ಎಸ್ಟೇಟ್, ಸರಕುಗಳ ವಾಯಿದಾ ಮಾರುಕಟ್ಟೆ ಮತ್ತು ವಿದೇಶಿ ಕರೆನ್ಸಿ ಮಾರುಕಟ್ಟೆಗಳಲ್ಲಿ ಏರಿಳಿತಗಳನ್ನು ಉಂಟುಮಾಡಿತು. ಇದೂ ನಿರೀಕ್ಷಿತವೇ. ಹಾಗೆಯೇ, ಒಳ ಹರಿದ ನಿವ್ವಳ ಅಲ್ಪಾವಧಿಯ ವಿದೇಶಿ ಬಂಡವಾಳಕ್ಕೂ (ಪೋರ್ಟ್‌ಫೋಲಿಯೋ) ಮತ್ತು ರೂಪಾಯಿ–ಡಾಲರ್ ದರಕ್ಕೂ ಒಂದು ರೀತಿಯ ತಾಳ–ಮೇಳ/ಸಾಂಗತ್ಯ ಇತ್ತು. ಅದಕ್ಕೆ ಪೂರಕವಾಗಿಯೋ ಎಂಬಂತೆ ಹೂಡಿಕೆಗೆ ಪೋರ್ಟ್‌ಫೋಲಿಯೋ ಸಹ ಸುಲಭವಾಗಿ ಎಟುಕುತ್ತಿತ್ತು.

ಒಳ ಹರಿದ ನಿವ್ವಳ ಅಲ್ಪಾವಧಿಯ ವಿದೇಶಿ ಬಂಡವಾಳವು (ಪೋರ್ಟ್‌ಫೋಲಿಯೋ) ಷೇರು ಮಾರುಕಟ್ಟೆಯಲ್ಲಿ ಹೂಡಿಕೆಯಾದ ನಂತರ ಲಾಭ/ನಷ್ಟ ಗಳಿಸುವುದು ಸಾಮಾನ್ಯ. ಅದು ದೇಶದ ಅರ್ಥವ್ಯವಸ್ಥೆಯ ಮೇಲೆ ಬೀರುತ್ತಿದ್ದ ಪ್ರಭಾವ ತಕ್ಷಣದಲ್ಲಿ ಕಾಣಿಸಿಕೊಳ್ಳುತ್ತಿರಲಿಲ್ಲ. ಆದರೆ, ಆ ಲಾಭವು ಬಳಕೆಯಾಗುವ ರೀತಿಯು ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ. ಹೇಗೆಂಬುದನ್ನು ಈ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು: ಒಂದು ಕಂಪೆನಿಯು ತನ್ನ ಕಾರ್ಯಾಚರಣೆಯ ವಿಸ್ತರಣೆಗಾಗಿ ತನ್ನ ಷೇರುಗಳನ್ನು ಪ್ರಾಥಮಿಕ ಮಾರುಕಟ್ಟೆಯಲ್ಲಿ ಮಾರುತ್ತದೆ. ಅದರಿಂದ ಬಂದ ಹಣವು ಕಂಪೆನಿಯ ಕೆಲವು ಉದ್ದೇಶಗಳಿಗೆ/ಚಟುವಟಿಕೆಗಳಿಗೆ ವಾಸ್ತವವಾಗಿ ಬಳಕೆಯಾಗುತ್ತದೆ. ಆದರೆ, ಆ ಕಂಪೆನಿಯ ಷೇರನ್ನು ಕೊಂಡ ವ್ಯಕ್ತಿಯು ಅದನ್ನು ಎರಡನೆಯ ಹಂತದ ಮಾರುಕಟ್ಟೆಯಲ್ಲಿ ಒಬ್ಬ ವಿದೇಶಿ ಪೋರ್ಟ್‌ಫೋಲಿಯೋ ಹೂಡಿಕೆದಾರನಿಗೆ ಹೆಚ್ಚಿನ ಲಾಭಕ್ಕೆ ಮಾರುತ್ತಾನೆ. ಆ ಲಾಭವು ಕೇವಲ ಒಂದು ಹಣ ಗಳಿಕೆಯಾಗುತ್ತದೆ. ಅದೊಂದು ವೈಯುಕ್ತಿಕ– ಜೂಜುಗಾರ ಗಳಿಕೆಯೇ ವಿನಃ ಸಮಾಜಕ್ಕೆ ಉಪಯೋಗವಾಗುವಂತಹ ವಾಸ್ತವಿಕ ಚಟುವಟಿಕೆಯಲ್ಲ. ವಿದೇಶಿ ಪೋರ್ಟ್‌ಫೋಲಿಯೋ ಹೂಡಿಕೆದಾರರು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಗಳಿಸುವ ಲಾಭವೂ ಇದೇ ಸ್ವರೂಪದ್ದೇ ಆಗಿರುತ್ತದೆ. ಅದರಿಂದ ದೇಶಕ್ಕೆ ಹೆಚ್ಚು ಹಾನಿಯಾಗಿದೆ.

ಆದರೆ, ವಿದೇಶಿ ನೇರ ಹೂಡಿಕೆಯು(ಎಫ್‌ಡಿಐ) ದೇಶದ ಮೇಲೆ ಉಂಟುಮಾಡುವ ಪರಿಣಾಮಗಳು ವಿದೇಶಿ ಪೋರ್ಟ್‌ಫೋಲಿಯೋ ಹೂಡಿಕೆಗಿಂತ ಸಂಪೂರ್ಣವಾಗಿ ಭಿನ್ನವಾಗಿರುತ್ತವೆ. ಆದಿಯಿಂದ ಅಂತ್ಯದವರೆಗೆ ಸಕಲವನ್ನೂ ಹೊಂದಿಸಿಕೊಂಡು ಹೊಸದಾಗಿ ನಿರ್ಮಿಸುವ ಒಂದು ಯೋಜನೆಯೇ ಇರಲಿ, ಅಥವಾ, ಅಸ್ತಿತ್ವದಲ್ಲಿರುವ ಒಂದು ಉದ್ದಿಮೆಯ ಒಡೆತನವನ್ನು ಸ್ವಾಧೀನ ಪಡಿಸಿಕೊಳ್ಳುವ (ಕೊಳ್ಳುವ) ಮೂಲಕವೇ ಇರಲಿ, ವಿದೇಶಿ ಬಂಡವಾಳವು ನೇರವಾಗಿ ಇಂತಹ ಚಟುವಟಿಕೆಗಳ ಮೇಲೆ ಹೂಡಿಕೆಯಾದಾಗ ಉಂಟಾಗುವ ಪರಿಣಾಮಗಳು ಸಕಾರಾತ್ಮಕವಾಗಿರುತ್ತವೆ. ಅಂದರೆ, ದೇಶದ ಆರ್ಥಿಕ ಅಭಿವೃದ್ಧಿಗೆ ಎಫ್‌ಡಿಐ ಪೂರಕವಾಗಿದ್ದರೆ, ಪೋರ್ಟ್‌ಫೋಲಿಯೋ ಹೂಡಿಕೆಗಳು ದೇಶದ ಆರ್ಥಿಕ ಅಭಿವೃದ್ಧಿಗೆ ಮಾರಕ. ಈ ಅಂಶವನ್ನು ಗಮನದಲ್ಲಿಟ್ಟು ಕೊಂಡು ನೋಡಿದರೆ, 1991 ರಿಂದ ಹಿಡಿದು ಇತ್ತೀಚಿನವರೆಗೆ ನಮ್ಮ ದೇಶಕ್ಕೆ ಹರಿದು ಬಂದಿರುವ ವಿದೇಶಿ ಬಂಡವಾಳದಲ್ಲಿ ಉಪಯುಕ್ತ ಎಂದು ಹೇಳಬಹುದಾದ ಎಫ್‌ಡಿಐನ ಒಟ್ಟು ಪ್ರಮಾಣ ದೊಡ್ಡದೇನಲ್ಲ. ಆದರೆ, ಅದರ ಐದು ಪಟ್ಟು ದೊಡ್ಡ ಮೊತ್ತದ ವಿದೇಶಿ ಹಣ ಪೋರ್ಟ್‌ಫೋಲಿಯೋ ರೂಪದ ಬಂಡವಾಳವಾಗಿ (ಎಫ್‌ಐಐ) ಒಳ ಹರಿದಿದೆ. ಎಫ್‌ಐಐ ದೇಶಕ್ಕೆ ನಿರುಪಯುಕ್ತವಾದ ಹೂಡಿಕೆ ಎನ್ನುವುದರಲ್ಲಿ ಎರಡು ಮಾತಿಲ್ಲ.



ಈ ಅಂಶಗಳಿಂದಾಗಿ, ನಮ್ಮ ದೇಶದ ಎಫ್‌ಡಿಐ ನೀತಿಯಲ್ಲಿ ಎಪ್ರಿಲ್ 17ರಂದು ಮಾಡಲಾಗಿರುವ ಕೆಲವು ಬದಲಾವಣೆಗಳು ಸ್ವಲ್ಪ ಮಟ್ಟಿನ ಆತಂಕ ಹುಟ್ಟಿಸುತ್ತವೆ. ಸರ್ವವ್ಯಾಪಿ ಮತ್ತು ತೀವ್ರ ಅಪಾಯಕಾರಿ ಕೊರೋನಾ ಅಂಟು ರೋಗವು ಇಡೀ ವಿಶ್ವವನ್ನು ಪೀಡಿಸುತ್ತಿರುವ ಸನ್ನಿವೇಶದಲ್ಲಿ, ಭಾರತದ ಕಂಪೆನಿಗಳನ್ನು ಸ್ವಾಧೀನಪಡಿಸಿಕೊಳ್ಳುವ/ನುಂಗುವ ಅವಕಾಶವಾದಿ ಪ್ರಯತ್ನಗಳನ್ನು ಹತ್ತಿಕ್ಕುವ ಸಲುವಾಗಿ ಸರ್ಕಾರವು ತನ್ನ ಎಫ್‌ಡಿಐ ನೀತಿಯನ್ನು ಪರಾಮರ್ಶೆಗೆ ಒಳಪಡಿಸಿ, ಕೆಲವು ಬದಲಾವಣೆಗಳನ್ನು ಜಾರಿಗೆ ತಂದಿರುವುದಾಗಿ ಹೇಳಿದೆ. ಈ ತಿದ್ದುಪಡಿಗಳ ಪ್ರಕಾರ, "ಭಾರತದ ಯಾವುದೇ ಸಂಸ್ಥೆಯಲ್ಲಿ ಅನುಕೂಲಕರ ಒಡೆತನದ ಹೂಡಿಕೆ ಮಾಡಿರುವ ಮತ್ತು ಭಾರತದ ಭೂ ಭಾಗದೊಂದಿಗೆ ಗಡಿ ಹಂಚಿಕೊಂಡಿರುವ ಯಾವುದೇ ದೇಶದ ಒಂದು ಸಂಸ್ಥೆಯು ಅಥವಾ ಆ ದೇಶದಲ್ಲಿ ನೆಲೆಸಿರುವ ವ್ಯಕ್ತಿಯು ಅಥವಾ ಆ ದೇಶದ ಪ್ರಜೆಯು, ಇನ್ನು ಮುಂದೆ, ಭಾರತ ಸರ್ಕಾರದ ಅನುಮತಿ ಪಡೆದ ನಂತರವೇ ಹೂಡಿಕೆ ಮಾಡಬಹುದು". ಅಲ್ಲದೆ, ಈಗಾಗಲೇ ಅಸ್ತಿತ್ವದಲ್ಲಿರುವ ಅನುಕೂಲಕರ ಒಡೆತನದ ವಿದೇಶಿ ನೇರ ಹೂಡಿಕೆಯ ಸಂಸ್ಥೆಯಲ್ಲಿ ಅಥವಾ ಅಂತಹ ಸಂಸ್ಥೆಯಲ್ಲಿ ಮುಂದೆ ಮಾಡಬಹುದಾದ ಇಂತಹ ಹೂಡಿಕೆಗಳಲ್ಲಿ ಯಾವುದೇ ಬದಲಾವಣೆ ಮಾಡಬೇಕಾದರೂ ಸರ್ಕಾರದ ಅನುಮತಿ ಪಡೆಯಬೇಕಾಗುತ್ತದೆ.

ಕೆಲವು ಆಯಕಟ್ಟಿನ ವಲಯ/ಚಟುವಟಿಕೆಗಳನ್ನು ಹೊರತುಪಡಿಸಿ, ಈ ವರೆಗೆ ಜಾರಿಯಲ್ಲಿದ್ದ ಸರ್ವಾನ್ವಯದ (ಅಡೆ–ತಡೆ ಇಲ್ಲದ ರೀತಿಯ) ಅನುಮತಿಗೆ ಹೋಲಿಸಿದರೆ, ಈ ಹೊಸ ನಿಯಮಗಳಲ್ಲಿ ಬಹಳ ದೊಡ್ಡ ವ್ಯತ್ಯಾಸವಿರುವುದು ಕಾಣುತ್ತದೆ. ಭಾರತದ ಭೂ ಭಾಗದೊಂದಿಗೆ ಗಡಿ ಹಂಚಿಕೊಂಡಿರುವ ನೆರೆಯ ದೇಶಗಳ ಎಲ್ಲ ನೇರ ಹೂಡಿಕೆಗಳನ್ನು – ಅಸ್ತಿತ್ವದಲ್ಲಿರುವ ಅಥವಾ ಮುಂದೆ ಮಾಡಬಹುದಾದ – ಪುನರ್ವಿಮರ್ಶೆಗೊಳಪಡುವ ಪ್ರಕ್ರಿಯೆಯಿಂದಾಗಿ, ಹೂಡಿಕೆಗೆ ಸರ್ಕಾರದ ಅನುಮತಿ ದೊರೆಯುವುದು ತಡವಾಗಬಹುದು, ಇಲ್ಲವೇ ಅನುಮತಿ ದೊರೆಯದೇ ಇರಬಹುದು. ನಿಯಮಗಳ ಈ ಬದಲಾವಣೆಯ ಬಗ್ಗೆ ಚೀನಾ ಕಟುವಾಗಿ ಪ್ರತಿಕ್ರಯಿಸಿದೆ. ಈ ಬದಲಾವಣೆಗಳು ತಾರತಮ್ಯತೆಯಿಂದ ಕೂಡಿವೆ ಮತ್ತು ಅವು ವಿಶ್ವ ವ್ಯಾಪಾರ ಸಂಸ್ಥೆಯ ತತ್ವಗಳಿಗೆ ವಿರೋಧವಾಗಿವೆ ಎಂಬ ಅಭಿಪ್ರಾಯವನ್ನು ಚೀನಾ ವ್ಯಕ್ತಪಡಿಸಿದೆ.

ನಮ್ಮ ನೆರೆಯ ಪಾಕಿಸ್ತಾನ, ಬಂಗ್ಲಾ ದೇಶ, ನೇಪಾಳ, ಭೂತಾನ್ ಮತ್ತು ಮೈಯನ್ಮಾರ್ ದೇಶಗಳು ನಮ್ಮ ದೇಶದಲ್ಲಿ ಮಾಡಿರುವ ನೇರ ಹೂಡಿಕೆ ನಗಣ್ಯವೇ. ಆದರೆ, ವಾಣಿಜ್ಯ ಮಂತ್ರಾಲಯ ಹೇಳಿರುವ ಪ್ರಕಾರ, 2019ರ ಜನವರಿ ಮತ್ತು ಸೆಪ್ಟೆಂಬರ್ ನಡುವಿನ ಅವಧಿಯಲ್ಲಿ, ಚೀನಾದಿಂದ 10 ಬಿಲಿಯನ್ ಡಾಲರ್‌ಗಳಿಗೂ ಅಧಿಕ ಮೊತ್ತದ ಹೂಡಿಕೆಯಾಗಿದೆ. ದೇಶಕ್ಕೆ ಹರಿದು ಬಂದಿರುವ ವಿದೇಶಿ ಬಂಡವಾಳದ ನೇರ ಹೂಡಿಕೆಯ ಒಟ್ಟಾರೆ ಮೊತ್ತಕ್ಕೆ ಹೋಲಿಸಿದರೆ, ಚೀನಾದ 10 ಬಿಲಿಯನ್ ಡಾಲರ್ ಹೂಡಿಕೆ, ಜುಜುಬಿ.

ಆದರೆ, ವಿದೇಶಿ ಬಂಡವಾಳದ ನೇರ ಹೂಡಿಕೆಗೆ ಸಂಬಂಧಿಸಿದಂತೆ ಇಲ್ಲಿ ಒತ್ತಿ ಹೇಳಬಹುದಾದ ಕೆಲವು ಆಯಾಮಗಳಿವೆ. ಅವುಗಳಲ್ಲಿ ಮೊದಲನೆಯದು, ಭಾರತದಲ್ಲಿ 2014 ಮತ್ತು 2018ರ ನಡುವೆ ಚೀನಾ ಮಾಡಿರುವ ನೇರ ಹೂಡಿಕೆಯ ವಾರ್ಷಿಕ ಸರಾಸರಿ 371 ಮಿಲಿಯನ್ (0.371 ಬಿಲಿಯನ್) ಡಾಲರ್ ಪ್ರಮಾಣವು, ಇದ್ದಕ್ಕಿದ್ದಂತೆ 2019ರ ಒಂಭತ್ತು ತಿಂಗಳುಗಳಷ್ಟು ಅಲ್ಪ ಅವಧಿಯಲ್ಲಿಯೇ 10 ಬಿಲಿಯನ್ ಡಾಲರ್ ಮಟ್ಟಕ್ಕೆ ಜಿಗಿದಿದೆ. ಎರಡನೆಯದು, ಹಣಕಾಸು ಚಟುವಟಿಕೆಗಳ ಕೇಂದ್ರ ಸ್ಥಾನಗಳಾದ ಕೇಮನ್ ದ್ವೀಪದಿಂದ 119 ಬಿಲಿಯನ್ ಡಾಲರ್‌ಗಳಷ್ಟು ಮತ್ತು ಮಾರಿಷಸ್ ದ್ವೀಪದಿಂದ 588 ಬಿಲಿಯನ್ ಡಾಲರ್‌ಗಳಷ್ಟು ಮೊತ್ತದ ವಿದೇಶಿ ಹಣ ಇದೇ 2019ರ ಜನವರಿ ಮತ್ತು ಸೆಪ್ಟೆಂಬರ್ ನಡುವಿನ ಅವಧಿಯಲ್ಲಿ ಭಾರತದೊಳಕ್ಕೆ ಹರಿದು ಬಂದಿದೆ. ಈ ಹೂಡಿಕೆಯು ಸಾಚಾ ಎಫ್‌ಡಿಐ ಅಲ್ಲ ಎಂಬ ಅಂಶವನ್ನು ನಿರ್ಲಕ್ಷಿಸಿದಾಗ ಮಾತ್ರ ಚೀನಾದ ಹೂಡಿಕೆ ದೊಡ್ಡದಾಗಿ ಕಾಣುತ್ತದೆ. ಮೂರನೆಯದು, ತಿದ್ದುಪಡಿಯಾಗಿರುವ ಹೊಸ ನಿಯಮಗಳು ಚೀನಾದೊಂದಿಗೆ ಪರೋಕ್ಷ ಸಂಬಂಧ ಹೊಂದಿರುವ ಬೇರೆ ಬೇರೆ ದೇಶಗಳ ಹೂಡಿಕೆದಾರ ಏಜೆನ್ಸಿಗಳಿಗೂ ಅನ್ವಯವಾಗುವುದರಿಂದ, ಹಾಂಗ್‌ಕಾಂಗ್ (30.7 ಬಿಲಿಯನ್ ಹೂಡಿಕೆ) ಮತ್ತು ಸಿಂಗಾಪುರ ದೇಶಗಳಿಗೂ ಅನ್ವಯವಾಗುತ್ತವೆ.

ಜಾಗತಿಕ ಅರ್ಥವ್ಯವಸ್ಥೆಯು ಹಿಂಜರಿತಕ್ಕೊಳಗಾಗಿರುವ ಪ್ರಸ್ತುತ ಸನ್ನಿವೇಶದಲ್ಲಿ, ಅದರಲ್ಲೂ ವಿಶೇಷವಾಗಿ ಇಡೀ ವಿಶ್ವವೇ ಕೊರೋನಾ ಜಾಡ್ಯಕ್ಕೆ ಒಳಗಾಗಿರುವ ಪರಿಸ್ಥಿತಿಯಲ್ಲಿ, ವಿದೇಶಗಳಿಂದ ಸಾಕಷ್ಟು ಪ್ರಮಾಣದಲ್ಲಿ ನೇರ ಹೂಡಿಕೆಯಾಗುವುದಿಲ್ಲ ಎಂಬುದಂತೂ ಸ್ಪಷ್ಟವೇ. ಪೋರ್ಟ್‌ಫೋಲಿಯೋ ಹೂಡಿಕೆಗಳಿಗೆ ಹೋಲಿಸಿದರೆ, ಉತ್ಪಾದನಾ ಚಟುವಟಿಕೆಗಳಲ್ಲಿ (ಎಫ್‌ಡಿಐ) ಹೂಡಿಕೆಯಾಗುವ ಸಂಭವ ಕಡಿಮೆಯೇ. ಇತ್ತೀಚೆಗೆ, ಚೀನಾದಿಂದ ಭಾರತದಲ್ಲಿ ಹೂಡಿಕೆಯಾಗಿರುವ ಬಂಡವಾಳಕ್ಕೆ ಸಂಬಂಧಿಸಿ ಹೇಳುವುದಾದರೆ, ಅಂತಹ ಹೂಡಿಕೆಯನ್ನು ಚೀನಾದ ತಾಂತ್ರಿಕ ದಿಗ್ಗಜಗಳೆನಿಸಿದ ಅಲಿಬಾಬಾ, ಟಿಕ್–ಟೋಕ್, ಓಪ್ಪೋ, ಶಿಯೋಮಿ, ಟೆನ್ಸೆಂಟ್ ಮುಂತಾದ ಸಂಸ್ಥೆಗಳು ಭಾರತದ ಪೇಟಿಎಮ್, ಬಿಗ್‌ಬ್ಯಾಸ್ಕೆಟ್ ಮತ್ತು ಓಲಾನಂತಹ ಸಂಸ್ಥೆಗಳ ಮೇಲೆ ಮಾಡಿವೆ. ಚೀನಾದ ಕಂಪೆನಿಗಳು ಅತಿ ಹೆಚ್ಚು ಶ್ರಮ ಅವಲಂಬಿತ ವಲಯಗಳಲ್ಲಿ ಹೂಡಿಕೆ ಮಾಡಿವೆ. ಅಷ್ಟೇ ಅಲ್ಲದೆ, ಚೀನಾದ ಎಲೆಕ್ಟ್ರಿಕ್ ಕಾರು ತಯಾರಿಕಾ ಕಂಪೆನಿಗಳಾದ ಗ್ರೇಟ್ ವಾಲ್ ಮತ್ತು ಎಂಜಿ ಮೋಟಾರ್ಸ್, ಭಾರತದಲ್ಲಿ ತಮ್ಮ ತಮ್ಮ ಎಲೆಕ್ಟ್ರಿಕ್ ಕಾರು ತಯಾರಿಸುವ ಘಟಕಗಳಲ್ಲಿ ಹೂಡಿಕೆ ಮಾಡಿವೆ.

ಈ ವರೆಗೆ ಚೀನಾವು ಭಾರತದಲ್ಲಿ ಮಾಡಿರುವ

ಪುಟ 14 ನೋಡಿ

ನಗ್ನ ಕ್ರೌರ್ಯವನ್ನು ನಿಲ್ಲಿಸಲು ತುರ್ತಾಗಿ ಮಧ್ಯಪ್ರವೇಶಿಸಲು ರಾಷ್ಟ್ರಪತಿಗಳಿಗೆ ಮನವಿ

ಪ್ರಿಯ ರಾಷ್ಟ್ರಪತಿಯವರೇ,

ನಾವು, ಕೆಳಗೆ ಸಹಿ ಮಾಡಿರುವ ಭಾರತೀಯ ಸಂಸತ್ತಿನಲ್ಲಿ ಪ್ರಾತಿನಿಧ್ಯ ಹೊಂದಿರುವ ರಾಜಕೀಯ ಪಕ್ಷಗಳ ಮುಖಂಡರು, ಕೋಟ್ಯಂತರ ಭಾರತೀಯ ಕಾರ್ಮಿಕ ವರ್ಗದ ಮತ್ತು ದುಡಿಯುವ ಜನಗಳ ಭದ್ರತೆ, ಕಲ್ಯಾಣ, ಜೀವನೋಪಾಯ ಮತ್ತು ಭವಿಷ್ಯಕ್ಕೆ ಸಂಬಂಧಪಟ್ಟಿರುವ ಒಂದು ಅತ್ಯಂತ ಗಂಭೀರ ಪ್ರಶ್ನೆಯ ಮೇಲೆ ನಿಮಗೆ ಬರೆಯುತ್ತಿದ್ದೇವೆ. ನಿಜವೆಂದರೆ, ಇದು ನಮ್ಮ ಸಮಸ್ತ ದೇಶದ ಯೋಗಕ್ಷೇಮ ಮತ್ತು ಅದರ ಭವಿಷ್ಯಕ್ಕೆ ಸಂಬಂಧಪಟ್ಟಿರುವಂತದ್ದು. ಕೊವಿಡ್–19 ಮಹಾಮಾರಿಯ ಎದುರು ಹೋರಾಟದ ಮತ್ತು ದೀರ್ಘಗೊಂಡ ರಾಷ್ಟ್ರೀಯ ಲಾಕ್‌ಡೌನಿನ ಪರಿಣಾಮಗಳ ಹೆಸರಿನಲ್ಲಿ ಕಾರ್ಮಿಕ ಹಕ್ಕುಗಳನ್ನು ಮತ್ತು ಬಹುಪಾಲು ಭಾರತೀಯ ಜನತೆ ಶ್ರಮಪಟ್ಟು ಗೆದ್ದುಕೊಂಡ ಪ್ರಜಾಪ್ರಭುತ್ವ ಹಕ್ಕುಗಳನ್ನು ನಿರರ್ಥಕಗೊಳಿಸುತ್ತಿರುವುದೇ ಆ ಪ್ರಶ್ನೆ. ಸಂವಿಧಾನ–ವಿರೋಧಿ, ಅದರಿಂದಾಗಿ ನಾಡಿನ ಕಾನೂನಿಗೆ ವಿರುದ್ಧವಾದದ್ದು ಎಂದು ನಾವು ಭಾವಿಸುವ ಈ ಪ್ರಶ್ನೆಗಳತ್ತ ತಮ್ಮ ಗಮನವನ್ನು ಸೆಳೆಯುತ್ತಿದ್ದೇವೆ.

ಕೊವಿಡ್–19 ಮಹಾಮಾರಿಯ ವಿರುದ್ಧ ಸೆಣಸುವ ನೆಪವೊಡ್ಡಿ ದೇಶದ ಈಗಿರುವ ಕಾರ್ಮಿಕ ಕಾನೂನುಗಳಲ್ಲಿ ತೀವ್ರತರವಾದ ಬದಲಾವಣೆಗಳನ್ನು ಮಾಡಲಾಗುತ್ತಿದೆ, ಇವು ದುಡಿಯುವ ಜನಗಳ ಬದುಕುಗಳನ್ನು ಮತ್ತು ಯೋಗಕ್ಷೇಮವನ್ನು ಇನ್ನಷ್ಟು ಗಂಡಾಂತರಕ್ಕೆ ಈಡು ಮಾಡುತ್ತವೆ. ಈಗಾಗಲೇ ದೇಶ ರಾಷ್ಟ್ರೀಯ ಲಾಕ್‌ಡೌನನ್ನು ಜಾರಿಗೆ ತಂದಂದಿನಿಂದ ವಲಸೆ ಕಾರ್ಮಿಕರು ಪಡುತ್ತಿರುವ ಪಾಡಿನ ಅತ್ಯಂತ ಅಮಾನವೀಯ ದುರಂತಮಯ ಆಯಾಮಗಳನ್ನು ಕಾಣುತ್ತಿದೆ. ಇಂದಿನ ಪರಿಸ್ಥಿತಿಗಳು ಬದುಕಿನ ಮತ್ತು ಘನತೆಯ ಮೂಲಭೂತ ಹಕ್ಕನ್ನು ರಕ್ಷಿಸುವುದಂತಿರಲಿ, ಅವು ಬರ್ಬರವೇ ಆಗಿವೆ. ಕಳೆದ ರಾತ್ರಿ, ಮಹಾರಾಷ್ಟ್ರದಲ್ಲಿ, ಹದಿನಾರು ವಲಸೆ ಕಾರ್ಮಿಕರು, ಬಹುಪಾಲು ಬುಡಕಟ್ಟು ಜನಗಳು, ತಮ್ಮ ಮನೆಗಳಿಗೆ ಹಿಂದಿರುಗಲು ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲವಾದ್ದರಿಂದ ಸಾವಿರಾರು ಕಿಲೋಮೀಟರುಗಳಷ್ಟು ನಡೆದೇ ಹೋಗಬೇಕಾಗಿ ಬಂದವರು, ಒಂದು ಗೂಡ್ಸ್ ರೈಲಿನ ಅಡಿಯಲ್ಲಿ ಜಜ್ಜಿಯಾಗಿ ಸಾವನ್ನಪ್ಪಿದ್ದಾರೆ. ನಿರ್ಬಂಧಗಳನ್ನು ಸಡಿಲಿಸುವುದರ ಜತೆಗೆ ಇರಬೇಕಾಗಿದ್ದ ಸುರಕ್ಷಿತತೆಯ ಕ್ರಮಗಳು, ಪರಿಸರ ಕಾಳಜಿಗಳು ಇಲ್ಲ. ಇಂತಹ ನಿರ್ಲಕ್ಷ್ಯದಿಂದಾಗಿ ವಿಶಾಖಪಟ್ಟಣಂನ ಕೈಗಾರಿಕಾ ಅಪಘಾತ 12 ಜೀವಗಳನ್ನು ಬಲಿ ತೆಗೆದುಕೊಂಡಿದೆ, ನೂರಾರು ಜನರನ್ನು ಆಸ್ಪತ್ರೆಗೆ ಸೇರಿಸಬೇಕಾಗಿ ಬಂದಿದೆ. "ನಿಮ್ಮ ಸರಕಾರ" ಕಾರ್ಮಿಕರು ಸುರಕ್ಷಿತರಾಗಿರಬೇಕು, ಬದುಕುಳಿಯಬೇಕು ಎಂಬ ಕಾಳಜಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಹೀಗಿದೆ ನಮ್ಮ ದೇಶದ ಪರಿಸ್ಥಿತಿ.

ಈಗಾಗಲೇ "ನಿಮ್ಮ ಸರಕಾರ" ಈಗಿರುವ 44 ಕಾರ್ಮಿಕ ಕಾನೂನುಗಳನ್ನು ನಾಲ್ಕು ಸಂಹಿತೆಗಳಾಗಿ ಮಾಡುವ ಶಾಸನ ಪ್ರಕ್ರಿಯೆಯನ್ನು ಆರಂಭಿಸಿದೆ. ಇವುಗಳಲ್ಲಿ ಒಂದನ್ನು, ವೇತನಗಳ ಸಂಹಿತೆಯ ಮಸೂದೆಯನ್ನು ಸಂಸತ್ತು ಅಂಗೀಕರಿಸಿದೆ. ಉಳಿದವುಗಳ ಪ್ರಕ್ರಿಯೆ ಸಾಗಿದೆ. ಈ ಸಂಹಿತೆಗಳು ಶಾಸಕಾಂಗದ ಮಂಜೂರಾತಿ ಪಡೆಯುವ ಮೊದಲೇ ಈಗಿರುವ ಕಾನೂನುಗಳನ್ನು ಶಿಕ್ಷೆಯ ಯಾವುದೇ ಭಯವಿಲ್ಲದೆ ಉಲ್ಲಂಘಿಸಲಾಗುತ್ತಿದೆ. ಈ ಸಂಹಿತೆಗಳು ಶಾಸಕಾಂಗದ ಮಂಜೂರಾತಿ ಪಡೆದ ನಂತರ, ಕಾರ್ಯಾಂಗ, ಅಂದರೆ ಸರಕಾರ ಒಂದು ಕಾರ್ಯಾಂಗದ ಆದೇಶದ ಮೂಲಕ ಇವನ್ನು ಬದಲಿಸಬಹುದು, ಅದಕ್ಕೆ ಸಂಸತ್ತು ಅಥವ ರಾಜ್ಯ ಶಾಸನ ಸಭೆಗಳನ್ನು ಕೇಳಬೇಕಾದ ಅಗತ್ಯವಿರುವುದಿಲ್ಲ. ಇದು ಸಂಪೂರ್ಣವಾಗಿ ಕಾರ್ಮಿಕ–ವಿರೋಧಿ ಮತ್ತು ಕರಾಳ.

ಮಹಾಮಾರಿಯ ವಿರುದ್ಧ ಸಮರದ ನೆಪವೊಡ್ಡಿ ದೈನಂದಿನ ಕೆಲಸದ ಅವಧಿಯನ್ನು ಹಲವು ರಾಜ್ಯಗಳಲ್ಲಿ ಒಂದು ಕಾರ್ಯಾಂಗದ ಆದೇಶದ ಮೂಲಕ ಎಂಟು ಗಂಟೆಗಳಿಂದ ಹನ್ನೆರಡು ಗಂಟೆಗಳಿಗೆ ಏರಿಸಲಾಗಿದೆ. ಗುಜರಾತ್, ಮಧ್ಯಪ್ರದೇಶ, ಹರ್ಯಾಣ, ಹಿಮಾಚಲ ಪ್ರದೇಶ, ರಾಜಸ್ಥಾನ ಮತ್ತು ಪಂಜಾಬಿನಲ್ಲಿ ಕಾರ್ಖಾನೆಗಳ ಕಾಯ್ದೆಯನ್ನು ತಿದ್ದುಪಡಿ ಮಾಡದೆಯೇ ಇದನ್ನು ಮಾಡಲಾಗಿದೆ. ಈ ಪಟ್ಟಿ ಬೆಳೆಯುತ್ತಿದೆ, ಇನ್ನೂ ಕೆಲವು ರಾಜ್ಯಗಳು ಈ ಪಟ್ಟಿಯನ್ನು ಸೇರಿಕೊಳ್ಳುವ ಸಾಧ್ಯತೆ ಇದೆ. ಉತ್ತರಪ್ರದೇಶದ ರಾಜ್ಯ ಸರಕಾರ ಮೂರನ್ನು ಬಿಟ್ಟು ಎಲ್ಲ ಕಾರ್ಮಿಕ ಕಾನೂನುಗಳನ್ನು, ಮೂರು ವರ್ಷಗಳ ಅವಧಿಗೆ ಅಮಾನತುಗೊಳಿಸಿದೆ. ಅದೇ ರೀತಿಯಲ್ಲಿ, ಮಧ್ಯಪ್ರದೇಶ ಸರಕಾರ ಒಂದು ಸಾವಿರ ದಿನಗಳ ವರೆಗೆ ಎಲ್ಲ ಸಂಸ್ಥೆಗಳಿಗೆ ಎಲ್ಲ ಕಾರ್ಮಿಕ ಕಾನೂನುಗಳ ಬಾಧ್ಯತೆಗಳಿಂದ ವಿನಾಯ್ತಿ ನೀಡುವ ಒಂದು ಸಂಪುಟ ನಿರ್ಣಯವನ್ನು ಪ್ರಕಟಿಸಿದೆ. ಕಾರ್ಮಿಕರು ತಮ್ಮನ್ನು ಸಂಘಗಳಾಗಿ ಸಂಘಟಿಸಿಕೊಳ್ಳುವ ಮೂಲಭೂತ ಹಕ್ಕಿಗೆ ಕೂಡ ಗಂಭೀರ ಬೆದರಿಕೆ ಬಂದಿದೆ.

ಕೇಂದ್ರದಲ್ಲಿನ "ನಿಮ್ಮ ಸರಕಾರ" ಮತ್ತು ಕೆಲವು ರಾಜ್ಯ ಸರಕಾರಗಳು ನಮ್ಮ ಆರೋಗ್ಯ ಸೌಲಭ್ಯಗಳನ್ನು ಹೆಚ್ಚಿಸಿಕೊಂಡು ಮತ್ತು ನಮ್ಮ ಡಾಕ್ಟರುಗಳು ಮತ್ತು ಆರೋಗ್ಯ ಕಾರ್ಯಕರ್ತರನ್ನು ಕಾಪಾಡಿಕೊಂಡು ಹಾಗೂ ಜನಗಳ ಅಗತ್ಯಗಳ ಬಗ್ಗೆ ಕಾಳಜಿ ವಹಿಸಿ ಮಹಾಮಾರಿಯ ವಿರುದ್ಧ ಸಮರದ ಮೇಲೆ ಗಮನ ಕೇಂದ್ರೀಕರಿಸುವ ಬದಲು ಕಾರ್ಮಿಕ ಹಕ್ಕುಗಳನ್ನು ದುರ್ಬಲಗೊಳಿಸುವ ತರ್ಕವನ್ನು ಬಳಸುವಂತೆ ಕಾಣುತ್ತದೆ.

ಇವೆಲ್ಲವನ್ನೂ ರಾಷ್ಟ್ರೀಯ ಲಾಕ್‌ಡೌನಿನಿಂದಾಗಿ ಉಂಟಾದ ಕಷ್ಟಗಳಿಂದ ನಮ್ಮ ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಹೆಸರಿನಲ್ಲಿ ಮಾಡಲಾಗುತ್ತಿದೆ. ಭಾರತೀಯ ಅರ್ಥವ್ಯವಸ್ಥೆ ಮಹಾಮಾರಿ ಎರಗುವ ಮೊದಲೇ ಒಂದು ಹಿಂಜರಿತದತ್ತ ಜಾರುತ್ತಿತ್ತು ಎಂದು ನಾವು ಇಲ್ಲಿ ಸೇರಿಸಬಹುದು.

"ನಿಮ್ಮ ಸರಕಾರ" ತಮ್ಮ ಎಲ್ಲ ಜೀವನಾಧಾರಗಳನ್ನು ಮತ್ತು ತಮ್ಮ ಹಸಿವಿನ ಅಗತ್ಯಗಳನ್ನು ಪೂರೈಸಿಕೊಳ್ಳುವ ಎಲ್ಲ ಸಾಮರ್ಥ್ಯವನ್ನು ಕಳಕೊಂಡಿರುವ ಜನತೆಯನ್ನು ನೋಡಿಕೊಳ್ಳಲು ಮಾಡಿದ್ದೇನೂ ಇಲ್ಲ. ಜನಗಳು ನರಳುತ್ತಿದ್ದಾರೆ. ಲಾಕ್‌ಡೌನ್ ಆರಂಭವಾದ ಮೇಲೆ 14 ಕೋಟಿ ಮಂದಿ ತಮ್ಮ ಉದ್ಯೋಗಗಳನ್ನು ಕಳಕೊಂಡಿದ್ದಾರೆ. ಭಾರತದಲ್ಲಿ ಈ ಮಾರಣಾಂತಿಕ ವೈರಸ್ ಸೋಂಕಿನಿಂದ ಸಾವುಗಳಿಗಿಂತ ಹಸಿವು, ಉಪವಾಸ, ಬಡತನ ಮತ್ತು ವಂಚನೆಯಿಂದಲೇ ಹೆಚ್ಚು ಸಾವುಗಳು ಸಂಭವಿಸಲು ಬಿಡಬಾರದು ಎಂಬುದನ್ನು ತಾವೂ ಕೂಡ ಖಂಡಿತವಾಗಿಯೂ ಒಪ್ಪುತ್ತೀರಿ.

ವಿವಿಧ ರಾಜ್ಯಗಳಲ್ಲಿ ವಲಸೆ ಕಾರ್ಮಿಕರೊಂದಿಗೆ ನಡೆದುಕೊಳ್ಳುತ್ತಿರುವ, ಅವರಿಗೆ ಯಾವುದೇ ಬೆಂಬಲವಿಲ್ಲದೆ ನರಳು ಬಿಡುತ್ತಿರುವ ರೀತಿ ಖಂಡನೀಯ. ಈಗಂತೂ ಮನೆಗೆ ಹಿಂದಿರುಗುವ ಪ್ರಯಾಣದ ವೆಚ್ಚವನ್ನೂ ಅವರಿಂದಲೇ ವಸೂಲಿ ಮಾಡಲಾಗುತ್ತಿದೆ. ಇದರಲ್ಲಿ ಕೇರಳ ಮಾತ್ರವೇ ಗೌರವಾರ್ಹ ಅಪವಾದ. ಹಲವು ರಾಜ್ಯಗಳು ವಲಸೆ ಕಾರ್ಮಿಕರ ಚಲನವಲನಗಳ ಮೇಲೂ ನಿರ್ಬಂಧಗಳನ್ನು ಹಾಕಿವೆ. ಅವರನ್ನು ಜೀತದಾಳುಗಳಂತೆಯೇ ನಡೆಸಿಕೊಳ್ಳುತ್ತಿವೆ.

ಭಾರತ, ಒಂದು ಚೈತನ್ಯಪೂರ್ಣ ಆಧುನಿಕ ಜಾತ್ಯತೀತ ಪ್ರಜಾಸತ್ತಾತ್ಮಕ ಗಣತಂತ್ರದತ್ತ ಚಲಿಸುವ ಬದಲು, ಇಂದು ಮಧ್ಯಯುಗದ ಬರ್ಬರತೆ ಮತ್ತು ಗುಲಾಮಿಕೆಯತ್ತ ತಳ್ಳಲ್ಪಡುತ್ತಿದೆ. ಇದು ಸರಳ ಸಂಗತಿ, ಮಾನನೀಯ ರಾಷ್ಟ್ರಪತಿಗಳೇ, ಕಾರ್ಮಿಕರು ಭಾರತೀಯ ಸಂವಿಧಾನದ ಅಡಿಯಲ್ಲಿ ಗುಲಾಮರಲ್ಲ. ಅವರನ್ನು ಈ ಮಟ್ಟಕ್ಕೆ ಇಳಿಸುವುದು ಸಂವಿಧಾನದ ಉಲ್ಲಂಘನೆಯಷ್ಟೇ ಅಲ್ಲ, ಅದನ್ನು ನಿರರ್ಥಕಗೊಳಿಸಿದಂತೆಯೇ.

ನಾವು, ಈ ಕೆಳಗೆ ಸಹಿ ಮಾಡಿದವರು, ನೀವು ಭಾರತದ ರಾಷ್ಟ್ರಪತಿಗಳಾಗಿ ಅಧಿಕಾರ ಸ್ವೀಕರಿಸುವಾಗ ತೆಗೆದುಕೊಂಡ ಪ್ರತಿಜ್ಞೆಗೆ ವಿಧೇಯರಾಗಿ, ಈ ಮಹಾಮಾರಿಯನ್ನು ಎದುರಿಸುವಲ್ಲಿ ಮತ್ತು ಸೋಲಿಸುವಲ್ಲಿ ನಮ್ಮ ಎಲ್ಲ ಜನಗಳ ಐಕ್ಯತೆ ನಮ್ಮ ಅತಿ ದೊಡ್ಡ ಶಕ್ತಿಯಾಗಿರಬೇಕಾದ ಈ ನಿರ್ಣಾಯಕ ತಿರುವಿನಲ್ಲಿ, ಕಾರ್ಮಿಕ ವರ್ಗ ಮತ್ತು ದುಡಿಯುವ ಜನಗಳ ವಿರುದ್ಧ ಇಂತಹ ನಗ್ನ ಕ್ರೌರ್ಯವನ್ನು ನಿಲ್ಲಿಸಲು ತುರ್ತಾಗಿ ಮಧ್ಯಪ್ರವೇಶಿಸಬೇಕು ಎಂದು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

ಆರ್ಥಿಕ ಕ್ರಮವೇ ಅಥವಾ..

ಪುಟ 13 ರಿಂದ

ಹೂಡಿಕೆಗಳು ಭಾರತದ ಉದ್ಯೋಗ ಸೃಷ್ಟಿಯಲ್ಲಿ ನೆರವಾಗಿವೆ; ಜೂಜುಕೋರ ಪೋರ್ಟ್‌ಫೋಲಿಯೋ ರೂಪದ ಬಂಡವಾಳವಾಗಿ (ಎಫ್‌ಐಐ) ಅಲ್ಲ. ನಮ್ಮ ಹೆಚ್‌ಡಿಎಫ್‌ಸಿ ಬ್ಯಾಂಕಿನ ಪ್ರತಿ ಶತ 0.3 ರಷ್ಟು ಷೇರುಗಳನ್ನು ಇತ್ತೀಚೆಗೆ ಪೀಪಲ್ಸ್ ಬ್ಯಾಂಕ್ ಆಫ್ ಚೈನಾ ಹೆಚ್ಚಿಸಿಕೊಂಡು ಹೆಚ್‌ಡಿಎಫ್‌ಸಿ ಬ್ಯಾಂಕಿನಲ್ಲಿ ತನ್ನ ಹೂಡಿಕೆಯನ್ನು ಪ್ರತಿ ಶತ 1.1 ಗೆ ಏರಿಸಿಕೊಂಡಿರುವ ಅಂಶವು, ಬಹುಷಃ, ಭಾರತ ಸರ್ಕಾರವನ್ನು ಮುಜುಗರಪಡಿಸಿದ ಕಾರಣದಿಂದಾಗಿ, ಸರ್ಕಾರವು ಈ ರೀತಿಯ ತಿದ್ದುಪಡಿಗಳನ್ನು ಮಾಡಲು ಮುಂದಾಗಿರಬಹುದು. ಆದರೆ. ಹೆಚ್‌ಡಿಎಫ್‌ಸಿ ಬ್ಯಾಂಕಿನಲ್ಲಿ ತನ್ನ ಹೂಡಿಕೆಯನ್ನು ಪ್ರತಿ ಶತ 1.1 ಗೆ ಏರಿಸಿಕೊಂಡಿರುವ ಅಂಶದಿಂದ ಪೀಪಲ್ಸ್ ಬ್ಯಾಂಕ್ ಆಫ್ ಚೈನಾಗೆ ಹೆಚ್‌ಡಿಎಫ್‌ಸಿ ಬ್ಯಾಂಕನ್ನು ಸ್ವಾಧೀನಪಡಿಸಿಕೊಳ್ಳಲು ಅಥವಾ ಅದರ ಆಡಳಿತ ಸೂತ್ರ ಹಿಡಿಯುವ ಅರ್ಹತೆ ಲಭ್ಯವಾಗುವುದಿಲ್ಲ ಮತ್ತು ಹೆಚ್‌ಡಿಎಫ್‌ಸಿ ಬ್ಯಾಂಕಿನ ಷೇರುಗಳ ಮೇಲೆ ಹೂಡಿಕೆ ಮಾಡಿರುವ 2000ದಷ್ಟು ಸಂಖ್ಯೆಯ ವಿದೇಶಿ ಸಾಂಸ್ಥಿಕ ಹೂಡಿಕೆದಾರರಲ್ಲಿ ಪೀಪಲ್ಸ್ ಬ್ಯಾಂಕ್ ಆಫ್ ಚೈನಾವೂ ಒಂದು ಎಂಬುದಾಗಿ ಹೆಚ್‌ಡಿಎಫ್‌ಸಿ ಬ್ಯಾಂಕಿನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೇಕಿ ಮಿಸ್ತ್ರಿ ಹೇಳಿದ್ದಾರೆ.

ವಿಶ್ವದ ಎರಡನೆಯ ದೊಡ್ಡ ಅರ್ಥವ್ಯವಸ್ಥೆಯಾಗಿ ಹೊರ ಹೊಮ್ಮಿರುವ ಚೀನಾವನ್ನು ಮೂಲೆಗೆ ತಳ್ಳುವ ಪ್ರಯತ್ನದ ಮುಂದಾಳತ್ವವನ್ನು ಅಮೇರಿಕಾ ವಹಿಸಿದೆ. ಭಾರತ ಅಮೇರಿಕಾವನ್ನು ಹಿಂಬಾಲಿಸುತ್ತಿದೆ. ಹಾಗಾಗಿ, ಚೀನಾವನ್ನೇ ಗುರಿಯಾಗಿಸಿ, ವಿದೇಶಿ ಬಂಡವಾಳ ಹೂಡಿಕೆಯ ನೀತಿಗಳನ್ನು ತಿದ್ದುಪಡಿ ಮಾಡಿರುವುದು ರಾಜಕೀಯವೇ ಹೊರತು ಉದ್ಯೋಗ ಒದಗಿಸುವ ಸಧೃಡ ಆರ್ಥಿಕ ನೀತಿಯಂತೂ ಅಲ್ಲ.

ಉಕ್ಕೇರಿದ ಕಾರ್ಮಿಕ ವರ್ಗದ ಹೋರಾಟಗಳ ಅಲೆ–1946

ಪುಟ 11 ರಿಂದ

ಮುಷ್ಕರ ಕೊನೆಗೊಂಡಿತು.

ಅದೇ ಸಮಯದಲ್ಲಿ, ಈಶಾನ್ಯ ರೈಲ್ವೇ ಕಾರ್ಮಿಕರು ಮುಷ್ಕರ ಶುರುಮಾಡಿದರು. ಈ ಮುಷ್ಕರದಲ್ಲಿ ಕೂಡ, ಕಮ್ಯುನಿಸ್ಟರು ಮತ್ತು ಎಐಟಿಯುಸಿ ಮುಂದೆ ನಿಂತು ನಾಯಕತ್ವ ನೀಡಿದರು. ಈ ಹಲವಾರು ಹೋರಾಟಗಳಲ್ಲಿ ಕಾರ್ಮಿಕರ ಪರವಾಗಿ ಗಟ್ಟಿಯಾಗಿ ನಿಂತು ತಮ್ಮ ಬದ್ಧತೆಯನ್ನು ತೋರಿದ್ದರಿಂದ ಕಮ್ಯುನಿಸ್ಟರು ಕಾರ್ಮಿಕರ ದೊಡ್ಡ ವಿಭಾಗದ ವಿಶ್ವಾಸ ಗಳಿಸಿದರು. ಈಶಾನ್ಯ ರೈಲ್ವೇಯಲ್ಲಿನ ಮುಸ್ಲಿಂ ಲೀಗ್ ನೇತೃತ್ವದ ಸಂಘವನ್ನೂ ಹಿಂದೆ ಹಾಕಿ ಅವರು ಮುನ್ನುಗ್ಗಲು ಸಾಧ್ಯವಾಯಿತು. ವಾಯುವ್ಯ ಪ್ರದೇಶದಲ್ಲಿ ದೇಶವಿಭಜನೆಯ ಸಂದರ್ಭದಲ್ಲಿ ಕಮ್ಯುನಿಸ್ಟರ ನೇತೃತ್ವದ ಕಾರ್ಮಿಕರು ಅತ್ಯಂತ ಧೈರ್ಯದಿಂದ ಕೋಮುಗಲಭೆಗಳ ವಿರುದ್ಧ ಸೆಣಸಿದರು.

ಬೊಂಬಾಯಿ, ಕಾನ್ಪುರ, ಢಾಕ್ಕಾ ಮತ್ತು ನಾಗಪುರದ ಜವಳಿ, ಬಿಹಾರದ ಗಿರಿಧ್‌ನಲ್ಲಿನ ಕಲ್ಲಿದ್ದಲು ಗಣಿ, ಮೈಸೂರು ಸಂಸ್ಥಾನದ ಕೋಲಾರದ ಚಿನ್ನದ ಗಣಿ, ಕಲ್ಕತ್ತಾ ಬಂದರಿನ ಕಾರ್ಮಿಕರ ಹೋರಾಟಗಳು ಕಾರ್ಮಿಕ ವರ್ಗದ ಇತರೆ ಗಮನಾರ್ಹ ಹೋರಾಟಗಳಾಗಿದ್ದವು. ಇವುಗಳಲ್ಲದೇ, ರಾಜರುಗಳ ಸಂಸ್ಥಾನಗಳಲ್ಲಿನ ಕಾರ್ಮಿಕ ವರ್ಗದ ಉಕ್ಕೇರಿದ ಹೋರಾಟಗಳು ಹಿಂದೆಂದಿಗಿಂತಲೂ ದೊಡ್ಡ ಪ್ರಮಾಣದಲ್ಲಿದ್ದವು. ತಿರುವಾಂಕೂರು, ಹೈದರಾಬಾದ್, ಮೈಸೂರು, ಇಂದೋರ್, ಮತ್ತಿ ಇತರ ರಾಜರುಗಳ ಸಂಸ್ಥಾನಗಳಲ್ಲಿ ಮುಷ್ಕರಗಳು ನಡೆದವು. ತಿರುವಾಂಕೂರು ಮತ್ತು ಹೈದರಾಬಾದಿನ ಕಾರ್ಮಿಕವರ್ಗದ ಹೋರಾಟಗಳು ಪುನ್ನಪ್ರ–ವಯಲಾರ್ ಹಾಗೂ ತೆಲಂಗಾಣ ರೈತ ಚಳುವಳಿಗಳಲ್ಲಿ ಗುರುತರವಾದ ಪಾತ್ರ ವಹಿಸಿದ್ದವು.

ಈ ಅವಧಿಯಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಹಾಗೂ ಕಾಂಗ್ರೆಸ್ಸೇತರ ಸರ್ಕಾರಗಳು, ಕಾರ್ಮಿಕರ ಸಮಸ್ಯೆಗಳನ್ನು ಶಮನಗೊಳಿಸಲು ಕ್ರಮ ತೆಗೆದುಕೊಳ್ಳುವ ಬದಲು, ಅವರನ್ನು ವಿರೋಧಿಸುವ ಮೂಲಕ ಇನ್ನೂ ಜಟಿಲಗೊಳಿಸಿದವು. ಮುಷ್ಕರ ಮಾಡದಿರುವಂತೆ ಅವು ಬುದ್ಧಿವಾದ ಹೇಳಿದವು. ಇವು ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್‌ನ ಒಟ್ಟಾರೆ ಬಂಡವಾಳಶಾಹಿ ಧೋರಣೆಯನ್ನು ಪ್ರತಿಬಿಂಬಿಸಿದವು. ಬೊಂಬಾಯಿಯ ಕಾಂಗ್ರೆಸ್ ಸರ್ಕಾರವು ಒಂದು ಹೆಜ್ಜೆ ಮುಂದೆ ಹೋಗಿ ಪಕ್ಕಾ ಪ್ರಜಾಪ್ರಭುತ್ವ–ವಿರೋಧಿ ಹಾಗೂ ಕಾರ್ಮಿಕ ವರ್ಗ–ವಿರೋಧಿಯಾದ ಕೈಗಾರಿಕಾ ಸಂಬಂಧ ಕಾಯಿದೆ, 1946(ಇಂಡಸ್ಟ್ರಿಯಲ್ ರಿಲೇಷನ್ಸ್ ಆಕ್ಟ್, 1946)ನ್ನು ಅಂಗೀಕರಿಸಿತು. ಸಹಜವಾಗಿಯೇ, ಕಾರ್ಮಿಕ ಸಂಘಗಳು ಈ ಕ್ರಮಗಳನ್ನು ಪ್ರತಿಭಟಿಸಿದವು ಮತ್ತು ತಮ್ಮ ಪ್ರಬಲ ವಿರೋಧವನ್ನು ವ್ಯಕ್ತಪಡಿಸಿದವು.

ಕಾರ್ಮಿಕ ವರ್ಗದಲ್ಲಿ ಬೆಳೆಯುತ್ತಿದ್ದ ರಾಜಕೀಯ ತಿಳುವಳಿಕೆಯು ಕಾಂಗ್ರೆಸ್ಸಿನ ಬೂರ್ಜ್ವಾ ನಾಯಕತ್ವದಲ್ಲಿ ಭೀತಿ ಹುಟ್ಟಿಸಿತು ಮತ್ತು ತಮ್ಮ ವರ್ಗ ಹಿತಾಸಕ್ತಿಯನ್ನು ರಕ್ಷಿಸುವ ಸಲುವಾಗಿ ಕಾರ್ಮಿಕ ವರ್ಗದ ಚಳುವಳಿಯನ್ನು ವಿಭಜಿಸುವ ದಾರಿ ತುಳಿಯಿತು. ಮೊದಲನೆಯ ಹೆಜ್ಜೆಯಾಗಿ, ಕಾಂಗ್ರೆಸ್ ಸಂಸ್ಥೆಯೊಳಗಿರುವ ಎಲ್ಲಾ ಕಮ್ಯುನಿಸ್ಟರನ್ನು ಹೊರಹಾಕಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಡಿಸೆಂಬರ್ 1946ರಲ್ಲಿ ನಿರ್ದೇಶನ ನೀಡಿತು. ಈ ಪ್ರಕ್ರಿಯೆಯಲ್ಲಿ ಎಐಟಿಯುಸಿಯನ್ನು ಒಡೆದು ಐ.ಎನ್.ಟಿ.ಯುಸಿ ರಚಿಸಿದರು.

ಈ ಎಲ್ಲಾ ಪ್ರಯತ್ನಗಳ ನಡುವೆಯೂ, 1946ರಲ್ಲಿ ನಡೆದ ಪ್ರಾಂತೀಯ ವಿಧಾನಸಭಾ ಚುನಾವಣೆಗಳಲ್ಲಿ, ಕಾಂಗ್ರೆಸ್ಸಿನ 3,21,607 ಮತಗಳ ಎದುರು ಕಮ್ಯುನಿಸ್ಟರು 1,12,376 ಕಾರ್ಮಿಕರ ಮತಗಳನ್ನು ಗಳಿಸಿದರು. ಕಾರ್ಮಿಕ ವರ್ಗದ ಮಧ್ಯೆ ಅವರ ಆಯ್ಕೆಯ ಪಕ್ಷವಾಗಿ ಕಮ್ಯುನಿಸ್ಟ್ ಪಕ್ಷವು ಹೊರಹೊಮ್ಮಿತು.

ಎರಡನೇ ಮಹಾಯುದ್ಧ ದುಷ್ಪರಿಣಾಮಗಳ ಹೊರೆಯನ್ನು ದುಡಿಯುವ ಜನರ ಮೇಲೇ ಹೇರಲಾಯಿತು. ಈ ದಾಳಿಗಳಿಗೆ ಪ್ರತಿರೋಧವಾಗಿ ಕಾರ್ಮಿಕ ವರ್ಗವು ದೇಶಾದ್ಯಂತ ದೊಡ್ಡ ಹೋರಾಟದ ಅಲೆಯನ್ನೇ ಎಬ್ಬಿಸಿತು. 1946ರಲ್ಲಿ ಕಾರ್ಮಿಕ ವರ್ಗವು ಎಂತಹ ಪ್ರತಿರೋಧ ಒಡ್ಡಿತು ಎಂಬುದನ್ನು ಅಸಾಧಾರಣ ರೀತಿಯಲ್ಲಿ ಎದ್ದುಬಂದ ಮುಷ್ಕರಗಳ ಸಂಖ್ಯೆಯೇ ಸಾರುತ್ತದೆ. ಮುಷ್ಕರನಿರತ ಕಾರ್ಮಿಕರ ಉಗ್ರ ಹೋರಾಟದ ಕಿಚ್ಚು ಎಷ್ಟಿತ್ತೆಂದರೆ ಪ್ರತಿಯೊಂದು ರಾಷ್ಟ್ರೀಯ ಮತ್ತು ಸಾಮ್ರಾಜ್ಯಶಾಹಿ–ವಿರೋಧಿ ವಿಷಯಗಳಲ್ಲಿ ಅದು ವ್ಯಕ್ತವಾಗಿತ್ತು. ಎಐಟಿಯುಸಿಯಲ್ಲಿದ್ದ ಕಮ್ಯುನಿಸ್ಟರು ಕಾರ್ಮಿಕರಲ್ಲಿ ಬೆಳೆಯುತ್ತಿದ್ದ ಅಸಮಾಧಾನ ಮತ್ತು ಅತೃಪ್ತಿಗಳಿಗೆ ಒಂದು ಸಂಘಟಿತ ರೂಪ ಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕಾರ್ಮಿಕ ವರ್ಗದಲ್ಲಿ ಬೆಳೆಯುತ್ತಿದ್ದ ರಾಜಕೀಯ ತಿಳುವಳಿಕೆಯು ಕಾಂಗ್ರೆಸ್ಸಿನ ಬೂರ್ಜ್ವಾ ನಾಯಕತ್ವದಲ್ಲಿ ಭೀತಿ ಹುಟ್ಟಿಸಿತು ಮತ್ತು ಅವರು ತಮ್ಮ ವರ್ಗ ಹಿತಾಸಕ್ತಿಯನ್ನು ರಕ್ಷಿಸುವ ಸಲುವಾಗಿ ಕಾರ್ಮಿಕ ವರ್ಗದ ಚಳುವಳಿಯನ್ನು ವಿಭಜಿಸುವ ದಾರಿ ತುಳಿದರು. ಆದರೂ ಈ ನಡುವೆ ಕಾರ್ಮಿಕ ವರ್ಗದ ಮಧ್ಯೆ ಅವರ ಆಯ್ಕೆಯ ಪಕ್ಷವಾಗಿ ಕಮ್ಯುನಿಸ್ಟ್ ಪಕ್ಷವು ಹೊರಹೊಮ್ಮಿತು.



ವೆನೆಜುವೆಲಾ : ಕ್ಷಿಪ್ರಕ್ರಾಂತಿಯ ಸಂಚು ಮತ್ತೊಮ್ಮೆ ವಿಫಲ

ಜಾಗದ ಸುತ್ತ

ನಾಗರಾಜ ನಂಜುಂಡಯ್ಯ

ಯು.ಎಸ್ ಬಾಡಿಗೆ ಸೈನಿಕರ ಭಯೋತ್ಪಾದಕ ಪಡೆ ವೆನೆಜುವೆಲಾದ ಬಲಪಂಥೀಯ ವಿರೋಧ ಪಕ್ಷಗಳ ಬೆಂಬಲದಿಂದ, ವೆನೆಜುವೆಲಾದಲ್ಲಿ ಅಧ್ಯಕ್ಷ ಮಡುರೊ ಸರಕಾರವನ್ನು ಉರುಳಿಸುವ ಅಥವಾ ಅಧ್ಯಕ್ಷ ಮಡುರೊ ಸೇರಿದಂತೆ ಹಿರಿಯ ನಾಯಕರ ಕೊಲೆಯ ಮೂಲಕ ಕ್ಷಿಪ್ರಕ್ರಾಂತಿಯ ಒಳಸಂಚು ನಡೆಸಿದ್ದಾರೆ. ಆದರೆ, ವೆನೆಜುವೆಲಾ ಸರಕಾರ ಮತ್ತು ಜನರು ಇದನ್ನು ಮತ್ತೊಮ್ಮೆ ವಿಫಲಗೊಳಿಸಿದ್ದಾರೆ. ಮೇ 3 ರ ರಾತ್ರಿ, ರಾಜಧಾನಿ ಕ್ಯಾರಾಕಾಸ್ ಗೆ ಉತ್ತರಕ್ಕಿರುವ ಕರಾವಳಿ ಪಟ್ಟಣವಾದ ಚುವಾವೋದಲ್ಲಿ ಬೊಲಿವಿಯಾದ ಗೆರಿಲ್ಲಾಗಳ ನೆರವಿನೊಂದಿಗೆ ವೆನೆಜುವೆಲಾದ ಭದ್ರತಾ ಪಡೆಗಳು ದೇಶಕ್ಕೆ ಪ್ರವೇಶಿಸಲು ಯತ್ನಿಸುತ್ತಿದ್ದ ವೇಗದ ದೋಣಿಯ ತುಂಬ ಇದ್ದ ಯು.ಎಸ್ ಭಯೋತ್ಪಾದಕ ಬಾಡಿಗೆ ಸೈನಿಕರ 'ಕಡಲು ದಾಳಿ'ಯನ್ನು ತಡೆದಿದ್ದಾರೆ. ದೋಣಿ ವೆನೆಜುವೇಲಾ ಪ್ರದೇಶ ಪ್ರವೇಶಿಸುತ್ತಿದ್ದಂತೆ ವೆನೆಜುವೆಲಾ ಹೆಲಿಕಾಪ್ಟರ್ ಗನ್ ಶಿಪ್ ಪಡೆಗಳು ಅವರನ್ನು ಸುತ್ತುವರೆದು ದಾಳಿ ಮಾಡಿವೆ. ಈ ದಾಳಿಯಲ್ಲಿ ಎಂಟು ಭಯೋತ್ಪಾದಕ ಬಾಡಿಗೆ ಸೈನಿಕರು ಸತ್ತಿದ್ದಾರೆ. ಇಬ್ಬರು ಭಯೋತ್ಪಾದಕರನ್ನು ಬಂದಿಸಲಾಗಿದೆ. ಇದನ್ನು 'ಆಪರೇಶನ್ ಗೌಡ್ರಿಯೊ' ಎಂದು ಕರೆಯಲಾಗಿದೆ. ಗೌಡ್ರಿಯೋ 'ಸಿಲ್ವರ್ ಕಾರ್ಪ್' ಎಂಬ ಯು.ಎಸ್ ಬಾಡಿಗೆ ಸೈನಿಕರನ್ನು ಅಮೆರಿಕದ ಮಿಲಿಟರಿಗೆ ಅಥವಾ ಯಾವುದೇ ಸಂಸ್ಥೆಗೆ ಒದಗಿಸುವ ಭದ್ರತಾ ಕಂಪನಿಯ ಮಾಲೀಕ.

ಬಂಧನದ ಸಮಯದಲ್ಲಿ ವೆನೆಜುವೆಲಾದ ಭದ್ರತಾ ಪಡೆಗಳು, ಭಯೋತ್ಪಾದಕರಿಂದ ಹೆಚ್ಚಿನ ಶಸ್ತ್ರಾಸ್ತ್ರ ಮತ್ತು ಮಿಲಿಟರಿ ಗುಪ್ತಚರ ಸಾಧನಗಳನ್ನು ವಶಪಡಿಸಿಕೊಂಡಿದ್ದಾರೆ. ಜೊತೆಗೆ, ಯುಎಸ್ ಚಿಹ್ನೆ ಹೊಂದಿರುವ ಹೆಲ್ಮೆಟ್ ಮತ್ತು ಸಮವಸ್ತ್ರ, ಮತ್ತು ಯುಎಸ್ ಧ್ವಜ ಮತ್ತು ಐಡಿ ಕಾರ್ಡ್‌ಗಳು, ಮತ್ತು ಭಯೋತ್ಪಾದಕರನ್ನು ಗುರುತಿಸುವ ಪಾಸ್‌ಪೋರ್ಟ್‌ಗಳನ್ನು ವಶಪಡಿಸಿ ಕೊಳ್ಳಲಾಗಿದೆ.



ವೆನೆಜುವೇಲಾದಲ್ಲಿ ಕ್ಷಿಪ್ರಕ್ರಾಂತಿ ನಡೆಸುವ, ಅಧ್ಯಕ್ಷ ಮಡುರೊ ರನ್ನು ಕೊಲ್ಲುವ ಅಥವಾ ಉರುಳಿಸುವ ಪ್ರಯತ್ನ ಇದು ಮೊದಲೇನಲ್ಲ, ಆದರೆ, ಈ ಬಾರಿಯ ಸಂಚಿನಲ್ಲಿ ಖಾಸಗಿ ವಿದೇಶಿ (ಯು.ಎಸ್) ಗುತ್ತಿಗೆದಾರರು ಮತ್ತು ವೆನೇಜುವೇಲಾದ ಮಿಲಿಟರಿ ಭಿನ್ನಮತಿಯರು ಕೈ ಜೊಡಿಸಿದ್ದಾರೆ. ಇದರಲ್ಲಿ, ಯುಎಸ್ ನ 'ಸಿಲ್ವರ್ ಕಾರ್ಪ್' ನ ಸಿಬ್ಬಂದಿಯಾದ ಟೆಕ್ಸಾಸ್ ನ ಇಬ್ಬರು ಮಿಲಿಟರಿ ಅಧಿಕಾರಿಗಳಾದ ಲ್ಯೂಕ್ ಡೆನ್ಮನ್ ಮತ್ತು ಐರಾನ್ ಬೆರ್ರಿ ಅವರು ಬಂಧಿತರಾಗಿದ್ದಾರೆ. ಇವರೆಲ್ಲರ ಒಂದೇ ಗುರಿ ಎಂದರೆ, ಪ್ರಜಾಸತ್ತಾತ್ಮಕವಾಗಿ ಚುನಾಯಿತರಾದ ಅಧ್ಯಕ್ಷ ಮಡುರೊ ರನ್ನು ಅಧಿಕಾರದಿಂದ ಕಿತ್ತು ಹಾಕಿ, ಯುಎಸ್ ಕೈಗೊಂಬೆ ಆಡಳಿತವನ್ನು ಅಂದರೆ ಪ್ರತಿಪಕ್ಷದ ನಾಯಕ ಜುವಾನ್ ಗೈಡೊ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ, ಅಮೆರಿಕಾ ಕೈಗೊಂಬೆಯ ಆಡಳಿತವನ್ನು ವೆನೆಜುವೆಲಾ ದಲ್ಲಿ ಸ್ಥಾಪಿಸುವುದೇ ಆಗಿದೆ. ಆದರೆ, ವೆನೆಜುವೆಲಾ ಸರಕಾರ ಮತ್ತು ಜನರು ಇವರೆಲ್ಲರ ಸಂಚನ್ನು ಮೆಟ್ಟಿ ನಿಲ್ಲುವಲ್ಲಿ ಪ್ರತಿಬಾರಿಯೂ ಗೆಲ್ಲುತ್ತಿದ್ದಾರೆ. ಈ ಬಾರಿಯು ಗೆದ್ದಿದ್ದಾರೆ ಎಂಬುದೇ ಗಮನಾರ್ಹ.

ಅಂದೇ ವೆಬ್ ನಲ್ಲಿ ಪ್ರಸಾರವಾದ ವಿಡಿಯೋವೊಂದರಲ್ಲಿ, ಈ ದಾಳಿಯನ್ನು 'ಸಿಲ್ವರ್ ಕಾರ್ಪ್' ಎಂಬ ತನ್ನ ಸಂಸ್ಥೆಯೇ ನಡೆಸಿರುವುದು ಎಂದು ಟ್ವಿಟರ್ ನಲ್ಲಿ ಜೋರ್ಡಾನ್ ಗೌಡ್ರಿಯೊ ಘೋಷಣೆ ಮಾಡಿದ್ದಾನೆ. ಮಾಜಿ ಯುಎಸ್ ನ ವಿಶೇಷ ಪಡೆಗಳ ಸೈನಿಕ ಜೋರ್ಡಾನ್ ಗೌಡ್ರಿಯೊ, ಯುಎಸ್ ನ ಫ್ಲೋರಿಡಾ ಮೂಲದ 'ಸಿಲ್ವರ್ ಕಾರ್ಪ್' ಎಂಬ ಖಾಸಗಿ ಭದ್ರತಾ ಕಂಪನಿಯನ್ನು ನಡೆಸುತ್ತಿದ್ದಾನೆ. ಅದೇ ದಿನ ಈ ಕುರಿತು ಮಾಡಿದ ಟ್ವೀಟ್ ನಲ್ಲಿ ಅಮೆರಿಕಾದ ಅಧ್ಯಕ್ಷ ಟ್ರಂಪ್ ನ್ನು ಸಹ ಟ್ಯಾಗ್ ಮಾಡಿದ್ದಾನೆ. ಹಾಗೆಯೇ, 60 ವೆನೆಜುವೆಲಾದ ಬಂಡುಕೋರರು ಮತ್ತು ಇಬ್ಬರು ಯು.ಎಸ್ ಮಾಜಿ ಸೈನಿಕರು ಒಳಗೊಂಡಂತೆ, ಈ ಕಾರ್ಯಾಚರಣೆಯ ಭಾಗವಾಗಿದ್ದರು ಎಂದು ತನ್ನ ಟ್ವೀಟ್ ನಲ್ಲಿ ಗೌಡ್ರಿಯೊ ಕೊಚ್ಚಿಕೊಂಡಿದ್ದಾನೆ. ಮರುದಿನವೇ, ಕಾರ್ಯಾಚರಣೆ ಯಲ್ಲಿ ಪಾಲ್ಗೊಂಡಿದ್ದ ಇಬ್ಬರು ಅಮೆರಿಕನ್ನರನ್ನು ಒಳಗೊಂಡಂತೆ, ದೋಣಿಯಲ್ಲಿದ್ದ ಎಲ್ಲಾ ಭಯೋತ್ಪಾದಕರನ್ನು ಬಂದಿಸಲಾಗಿದೆ ಎಂದು ವೆನೆಜುವೆಲಾ ಸರಕಾರ ಘೋಷಿಸಿದೆ.

ಜೋರ್ಡನ್ ಗೌಡ್ರಿಯೊ, ಯುಎಸ್ ನ, ಮಾಜಿ ವಿಶೇಷ ಪಡೆಗಳ ಸೈನಿಕ ಮತ್ತು ತನ್ನ ಸಾಹಸಕ್ಕಾಗಿ ಮೂರು ಬಾರಿ ಕಂಚಿನ ನಕ್ಷತ್ರ ಪದಕ ವಿಜೇತನಾಗಿದ್ದಾನೆ. ಇವನು ವೆನೆಜುವೆಲಾದ ಪ್ರತಿಪಕ್ಷದ ನಾಯಕ ಜುವಾನ್ ಗೈಡೊ ಜೊತೆಗೆ 21 ಕೋಟಿ ಡಾಲರುಗಳ ಒಂದು ಒಪ್ಪಂದಕ್ಕೆ ಸಹಿ ಹಾಕಿದ್ದಾನೆ. ಅದರಂತೆ ಮಡುರೋ ಮತ್ತು ಅವರ ಸರಕಾರವನ್ನು ಉರುಳಿಸಿ, ಜುವಾನ್ ಗೈಡೊ ರವರಿಗೆ ಅಧಿಕಾರ ಕೊಡಿಸುವುದೇ ಈ ಒಪ್ಪಂದದ ಮೂಲ ಯೋಜನೆ ಎನ್ನಲಾಗಿದೆ. ತನ್ನ ಸಂಸ್ಥೆಗೆ ಗೈಡೊ ಈ ವರೆಗೆ ಹಣ ಕೊಡದಿದ್ದರೂ, ಅವರು 'ಸ್ವಾತಂತ್ರ್ಯ ಹೋರಾಟಗಾರರು' ಆಗಿರುವುದರಿಂದ ತಾನು ತನ್ನ ಕೆಲಸ ಮುಂದುವರೆಸುವುದಾಗಿ ಯೂ ಟ್ಯೂಬ್ ನಲ್ಲಿ ಪ್ರಸಾರವಾದ ಸಂದರ್ಶದಲ್ಲಿ ಹೇಳಿದ್ದಾನೆ. ಈತ ನಡೆಸುತ್ತಿರುವ 'ಸಿಲ್ವರ್ ಕಾರ್ಪ್' ಎಂಬ ಖಾಸಗಿ ಭದ್ರತಾ ಸಂಸ್ಥೆಗೆ ಯು.ಎಸ್ ನ ಎಲ್ಲಾ ವಿಧಗಳ ಸಂಪೂರ್ಣ ಬೆಂಬಲ ಇದೆ. ಈ ಸಂಸ್ಥೆ 2018 ರಲ್ಲಿ ಸ್ಥಾಪನೆ ಯಾಯಿತು. ಇದು 50 ಕ್ಕೂ ಹೆಚ್ಚು ದೇಶಗಳಲ್ಲಿ ವಾಸ್ತವ್ಯ ಹೊಂದಿದೆ ಎಂದು ಹೇಳಲಾಗಿದೆ. ಇದರ ಉದ್ದೇಶ ಸರ್ಕಾರಗಳಿಗೆ, ಬಹುರಾಷ್ಟ್ರೀಯ ನಿಗಮಗಳಿಗೆ ಸಮಸ್ಯೆಗಳು ಒದಗಿದಾಗ ಅದಕ್ಕೆ ಮಿಲಿಟರಿ ಮೂಲಕ ಪರಿಹಾರ ಒದಗಿಸುವುದು. ಇದು ಅಮೆರಿಕದ ಮಿಲಿಟರಿ ಸಂಕೀರ್ಣದ ಅನಧಿಕೃತ ವಿಸ್ತರಣಾ ವಿಭಾಗ ಅಲ್ಲದೆ ಬೇರೇನೂ ಅಲ್ಲ. ಇದೀಗ ಇದರ ಆದ್ಯತೆಯು ವೆನೆಜುವೆಲಾದ ಮಡುರೊ ಸರ್ಕಾರವನ್ನು ಉರುಳಿಸುವುದಾಗಿದೆ.

ವೆನೆಜುವೆಲಾ ಸೈನ್ಯದ ನಿವೃತ್ತ ಮೇಜರ್ ಜನರಲ್ ಕ್ಲೈವರ್ ಅಲ್ಕಾಲಾ, ಅಧ್ಯಕ್ಷ ಮಡುರೊ ಸರ್ಕಾರದ ಜತೆ ಭಿನ್ನಾಭಿಪ್ರಾಯ ಹೊಂದಿದ್ದು 2018ರಿಂದ ಕೊಲಂಬಿಯಾ ದಲ್ಲಿ ವಾಸವಾಗಿ ಮಡುರೊ ವಿರುದ್ದ ಸಂಚು ನಡೆಸುತ್ತಿದ್ದ. ಕೊಲಂಬಿಯಾ ಕಾಡುಗಳಲ್ಲಿ ತರಬೇತಿ ಪಡೆಯುತ್ತಿರುವ ಸುಮಾರು 300 ವೆನೆಜುವೆಲಾದ ಮಿಲಿಟರಿ ಭಿನ್ನಮತಿಯರ, ಬೆಂಬಲವನ್ನು ಹೊಂದಿದ್ದ. ಗೌಡ್ರಿಯೊ ಮತ್ತು ಅಲ್ಕಾಲಾ ರವರು ಕೊಲಂಬಿಯಾ ದಲ್ಲಿ ಒಟ್ಟಿಗೆ ಕೆಲಸ ಮಾಡಲು ಪ್ರಾರಂಭಿಸಿದ. ಕಳೆದ 2019 ರಲ್ಲಿ, ಮಡುರೊ ವೆನೆಜುವೆಲಾ ಭದ್ರತಾ ಪಡೆಯ ಸಭೆಯಲ್ಲಿ ಮಾತನಾಡುತ್ತಿದ್ದಾಗ ಕೊಲ್ಲುವ ಸಂಚು ನಡೆಸಲಾಯಿತು. ಆಗ, ಈ ಇಬ್ಬರಿಗೂ ಕೊಲಂಬಿಯಾ ಸರ್ಕಾರವೇ ಪರೋಕ್ಷವಾಗಿ ಬೆಂಬಲಿಸಿತ್ತು. ಜನರಲ್ ಅಲ್ಕಾಲಾ ರ ಒಂದೇ ಅಜೆಂಡಾ, ವೆನೆಜುವೆಲಾಕ್ಕೆ ತನ್ನ ಪಡೆಗಳನ್ನು ಕಳುಹಿಸುವುದು ಮತ್ತು ಮಡುರೊ ಆಡಳಿತ ವಿರುದ್ಧ ಮಿಲಿಟರಿ ದಂಗೆಗಳನ್ನು ಉಂಟು ಮಾಡುವುದು. ಆದರೆ, ಮಾದಕ ವಸ್ತುಗಳ ಕಳ್ಳ ಸಾಗಾಣಿಕೆ ಆರೋಪದಲ್ಲಿ ಇದೀಗ ಸಿಕ್ಕಿ ಹಾಕಿಕೊಂಡು ಯು.ಎಸ್ ನಲ್ಲಿ ಸೆರೆಮನೆ ವಾಸದಲ್ಲಿ ಅಲ್ಕಾಲಾ ಕೊಳೆಯುತ್ತಿದ್ದಾನೆ.

ಈ ವಾರದ ಘಟನೆಗಳಿಂದ ವೆನೆಜುವೇಲಾ ಸರಕಾರವನ್ನು ಉರುಳಿಸುವ ಸಂಚಿಗೆ ಹಿನ್ನಡೆ ಉಂಟಾಗಿದೆ. ಆದರೆ, ಗೌಡ್ರಿಯೊ ತನ್ನ ಯೋಜನೆಯನ್ನು ಮುಂದುವರಿಸುವುದಾಗಿ ಹೇಳಿದ್ದಾನೆ. ವೆನೆಜುವೆಲಾ ಪಡೆಗಳಿಂದ ಬಂಧಿಸಲ್ಪಟ್ಟ ಇಬ್ನರು ಅಮೆರಿಕನ್ನರು, ಲ್ಯೂಕ್ ಅಲೆಕ್ಸಾಂಡರ್ ಡೆನ್ಮನ್ ಮತ್ತು ಐರಾನ್ ಬೆರ್ರಿ ಈ ಇಬ್ಬರೂ ಇರಾಕ್ ಮತ್ತು ಅಫ್ಘಾನಿಸ್ತಾನದಲ್ಲಿ ಗೌಡ್ರಿಯೊ ಜೊತೆ ಸೇವೆ ಸಲ್ಲಿಸಿದ್ದವರು. ಈ 'ಸೋಲಿಸಲ್ಪಟ್ಟ ದಾಳಿಗೆ ಯು.ಎಸ್ ನ ಸಂಪೂರ್ಣ ಬೆಂಬಲವಿದೆ' ಎಂದು ವೆನೆಜುವೆಲಾದ ಅಧ್ಯಕ್ಷ ಮಡುರೊ ಸರಕಾರ ಆರೋಪಿಸಿದೆ. ಯು.ಎಸ್ ನಾಗರಿಕರಾಗಿರುವ

ಇಬ್ಬರು ಬಂಧಿತ 'ಸಿಲ್ವರ್ ಕಾರ್ಪ್' ಅಧಿಕಾರಿಗಳ ಪಾಸ್ ಪೋರ್ಟ್ ಮತ್ತು ಕಂಪನಿ ಐಡಿಗಳನ್ನು ಅಧ್ಯಕ್ಷ ಮದುರೊ ತೋರಿಸಿದರು. ಅವರನ್ನು ವೆನೇಜುವೇಲಾದ ಕಾನೂನುಗಳ ಅನುಸಾರ ವಿಚಾರಣೆ ನಡೆಸಲಾಗುವುದು ಎಂದು ಹೇಳಿದ್ದಾರೆ. ಯು.ಎಸ್ ಮಿಲಿಟರಿ ಅವರು ತಮ್ಮ ಮಾಜಿ ಅಧಿಕಾರಿಗಳು ಎಂದು ದೃಢಪಡಿಸಿದೆ. ಆದರೆ ಟ್ರಂಪ್ ಈ ಸಂಚಿನಲ್ಲಿ ಯು.ಎಸ್ ಸರಕಾರದ ಯಾವುದೇ ಪಾತ್ರವಿಲ್ಲ ಎಂದಿದ್ದಾರೆ. ಟ್ರಂಪ್ ಆಡಳಿತದ ವಿದೇಶಾಂಗ ಸಚಿವ ಈ ಎರಡು ಯು.ಎಸ್ ನಾಗರಿಕರನ್ನು ಹಿಂದಿರುಗಿಸಬೇಕು. ಇಲ್ಲದಿದ್ದರೆ ಯಾವುದೇ ವಿಧಾನ ಅನುಸೆರಿಸಿ ಅವರನ್ನು ವಾಪಸು ತರಲಾಗುವುದು ಎಂದು ಬೆದರಿಸಿದ್ದಾರೆ.

ಆದರೆ, ವೆನೆಜುವೆಲಾ ತನ್ನ ಆರೋಪವನ್ನು ಪ್ರತಿಪಾದಿಸುತ್ತಾ, ಗೌಡ್ರಿಯೊ ನೇತೃತ್ವದ ಸಂಚಿನ ಬಗ್ಗೆ ನಮಗೆ ಅರಿವಿತ್ತು, ಅವರು ಏನು ಮಾಡುತ್ತಿದ್ದರು, ಯಾರು ಅವರಿಗೆ ಹಣಕಾಸು ಒದಗಿಸಿದ್ದಾರೆ. ಎಂಬುದು ಎಲ್ಲವೂ ನಮಗೆ ಗೊತ್ತಿತ್ತು ಎಂದು ಮಡುರೊ ಹೇಳಿದ್ದಾರೆ. ಈ ರೀತಿಯ ದಾಳಿ ಸಂವಿಧಾನಬದ್ಧವಾಗಿ ಕಾನೂನುಬದ್ಧವಾಗಿ ಚುನಾಯಿತವಾದ ಸರ್ಕಾರದ ಉರುಳಿಸಲು ನಡೆಸಿದ ಎರಡನೆಯ ಪ್ರಯತ್ನವಾಗಿದೆ. 2002 ರಲ್ಲಿ ನಡೆಸಿದ ಮೊದಲ ಪ್ರಮುಖ ಸಂಚನ್ನು ಹಿಮ್ಮೆಟ್ಟಿಸಿ ವಿಫಲಗೊಳಿಸಲಾಗಿತ್ತು.

ಕ್ಯೂಬಾವು ವೆನೆಜುವೆಲಾಕ್ಕೆ ಗುಪ್ತಚರ ಸಲಹೆ ನೀಡುತ್ತಿದೆ. ಇದನ್ನು ಬಂಡುಕೋರರು ಕಡಿಮೆ ಅಂದಾಜು ಮಾಡಿದರು. ಇಂತಹ ಅನೇಕ ದಂಗೆಗಳನ್ನು ತಡೆಯಲು ವೆನೆಜುವೆಲಾಕ್ಕೆ ಗುಪ್ತಚರ ಮಾಹಿತಿಗಳನ್ನು ಒದಗಿಸುವಲ್ಲಿ ಕ್ಯೂಬಾವು ಬೆನ್ನೆಲುಬಾಗಿದೆ ಎಂದು ವೆನೆಜುವೇಲಾದಲ್ಲಿ ಭಾರತದ ಮಾಜಿ ರಾಯಭಾರಿಯೊಬ್ಬರು ತಿಳಿಸಿದ್ದಾರೆ.

ಆದಾಗ್ಯೂ, ಜೋರ್ಡಾನ್ ಗೌಡ್ರಿಯೊ, 'ನಾವು ಸೋತಿಲ್ಲ, ನಮ್ಮ ದಾಳಿಗಳನ್ನು ಮುಂದುವರಿಸುತ್ತೇವೆ' ಎಂದಿದ್ದಾರೆ. ನಮ್ಮಲಿನ ಒಂದು ಗಾದೆಯಂತೆ, "ಕೆಳಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ". ಎಂದಂತಾಗಿದೆ. ಇಡೀ ಜಗತ್ತೇ ಕೊರೋನಾ ಮಹಾಮಾರಿಯ ವಿರುದ್ಧ ಒಟ್ಟಾಗಿ ಹೋರಾಡುವುದು ಆದ್ಯತೆಯಾಗಿರುವಾಗ ಯು.ಎಸ್ ಸರಕಾರಕ್ಕೆ, ಜನರಿಂದ ಕಾನೂನುಬದ್ಧವಾಗಿ ಆಯ್ಕೆಯಾದ ವಿದೇಶೀ ಸರಕಾರವೊಂದನ್ನು ಉರುಳಿಸಲು ಬಾಡಿಗೆ ಭಯೋತ್ಪಾದಕ ಪಡೆಗಳನ್ನು ಬಳಸುವುದು ಆದ್ಯತೆಯಾಗುವುದು ತೀವ್ರ ಆಘಾತಕಾರಿ ಬೆಳವಣಿಗೆ.

ವೆನೆಜುವೆಲಾದ ಒಳಕ್ಕೆ ಹಠಾತ್ ಸಶಸ್ತ್ರದಾಳಿ–ಸಿಪಿಐ(ಎಂ) ಖಂಡನೆ

ಪುಟ 2 ರಿಂದ

ಉನ್ನತ ಸೇನಾಧಿಕಾರಿಗಳು ಮತ್ತು ರಾಜಕೀಯ ಅಧಿಕಾರಿಗಳ ಮೇಲೆ ಗುರಿಯಿಟ್ಟಿದ್ದಾರೆ ಎಂಬುದನ್ನು ತೋರಿಸುತ್ತವೆ.

ಅಮೆರಿಕಾದ ಬೆಂಬಲ ಪಡೆದಿರುವ ಪ್ರತಿಪಕ್ಷದ ಮುಖಂಡ ಯುವಾನ್ ಗುವೈಡೊ ಅಮೆರಿಕಾದಲ್ಲಿ ನೆಲೆಲ ಹೊಂದಿರುವ ಖಾಸಗಿ ಭದ್ರತಾ ಏಜೆನ್ಸಿಯೊಂದಿಗೆ ಇಂತಹ ಸಶಸ್ತ್ರ ನುಸುಳಿಕೆಗಳನ್ನು ನಡೆಸಲು ಒಂದು ಕಾಂಟ್ರಾಕ್ಟ್ ಗೆ ಸಹಿ ಹಾಕಿರುವಂತೆ ಕಾಣುತ್ತದೆ. ಪ್ರಸಕ್ತ ಮಹಾಮಾರಿಯ ಸನ್ನಿವೇಶವನ್ನು ಬಳಸಿಕೊಂಡು ಹಠಾತ್ತಾಗಿ ಒಂದು ಸಶಸ್ತ್ರ ದಾಳಿಯನ್ನು ನಡೆಸುವುದು, ದೇಶದೊಳಗೆ ಅವ್ಯವಸ್ಥೆ ಉಂಟುಮಾಡುವುದು, ಮತ್ತು ಅಧ್ಯಕ್ಷ ನಿಕೊಲಸ್ ಮಡುರೊ ರವರ ಚುನಾಯಿತ ಸರಕಾರವನ್ನು ಅಸ್ಥಿರಗೊಳಿಸಿ ಅಧಿಕಾರ ಕಸಿದುಕೊಳ್ಳುವುದು ಇವರ ಯೋಜನೆಯಿದ್ದಂತೆ ಕಾಣುತ್ತದೆ.

ಅಮೆರಿಕಾ ಸಂಯುಕ್ತ ಸಂಸ್ಥಾನ ಒಂದು ದೇಶದ ಸಾರ್ವಭೌಮ ವ್ಯವಹಾರದೊಳಕ್ಕೆ ಕೈಹಾಕುತ್ತಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

ವೆನೆಜುವೆಲಾದ ಸರಕಾರ ಮತ್ತು ಭದ್ರತಾ ಪಡೆಗಳು ಅಮೆರಿಕನ್ ಸಾಮ್ರಾಜ್ಯಶಾಹಿಯನ್ನು ಎದುರಿಸಿ ನಿಂತಿವೆ, ಮತ್ತು ತಮ್ಮ ಜನಗಳ ಹಿತಗಳನ್ನು ರಕ್ಷಿಸುತ್ತಿವೆ ಎನ್ನುತ್ತ ಅವರನ್ನು ಅಭಿನಂದಿಸಿರುವ ಸಿಪಿಐ(ಎಂ), ಅಮೆರಿಕ ಸಂಯುಕ್ತ ಸಂಸ್ಥಾನ ಎಷ್ಟೇ ಆರ್ಥಿಕ ದಿಗ್ಬಂಧನಗಳನ್ನು ಹೇರಿದರೂ, ಮತ್ತು ಅಸ್ಥಿರಗೊಳಿಸುವ ಪ್ರಯತ್ನಗಳನ್ನು ನಡೆಸಿದರೂ ಅವುಗಳ ನಡುವೆಯೇ ಕೊವಿಡ್–19 ಮಹಾಮಾರಿಯನ್ನು ಯಶಸ್ವಿಯಾಗಿ ಎದುರಿಸುತ್ತಿರುವ ವೆನೆಜುವೆಲಾದ ಬೊಲಿವೇರಿಯನ್ ಗಣತಂತ್ರದ ಜನತೆ ಮತ್ತು ಅಧ್ಯಕ್ಷ ಮಡುರೊ ಅವರೊಂದಿಗೆ ತನ್ನ ಸೌಹಾರ್ದವನ್ನು ಪುನರುಚ್ಚರಿಸಿದೆ.

JANASHAKTHI KANNADA VARA PATRIKE May 11-17, 2020 Price: Rs. 10/- Date of Publication: 8 May 2020 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಕೊರೋನಾ ಹಾಗೂ "ರೊಟ್ಟಿ ಮತ್ತು ಕೋವಿ"

ವಿಠ್ಠಲ ಭಂಡಾರಿ ಕೆರೆಕೋಣ

ಕೊರೋನಾ ದಿಗ್ಬಂಧನ ಕಾರಣಕ್ಕೆ ಸಂತ್ರಸ್ತವಾದ ಕೆಲವು ಕುಟುಂಬಕ್ಕೆ ನಮ್ಮ ಕೈಲಾದ ಕಿಂಚಿತ್ ಸಹಾಯ ಮಾಡೋಣ ಎಂದು ಬೀದಿಗಿಳಿದಿದ್ದೆವು. ಆಗ ಕಂಡ ದೃಶ್ಯ ಎಂಥವರನ್ನೂ ವಿಚಲಿತಗೊಳಿಸದೆ ಇರದು. ದುಡಿಯುವ ಸ್ವಾಭಿಮಾನಿ ಕೈಗಳು ಮನೆಯಲ್ಲಿ ಕೆಲಸವಿಲ್ಲದೇ ಉಣ್ಣಲು ಅನ್ನವಿಲ್ಲದೇ ಕುಳಿತಿದೆ. ನಾವು ಕೊಟ್ಟ ಅಲ್ಪ ದಿನಸಿಯನ್ನು ಸ್ವೀಕರಿಸುವಾಗ ಅವರ ಕಣ್ಣಲ್ಲಿ ಕೃತಜ್ಞತೆ ಇತ್ತೇ? ಅಸಹಾಯಕತೆ ಇತ್ತೇ? ಭವಿಷ್ಯದ ಕುರಿತು ಭಯವಿತ್ತೇ? ಹತಾಶೆ ಇತ್ತೇ? ತಮ್ಮನ್ನು ಈ ಸ್ಥಿತಿಗೆ ಒಯ್ದವರ ಬಗ್ಗೆ ಸಿಟ್ಟಿತ್ತೇ? ಅರ್ಥವಾಗದ ಸ್ಥಿತಿ ನಮ್ಮದು. ಇಂಥ ಸಮಾಜದ ಭಾಗವಾಗಿರುವ ನಮಗಂತೂ ಅಪರಾಧಿ ಪ್ರಜ್ಞೆ ಕಾಡುತ್ತಲೇ ಇತ್ತು. ಆಕ್ಷಣ ಅನಿಸಿದ್ದು ಅವರ ಮುಂದಿನ ನಡೆ ಏನು? ಈ ಕಾಲದಲ್ಲಿ ನಮ್ಮ ಜವಾಬ್ದಾರಿ ಏನು? ಆಗಲೇ ನೆನಪಾದುದು ಬೇಂದ್ರೆಯವರ ಅನ್ನಯಜ್ಞ, ನರಬಲಿ, ಕುವೆಂಪು ಅವರ ಕಲ್ಕಿ, ಎಕ್ಕುಂಡಿಯವರ ರೊಟ್ಟಿ ಮತ್ತು ಕೋವಿ .... ಹೀಗೆ ಇವುಗಳೆಲ್ಲ ಈಗಲೂ ಪ್ರಸ್ತುತ ಆಗುತ್ತಲೇ ಇವೆ. ಈ ಕಾಲಕ್ಕೆ ಭಾಷ್ಯವನ್ನು ಬರೆದಂತೆನಿಸುತ್ತಿದೆ.

ಸುಬ್ಬಣ್ಣ ರಂಗನಾಥ ಎಕ್ಕುಂಡಿ ಯವರು ಮೂಲತಃ ರಾಣಿಬೆನ್ನೂರಿನವರು. ಉದ್ಯೋಗಕ್ಕಾಗಿ ಅವರು ನೆಲೆ ನಿಂತಿದ್ದು ಉತ್ತರ ಕನ್ನಡ ಜಿಲ್ಲೆಯ ಬಂಕಿಕೊಡ್ಲ ಗ್ರಾಮದ ಒಂದು ಶಾಲೆಯಲ್ಲಿ. ಅದಿರುವುದು ಗೋಕರ್ಣ ಹತ್ತಿರ. ಇಂತಹ ಗ್ರಾಮೀಣ ಭಾಗದಲ್ಲಿ ನೆಲೆ ನಿಂತು ಕಾವ್ಯವನ್ನು, ಬದುಕನ್ನು ಧ್ಯಾನಿಸಿದರು. ಶಾಲೆಯ ಸುತ್ತ ಜಾನಪದ ಸಾಹಿತ್ಯವನ್ನು ಒಡಲಲ್ಲಿ ತುಂಬಿಕೊಂಡ ಹಾಲಕ್ಕಿ, ಮುಕ್ರಿ, ಮೀನುಗಾರ ಸಮುದಾಯದವರು. ಅವರ ನಡುವೆ ಅಕ್ಷರದ ಮೂಲಕ ಅರಿವನ್ನು, ಕಾವ್ಯದ ಮೂಲಕ ಜಗವ ನೋಡುವ ಕಣ್ಣನ್ನು ನೀಡಿದರು.

ಇಲ್ಲಿ ಸಾಲು ಕುಳಿತ ಹೆಣ್ಣು
ಎಲ್ಲೋ ಮುಗಿಲಿನತ್ತ ಕಣ್ಣು
ಕುಳಿತರಿಲಿ ಮತ್ಸ್ಯಗಂಧಿ
ಉಟ್ಟುಕೊಂಡು ಹರಕು ಚಿಂದಿ

ಎಂದು ಮಹಾಭಾರತದ ಮತ್ಸ್ಯಗಂಧಿಯನ್ನು ತನ್ನ ಸುತ್ತಲಿನ ಬಡ ಮೀನುಗಾರ ಹೆಣ್ಣುಮಕ್ಕಳೊಂದಿಗೆ ಇಟ್ಟು ನೋಡುವ ವ್ಯಂಗ್ಯವನ್ನು ಸೂಕ್ಷ್ಮವಾಗಿ ಗುರ್ತಿಸಬೇಕು. ಶ್ರಮ ಸಂಸ್ಕೃತಿಯನ್ನು ಗೌರವಿಸುವ 'ಶರಣು' ಕವಿತೆ ಅವರ ಕಾವ್ಯದ ತಾತ್ವಿಕತೆಯನ್ನು ಅನಾವರಣ ಮಾಡುತ್ತದೆ.

'ಯೋಧ ನಡೆಯುವ ದಾರಿ ಕವಿಯ ದಾರಿಯೂ ಕೂಡ' ಎಂದು ನಂಬಿರುವ ಎಕ್ಕುಂಡಿಯವರು ಹಾವಾಡಿಗರ ಹುಡುಗ, ಮತ್ಸ್ಯಗಂಧಿ, ಬೆಳ್ಳಕ್ಕಿಗಳು, ಬಕುಲದ ಹೂವುಗಳು.. ಮುಂತಾದ ಕವನ ಸಂಕಲಗಳ ಮೂಲಕ ಪ್ರಸಿದ್ಧರಾಗಿದ್ದಾರೆ. ಸೋವಿಯತ್ ಲ್ಯಾಂಡ್ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಕೇಂದ್ರ ಸಾಹಿತ್ಯ ಪ್ರಶಸ್ತಿ ಕೂಡ ಅವರನ್ನು ಅರಸಿ ಬಂದಿವೆ.

ಹಸಿದ ಒಡಲು ತಣಿಸಿದ, ದೇಶದ ಸಂಪತ್ತನ್ನು ಸೃಷ್ಟಿಸಿ ದುಡಿವ ಕೈ ಎಂಜಲೆಲೆಯ ತೊಟ್ಟಿಗೆ ಕೈ ಹಾಕುವ, ಪ್ರೀತಿಯನ್ನು ಎದುರು ನೋಡುವ ಕೈಗಳಿಗೆ ಎದೆಯ ಕದ ತೆರೆಯದಿದ್ದಾಗ ಕೋವಿ ಗುಂಡುಗಳನ್ನು ಎತ್ತಿ ಕೊಳ್ಳುವ ಅನಿವಾರ್ಯ ಸ್ಥಿತಿಯು "ರೊಟ್ಟಿ ಮತ್ತು ಕೋವಿ" ಕವಿತೆಯಲ್ಲಿ ರೂಪು ಪಡೆದಿದೆ. ಇದು ಈ ನಾಡಿನ ಹಸಿವಿನ ಕಥನ ಕೂಡ.

ಹಸಿದ ಹಾವುಗಳಂತೆ ಎರಡೂ ಕೈಗಳು ತೊಟ್ಟಿಯೊಳಗೆ ಇಳಿದು
"ಸಿಕ್ಕ ಎಂಜಲೆಲೆಯನು ಹಿರಿದು ತೆಗೆದವು
ಎಲ್ಲಾದರೂ ಉಂಟೇ ತುಂಡು ರೊಟ್ಟಿ, ಅನ್ನದಗುಳು ...."

ಎಂದು ಕೂಳು ಅರಸುವ ಚಿತ್ರದೊಂದಿಗೆ ಕವಿತೆ ಪ್ರಾರಂಭವಾಗುತ್ತದೆ. ಎಲೆಗಳ ಬಳಿದಾಗ ಏನೇನೋ ಸಿಕ್ಕಿದವು, "ಎರಡು ಬ್ರೆಡ್ಡಿನ ತುಂಡು, ಚೆಲ್ಲಿದ ಹುಳಿಯನ್ನ ಸಿಪ್ಪೆ ಉಪ್ಪಿನ ಕಾಯಿ ಎಲ್ಲವೂ ಉಪ್ಪಿನೊಂದಿಗೆ ಕಲಸಿಹೋದ ಊಟವನ್ನು – ಮೃಷ್ಟಾನ್ನವಲ್ಲ ಎಂಜಲೂಟ – ತೊಟ್ಟಿಯ ಕಸದಿಂದ ಆಚೆಗೆ ತೆಗೆದು ತಿಂದು ಹೊಟ್ಟೆ ತಣ್ಣಗಾಗಿಸಿಕೊಳ್ಳುವ ಕೈಗಳ ಚಿತ್ರ ಮನುಕುಲದ ಅವಮಾನಿತ ಚಿತ್ರವಾಗಿ ಕಾಣುತ್ತದೆ. ಹಸಿವೆಯ ಆತ್ಯಂತಿಕ ಸ್ಥಿತಿ ಇದು.

ಎರಡು ತುಂಡು ಬ್ರೆಡ್ಡಿಗಾಗಿ, ಅಗಳು ಅನ್ನಕ್ಕಾಗಿ, ಸ್ವಾಭಿಮಾನವನ್ನೇ ಪಣಕ್ಕಿಟ್ಟ ಈ ಎರಡು ಕೈಗಳು "ಅಪರಿಚಿತ ಸೋಮಾರಿಯದಾ? ಕೆಲಸ ಮಾಡದ ಆಲಸಿಗಳದಾ? ದುಡಿಯುಲಾಗದ ರೋಗಿಗಳದಾ? ನಡೆಯಲಾರದ ವೃದ್ಧರದಾ? ...."

"ಹೌದಿವೇ ಕೈಗಳು ಬಲಿಷ್ಟ ಕಪ್ಪು .....
ಗಚ್ಚುಗಾರೆಯ ಹೊತ್ತು ಹಗಲು ಇರುಳು
ಉಪ್ಪರಿಗೆ ಬಂಗಲೆಯ ನಿಲಿಸಿಲ್ಲವೇ?



ಹೂಡಿದ ನೇಗಿಲ ಹಾಡು, ರವಕೆಯ ಹಸಿರು
ತೊಡಿಸಿದ್ದವಲ್ಲವೆ ಇವುಗಳಿಂದಲ್ಲವೆ ಸುಖದ ನೆರಳು?"

ಹೀಗೆ ಲೇಖಕರು ಆ ಕೈಗಳ ಪತ್ತೆ ಹಚ್ಚುತ್ತಾರೆ,

"ಕಪ್ಪು ಮತ್ತು ಬಲಿಷ್ಟ ಕೈಗಳ" ದುಡಿಯುವ ಜನ, ಈ ದೇಶಕ್ಕೆ ಸಂಪತ್ತು ಸೃಷ್ಟಿಸಿದ ಜನ, ರಕ್ತವನ್ನು ಬೆವರಾಗಿ ಹರಿಸಿದ ಜನ, ಒಡೆಯನ ಕಾರ್ಖಾನೆ ಜಮೀನಿನಲ್ಲಿ ಬೆಳಗ ರಾತ್ರಿಯಾಗಿಸಿದ ಜನರ, ತುತ್ತು ಅನ್ನಕ್ಕಾಗಿ ತೊಟ್ಟಿಗಿಳಿದ ಕೈಗಳು ಎನ್ನುವ ವಿಷಾಧ ನೋವು ಇಲ್ಲಿಯದು.

ಅನ್ನ ಬೆಳೆದ, ನಾಗರಿಕತೆ ಕಟ್ಟಿ ಬೆಳಸಿದ ದುಡಿಯುವ ಕೈಗಳಿಗೆ "ದುಡಿಮೆ ಎಂದರೂ ಪ್ರೀತಿ, ಚೆಲುವೆಂದರೂ ಪ್ರೀತಿ." ಈ ಹಸಿದ ಕೈಗಳೇ ಕಲೆಯನ್ನು ಸೃಷ್ಟಿಸಿದ್ದು. ಎಲ್ಲರ ಬದುಕನ್ನೂ ಸುಂದರವಾಗಿಸುವ ಪಣ ತೊಟ್ಟಿದ್ದು. ಹಾಗಾಗಿ ಲಾವಣ್ಯದ ರಂಗೋಲಿ ಬಿಡಿಸಿದ್ದು, ಬೆಳ್ಳಕ್ಕಿಗಳ ಹಿಂಡ ಬರೆದದ್ದು, ಕಿವಿಗೆ ಇಂಪಾಗುವ ಸಂತಸದ ವಾದ್ಯ ನುಡಿಸಿದ್ದು. ತನ್ನ ನೋವ ಬೇಲಿಯ ಮೀರಿ ಜಗದ ಸಂತಸಕ್ಕೆ, ಉಲ್ಲಾಸಕ್ಕೆ ದುಡಿಯಲು ಸಿದ್ಧವಾಗಿದ್ದ ಈ ಕೈಗಳೇಕೆ ಇಂದು ಎಂಜಲ ತೊಟ್ಟಿಗೆ ಇಳಿದಿವೆ ಎಂಬ ಶತಮಾನದ ಪ್ರಶ್ನೆ ಕವಿಯದ್ದು.

ಇಷ್ಟಾಗಿಯೂ ಅವರು 'ಪ್ರೀತಿ' ಗೆ ಹಂಬಲಿಸುವವರು. ಪ್ರತಿ ಎದೆಯ ತಟ್ಟಿದರೂ ಪ್ರೀತಿಯ ನೆಲೆಗಾಗಿ, ಸೆಲೆಗಾಗಿ. "ತಟ್ಟಿ ಎದೆ ಎದೆಯ ಕದವನಾದರೂ ಹಸಿದವರಿಗಿದು ತೆರೆಯಲೇ ಇಲ್ಲ" ನಿಷ್ಕರುಣಿ ಸಮಾಜ ಇದು. ತಾನು ತಿನ್ನುವ ಅನ್ನದ, ತಾನು ಪಡುವ ಸುಖದ ಮೂಲವನ್ನು ಗೌರವಿಸುವ ನೈತಿಕತೆ ಕಳೆದುಕೊಳ್ಳುವ ಜಗತ್ತು ಇದು. ತಾನು, ತನ್ನದೆಂಬ ಸ್ವಾರ್ಥದ ಬಲೆಯಲ್ಲಿ ಬಿದ್ದ ನಾಡಿನಲ್ಲಿ ಇನ್ನೆಷ್ಟು ದಿನ ತಡೆದಾರು?" ತನ್ನ ಬೆವರಿನ ಪಾಲು ಸಿಗದಿದ್ದಾಗ ಇನ್ನೆಷ್ಟು ದಿನ ಎಂಜಲೆಲೆಯ ತೊಟ್ಟಿಯಲಿ ಇಳಿದಾರು? ಅವರ ಅವಮಾನಕ್ಕೂ ಒಂದು ಮಿತಿ ಇದೆ. ಇನ್ನು ಅವರು ಎಂಜಲೆಲೆಗಾಗಿ ತೊಟ್ಟಿಗೆ ಇಳಿಯವು. ಈ ಬಲಿಷ್ಟ ಕಪ್ಪು ಕೈಗಳು "ನೇಣುಗಂಬವ (ಶಿಕ್ಷೆಯನ್ನು) ಕೂಡ ಧಿಕ್ಕರಿಸಿ ನುಗ್ಗುವವು, ಎತ್ತಿ ಕೊಳ್ಳಲು ಕೋವಿ ಗುಂಡು" ಹೌದು ಪ್ರೀತಿ ಇಲ್ಲದ ಮೇಲೆ ಹೂವು ಅರಳಲು ಸಾಧ್ಯವಿಲ್ಲ. ಸಂಘರ್ಷ ಅನಿವಾರ್ಯ. ನ್ಯಾಯ ಕೇಳಲು ಹೀಗೆ ಸಂಘರ್ಷ, ಪ್ರತಿಭಟನೆಗೆ ಎದ್ದ ದುಡಿಯುವ ಜನರ ಮೇಲೆ ಪ್ರಭುತ್ವ ಕ್ರೂರಿಯಾಗಿರುತ್ತದೆ. ಚರಿತ್ರೆಯ ತುಂಬ ಹೀಗೆ ನೇಣಿಗೆ ಕೊರಳಾದ ಕೋವಿಗೆ ಎದೆಯೊಡ್ಡಿ ಬಲಿಯಾದ ನೆನಪುಗಳೇ ಹಾಸಿಕೊಂಡಿವೆ. ಹೋರಾಟದ ಅಂತಿಮ ಪರಿಣಾಮವಾದ 'ನೇಣುಗಂಬವ ಕೂಡ ಧಿಕ್ಕರಿಸಿ' ಜನ ಚಳುವಳಿಯ ಮಾರ್ಗ ಹಿಡಿಯುವ ಸತ್ಯ ಯಾಕೆಂದರೆ ಯಾಕೆಂದರೆ "ಹಸಿದವರೂ ಕೂಡ ಬದುಕಬೇಕಲ್ಲವೆ? ಮತ್ತೆ ಪ್ರೀತಿಯೂ ಬೇಕಲ್ಲ ದುಡಿಯುವ ಜನಕೆ."

ಹಸಿದೊಡಲಿಗೆ ಅನ್ನ, ಹಂಬಲಿಸುವ ಎದೆಗೆ ಪ್ರೀತಿ, ಎರಡೂ ಹಂಚದ ಜಗತ್ತು ಮುಂದಿರುವಾಗ "ಮುಖ್ಯವಲ್ಲವೇ ಸಾವಿಗಿಂತ ಬದುಕೇ?"

ಹಾಗೆ ನೋಡಿದರೆ ಎಲ್ಲಾ ಕ್ರಾಂತಿಯ ಮೂಲ ಕಾರಣ ಹಸಿವು ಮತ್ತು ಪ್ರೀತಿಯ ಗೈರು. ರೊಟ್ಟಿ ತಟ್ಟಿ ಉಣ್ಣಿಸಿದ ಒಡಲು ಒಂದು ತುತ್ತಿಗೆ ಗತಿ ಇಲ್ಲದ ಸ್ಥಿತಿಗೆ ಬರುವುದು, ಕಲೆ ಸೃಷ್ಟಿಸಿದ ಹೃದಯ ಪ್ರೀತಿಯ ಬರ ಎದುರಿಸುವುದು, ಅನ್ನ ಮತ್ತು ಕಲೆಯನ್ನು ಸೃಷ್ಟಿಸಿದವನ ಕಣ್ಣೆದುರೇ ಅದು ಅವನಿಗೆ ಕನಸಾಗಿ ಉಳ್ಳವರ ವೈಭೋಗದ ಸಂಗತಿಯಾಗುವುದು, ಉಳ್ಳವರ ಪ್ರಭುತ್ವ ನ್ಯಾಯ ಕೇಳುವವರನ್ನು ದಂಡಿಸುವುದು ಆದರೂ ಸಾವಿನ ಭಯ ಬಿಟ್ಟು ಸಂಘರ್ಷದ ಅಂತಿಮ ಮಾರ್ಗ ಹಿಡಿಯುವ ಅನಿವಾರ್ಯತೆಯ ಚಿತ್ರವನ್ನು ಕವಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ. 'ಜಗತ್ತಿನಲ್ಲಿ ಏನೆಲ್ಲ ಸುಂದರವಾದದ್ದು, ಶಕ್ತಿಶಾಲಿಯಾದದ್ದು ಇದೆಯೋ ಅವೆಲ್ಲವೂ ಮನುಷ್ಯಜಾತಿಯ ಸಾಮೂಹಿಕ ಶ್ರಮದ ಸೃಷ್ಟಿ. ಮಾನವ ಸಮಾಜದಲ್ಲಿ ಯಾವೆಲ್ಲ ಸುಂದರವಾದುದಿದೆಯೋ ಒಳಿತಿವೆಯೋ ಮಹತ್ತರವಾದುದಿವೆಯೋ ಶಕ್ತಿಶಾಲಿಯಾದುದಿದೆಯೋ ಅವುಗಳನ್ನೆಲ್ಲ ಸೃಷ್ಟಿ ಮಾಡಿದವರು ದುಡಿಯುವ ವರ್ಗಗಳು' ಎಂದು ಇ.ಎಂ. ಎಸ್ ಹೇಳಿದ್ದನ್ನು ನೆನಪಿಸಿಕೊಳ್ಳಬಹುದು. ಆದರೆ ಅವರಿಂದು ಬೀದಿಯಲ್ಲಿ ಬಿದ್ದಿದ್ದಾರೆ.

ಕವಿತೆಯ ಮೊದಲ ಭಾಗದಲ್ಲಿ ದುಡಿಯುವ ಜನರ ವಾಸ್ತವ ಸ್ಥಿತಿಯನ್ನು, ಎರಡನೆಯ ಭಾಗದಲ್ಲಿ ದುಡಿಯುವ ಕೈಗಳಿಗಿರುವ ಹೆಮ್ಮೆಯನ್ನು ಮತ್ತು ಕೊನೆಯ ಭಾಗದಲ್ಲಿ ದುಡಿಯುವ ಕೈಗಳು ಹೋರಾಟದ ಅಸ್ತ್ರ ಹಿಡಿಯುವ ಅನಿವಾರ್ಯತೆಯನ್ನು ಕವಿ ಮನೋಜ್ಞವಾಗಿ ವಿವರಿಸುತ್ತಾರೆ. ನಾನೂ ದುಡಿಯುವ ಜನರನ್ನು ಹಸಿವಿನ ಕೂಪಕ್ಕೆ ತಳ್ಳುವ ವ್ಯವಸ್ಥೆಯ ಭಾಗ ಎನ್ನುವ ಸಣ್ಣ ಪಾಪಪ್ರಜ್ಞೆಯೂ ನಾಗರಿಕತೆ ಕಟ್ಟಿದ ಕೈಗಳನ್ನು ಗೌರವಿಸುವ ನೈತಿಕತೆಯನ್ನು ಸಮಾಜ ರೂಢಿಸಿಕೊಳ್ಳಬೇಕು ಎನ್ನುವ ಒತ್ತಾಯವನ್ನೂ ತನ್ನ ತಪ್ಪನ್ನು ತಿದ್ದಿಕೊಳ್ಳದಿದ್ದರೆ ಕ್ರಾಂತಿ ಅನಿವಾರ್ಯವಾಗುವುದರಲ್ಲಿ ಅನುಮಾನವಿಲ್ಲ ಮತ್ತು ಸಮಸಮಾಜದ ನಿರ್ಮಾಣಕ್ಕೆ ದುಡಿಯುವ ವರ್ಗ ಸಾಗಬೇಕಾದ ದಾರಿಯನ್ನು ಕವಿಗಳಿಲ್ಲಿ ಸ್ಪಷ್ಟವಾಗಿ ಹೇಳಹೊರಟಿದ್ದಾರೆ. ಬದುಕ ಪ್ರೀತಿಸುವುದೆಂದರೆ ಕ್ರಾಂತಿಗೆ ಸಿದ್ಧವಾಗುವ ಅನಿವಾರ್ಯ ಕ್ರಿಯೆ ಎನ್ನುವ ದೃಢತೆ ಕೂಡ ಕವಿತೆಯಲ್ಲಿ ಎದ್ದು ಕಾಣುತ್ತದೆ. ಕ್ರಾಂತಿಯನ್ನು ನೇರವಾಗಿ ಹೇಳದಿದ್ದರೂ ಅಂತರ್ಮುಖಿಯಾಗಿ ಹರಿದ ಭಾವ ಇದೆ. ಅಂದರೆ ನೋವು, ಆತಂಕ, ಅನುಮಾನದ ಭಾವಗಳೊಂದಿಗೆ ಭವಿಷ್ಯದ ಅನ್ವೇಷಣೆ ಕೂಡ ಇಲ್ಲಿದೆ.

ರೊಟ್ಟಿ ಮತ್ತು ಕೋವಿ

ಕವನ

ತಟ್ಟನೆ ನಿಂತು ನೋಡಿದೆ, ತೊಟ್ಟಿಯಾಚಿಂದ
ಹಸಿದ ಹಾವುಗಳಂತೆ ಇಳಿದು ಒಳಗೆ
ಎರಡು ಕೈಗಳು ; ಸಿಕ್ಕ ಎಂಜಲಿನೆಲೆಯನ್ನು
ಹಿರಿದು ತೆಗೆದವು, ಕಸದಿಂದ ಹೊರಗೆ

ತಡಮಾಡಲಿಲ್ಲ. ತಡೆದನುಮಾನಿಸಲಿಲ್ಲ.
ಎಲ್ಲಾದರೂ ಉಂಟೆ ತುಂಡು ರೊಟ್ಟಿ?
ಮತ್ತು ಅನ್ನದ ಅಗಳು? ಎಲೆಯೆಲ್ಲ ಬಳಿದಾಗ
ಏನೋ ಸಿಕ್ಕಿತು; ತಣ್ಣಗಾತು ಹೊಟ್ಟೆ.

ಎರಡು ಬ್ರೆಡ್ಡಿನ ತುಂಡು, ಚೆಲ್ಲಿದ ಹುಳಿಯನ್ನ
ಸಿಪ್ಪೆ ಉಪ್ಪಿನ ಕಾಯಿ ಕೂಡಿದುಪ್ಪು
ಎಲ್ಲಿಯೋ ಕಂಡಿದ್ದೆನಲ್ಲ ಈ ಕೈಗಳನು?
ಹೌದಿವೇ ಕೈಗಳು; ಬಲಿಷ್ಠ, ಕಪ್ಪು.

ಆಷಾಢ ಮೋಡಗಳು 'ಧೋ' ಗುಟ್ಟಿ ಸುರಿದು
ಹೊಲಗದ್ದೆಗಳು ತೊಯ್ದು ತಪ್ಪಡ್ಯಾಗಿ
ಹೂಡಿದ್ದ ನೇಗಿಲಿನ ಹಾಡು, ರವಕೆಯ ಹಸಿರು
ತೊಡೆಸಿದ್ದವಲ್ಲವೆ ತೆನೆಯು ತೂಗಿ

ಅಂದು ಕೊಂಡೆನು, ಅಲ್ಲ ಇವುಗಳೆ ಅಲ್ಲವೆ
ಗಚ್ಚುಗಾರೆಯ ಹೊತ್ತು ಹಗಲು ಇರುಳು.
ಉಪ್ಪರಿಗೆ ಬಂಗಲೆಯ ನಿಲ್ಲಿಸಿಲ್ಲವೆ? ಮ
ತ್ತೆ, ಇವುಗಳಿಂದಲ್ಲವೆ ಸುಖದ ನೆರಳು

ಹಸಿದ ಕೈಗಳಿಗೆ ದುಡಿಮೆಯೆಂದರೆ ಪ್ರೀತಿ
ಚೆಲುವೆಂದರೂ ಪ್ರೀತಿ ಕಾಣೋ ಅವಕೆ
ಹಾಗೆಂದೇ ಲಾವಣ್ಯ ವರ್ತುಲಗಳನು ಬರೆ
ವ, ಬೆಳ್ಳಕ್ಕಿಗಳ ಹಿಂಡು ಬೆರೆವ ಬಯಕೆ

ಕಣ್ಣಿಗಷ್ಟೆ ಅಲ್ಲ. ಕಿವಿಗಳೂ ಸಂತಸದ
ಹಕ್ಕಿಗಳ ಗೂಡಾಗಲೆಂದು, ನುಡಿಸಿ
ಯಾವ್ಯಾವುದೊ ವಾದ್ಯ. ಈ ಕೈಗಳಲ್ಲವೆ
ಇಂದೇಕೆ ಇಳಿದಿವೆ? ಎಂಜಲನು ಬಯಸಿ

ಹಸಿದ ಕೈಗಳಿಗೆ ಪ್ರೀತಿಯೆಂದರು ಪ್ರೀತಿ,
ಹಾಗೆಂದೆ ತಟ್ಟಿ ಎದೆ ಎದೆಯ ಕದವ
ಕಾದರೂ, ಹಸಿದವರಿಗವು ತೆರೆಯಲೆ ಇಲ್ಲ !
ಎಷ್ಟೆಂದು ತಡೆದಾರು ? ತಮ್ಮ ಹಸಿವೆ !

ಕಸದ ತೊಟ್ಟಿಗೆ ಇನ್ನು ಹಸಿದ ಕೈ ಇಳಿಯವು.
ಅಂದುಕೊಂಡೆನು ಅಂಜಿ ನೊಂದುಕೊಂಡು.
ನೇಣುಗಂಬವ ಕೂಡ ಧಿಕ್ಕರಿಸಿ ನುಗ್ಗುವರು
ಎತ್ತಿಕೊಳ್ಳಲು ಸಿಕ್ಕ ಕೋವಿ. ಗುಂಡು

ಹಸಿದವರು ಕೂಡ ಬದುಕಬೇಕಲ್ಲವೆ? ಮ
ತ್ತೆ, ಪ್ರೀತಿಯೂ ಬೇಕಲ್ಲ ದುಡಿವ ಜನಕೆ
ಎದೆಯ ಕದಗಳು ಮುಚ್ಚಿದಾಗ, ಮತ್ತಿನ್ನೇನು
ಮುಖ್ಯವಲ್ಲವೆ ಸಾವಿಗಿಂತ ಬದುಕೆ?

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**